ಸಂಪುಟ: 04 ಸಂಚಿಕೆ: 347 ಪುಟಗಳು: 08 ಶುಕ್ರವಾರ 28 ಫೆಬ್ರವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**


ಅಪಾಯದಲ್ಲಿ ಧೈರ್ಯ, ಕಷ್ಟದಲ್ಲಿ ತಾಳ್ಮೆ, ನಷ್ಟದಲ್ಲಿ ಸಹನೆ, ತೊಂದರೆಯಲ್ಲಿ ಶಾಂತಿ, ದುಃಖದಲ್ಲಿ ಸಮಾಧಾನ ಇದ್ದವರಿಗೆ, ಬಾಳಿನಲ್ಲಿ ಯಾವ ಭಯವೂ ಇಲ್ಲ.

## ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಸೂರ್ಯ-ಚಂದ್ರರಷ್ಟೇ ಗ್ಯಾರಂಟಿ

**ಮಾಜಿ ಸಿಎಂ ಬಿಎಸ್‌ವೈ ಭವಿಷ್ಯ**

• ಉದಯವಾಹಿನಿ, ಬೆಂಗಳೂರು

ಮುಂದಿನ ದಿನಗಳಲ್ಲಿ ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿ ಮತ್ತೆ ಪಕ್ಷ ಅಧಿಕಾರಕ್ಕೆ ತರುವ ಕೆಲಸ ಮಾಡಿ, ಪಕ್ಷ ಬಲಪಡಿಸ್ತೇವೆ. ಸೂರ್ಯ ಚಂದ್ರರಷ್ಟೇ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ಗ್ಯಾರಂಟಿ ಎಂದು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರು ಭವಿಷ್ಯ ನುಡಿದಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ನನಗೆ ಇವತ್ತು 82 ತುಂಬಿ 83ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ರಾಜ್ಯಾದ್ಯಂತ ಅಭಿಮಾನಿಗಳು ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರ ಮಾಡಿ ಶುಭ ಕೋರಿದ್ದಾರೆ. ಅವರೆಲ್ಲರಿಗೂ ಒಳ್ಳೇದಾಗಲಿ. ನನಗೆ ರಾಜ್ಯದಲ್ಲಿ ಅನೇಕ ಸ್ಥಾನಮಾನ ನೀಡಿ ಸಿಎಂ ಆಗಿ ಕೆಲಸ ಮಾಡುವ ಸೌಭಾಗ್ಯ ರಾಜ್ಯದ ಜನ ಕೊಟ್ಟಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.



ಪ್ರತಿ ಜಿಲ್ಲೆಯಲ್ಲೂ ಕಾರ್ಯಕರ್ತರ ಸಮಾವೇಶ ಮಾಡಿ ಅವರನ್ನು ಹುರಿದುಂಬಿಸುವ ಕೆಲಸ ಮಾಡುತ್ತೇವೆ. ಮುಂದಿನ ಚುನಾವಣೆಯಲ್ಲಿ ಈ ಭ್ರಷ್ಟ ಸರ್ಕಾರ ತೊಲಗಿಸುವ ಕೆಲಸ ಮಾಡಿ, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ತರುತ್ತೇವೆ. ಪಕ್ಷವನ್ನು ಅಧಿಕಾರಕ್ಕೆ ತರಲು ಶಕ್ತಿ ಮೀರಿ ಎಲ್ಲೂ ಕೆಲಸ ಮಾಡುವುದಾಗಿ ಶಪಥ ಮಾಡಿದರು.

ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಯಿ ಮಾತನಾಡಿ, ರಾಜ್ಯದಲ್ಲಿ ಯಡಿಯೂರಪ್ಪ ಜನಮೆಚ್ಚುಗೆ ಪಡೆದ ನಾಯಕ ಹಲವು



ಹೋರಾಟಗಳ ಮೂಲಕ ಅಧಿಕಾರಕ್ಕೆ ಬಂದರು. ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಸಮುದಾಯಗಳಿಗೂ ಕಾರ್ಯಕ್ರಮ ಕೊಟ್ಟರು ಎಂದು ಕೊಂಡಾಡಿದರು. ಕೆಳಸ್ತರವರಿಗೆ, ಬಡವರಿಗೆ, ಮಹಿಳೆಯರು, ಮಕ್ಕಳಿಗೆ, ರೈತರಿಗೆ ಕಾರ್ಯಕ್ರಮ ನೀಡಿದ್ದರಿಂದಲೇ ಜನ ಯಡಿಯೂರಪ್ಪ ಅವರ ಕಾರ್ಯಕ್ರಮಗಳನ್ನು ಬಯಸುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲ ಒಂದಾಗಿ ಮತ್ತೆ ಪಕ್ಷ ಅಧಿಕಾರಕ್ಕೆ ತರುವ ಕೆಲಸ ಮಾಡುತ್ತೇವೆ ಎಂದು ಹೇಳಿದರು. ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್ ಅಶೋಕ್ ಮಾತನಾಡಿ, ದಕ್ಷಿಣ ಭಾರತದಲ್ಲಿ ಬಿಜೆಪಿ ಕಟ್ಟಿ ಅಧಿಕಾರಕ್ಕೆ ಬರುವಂತೆ ಮಾಡಿದ್ದಾರೆ. ಮತ್ತೊಮ್ಮೆ ಅಧಿಕಾರಕ್ಕೆ ಬರಲು ಹೋರಾಟ ಆರಂಭ ಮಾಡಲಿದ್ದಾರೆ.

ಅವರ ನೇತೃತ್ವದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷ ಅಧಿಕಾರಕ್ಕೆ ತರುತ್ತೇವೆ ಎಂದರು ಬಿಜೆಪಿಯಲ್ಲಿ ಲಿಂಗಾಯತ ಸಮರ ವಿಚಾರವಾಗಿ ಪ್ರತಿಕ್ರಿಯಿಸಿದ ಶಾಸಕ ಎಸ್. ಆರ್ ವಿಶ್ವನಾಥ್ ಅವರು, ಶಾಸಕ ಯತ್ನಾಳ್‌ಗೆ ಟಾಂಗ್ ನೀಡಿದರು. ವೀರಶೈವ ಲಿಂಗಾಯತರ ನಾಯಕ ಯಾರು ಎಂದು ಮಠಾಧೀಶರು, ಸಮುದಾಯದ ಹಿರಿಯರು ತೀರ್ಮಾನ ಮಾಡಲಿದ್ದಾರೆ. ಯಾವತ್ತೂ ಲಿಂಗಾಯತರ ನಾಯಕ ಯಡಿಯೂರಪ್ಪ ಅವರೇ ಎಂದು ಸಮರ್ಥನೆ ಮಾಡಿಕೊಂಡರು.

ಯಾರೋ 40-50 ಜನರನ್ನ ಸೇರಿಸಿ ಲಿಂಗಾಯತ ನಾಯಕ ಅಂದರೆ ಆಗಲ್ಲ. ನಾನೂ ಒಕ್ಕಲಿಗ ಮುಖಂಡರನ್ನ ಸೇರಿಸಿ ನಾಯಕ ಅಂದರೆ ಆಗುತ್ತಾ. ಕುರುಬರಿಗೆ ಸಿದ್ದರಾಮಯ್ಯ ನಾಯಕ ಹೇಗೋ ಹಾಗೇ ವೀರಶೈವ ಲಿಂಗಾಯತರಿಗೆ ಯಡಿಯೂರಪ್ಪ ನಾಯಕ ಯತ್ನಾಳ್ ಸಮುದಾಯದ ಒಂದು ಭಾಗ ಅಷ್ಟೇ. ಎಂದು ಪರೋಕ್ಷವಾಗಿ ಬಸನಗೌಡ ಪಾಟೀಲ್ ಯತ್ನಾಳ್‌ಗೆ ತಿರುಗೇಟು ನೀಡಿದರು.

## ಡಿಕೆಶಿ ಕಾಂಗ್ರೇಸ್ ಸಿದ್ಧಾಂತದ ವಿರುದ್ಧ ಇದ್ರೆ ಸಸ್ಪೆಂಡ್ ಮಾಡಿ: ಜಗದೀಶ್ ಶೆಟ್ಟರ್

• ಉದಯವಾಹಿನಿ, ಹುಬ್ಬಳ್ಳಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ನಿಮ್ಮ ಪಕ್ಷದ ತತ್ವ ಸಿದ್ಧಾಂತದ ವಿರುದ್ಧ ಇದ್ದರೆ ಅವರನ್ನು ಸಸ್ಪೆಂಡ್ ಮಾಡಿಬಿಡಿ ಎಂದು ಕಾಂಗ್ರೆಸ್ಸಿಗರಿಗೆ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಟಾಂಗ್ ಕೊಟ್ಟಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಡಿಕೆ ಶಿವಕುಮಾರ್ ಕಾಂಗ್ರೇಸ್ ತತ್ವದ ವಿರುದ್ಧ ಇದ್ರೆ, ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದರು. ಕುಂಭ ಮೇಳಕ್ಕೆ ಹೋಗಿರೋದು, ಕೊಯಮತ್ತೂರಿಗೆ ಹೋಗಿರೋದು ಸಹಜ.

ಇದರಲ್ಲಿ ದೊಡ್ಡಸ್ಥಿಕೆ ಏನಿಲ್ಲ. ಇದು ಸರಿ ಆಗಲ್ಲ ಅಂದ್ರೆ, ಡಿಕೆ ಶಿವಕುಮಾರ್ ಸಸ್ಪೆಂಡ್ ಮಾಡಿ, ಅವರು ನಿಮ್ಮ ಪಕ್ಷದ ತತ್ವಸಿದ್ಧಾಂತಕ್ಕೆ ವಿರೋಧ ವಾಗಿದ್ರೆ ಅವರನ್ನು ಪಾರ್ಟಿಯಿಂದ ಹೊರಗೆ ಹಾಕಿ ಎಂದು ಹೇಳಿದರು. ಕಾಂಗ್ರೇಸ್‌ಗೆ ಹಿಂದೂಗಳ ಬಗ್ಗೆ ದ್ವೇಷ ಇದೆ, ಇದರಿಂದ ಕಾಂಗ್ರೇಸ್ ಉದ್ದಾರ ಆಗಲ್ಲ, ಹಿಂದೂಗಳು ಇಲ್ಲದೇ ನೀವು ರಾಜಕಾರಣ ಮಾಡ್ತೀನಿ ಅಂದರೆ ಅದು ನಿಮ್ಮ ಹಣೆ ಬರಹ ಹಿಂದೂಗಳನ್ನ ಕೀಳಾಗಿ ಕಾಣೋದೆ, ಅವರ ಅವನತಿಗೆ ಕಾರಣ ಎಂದು ಹೇಳಿದರು. ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ್ ಖರ್ಗೆ ಅವರ ಹೇಳಿಕೆ ಹಿಂದೂ ವಿರೋಧಿಯಾಗಿವೆ. ಈ ದೇಶ ಹಿಂದೂಗಳ ದೇಶ, ಹಿಂದೂ ರಾಷ್ಟ್ರ ಅನ್ನೋ ಪರಂಪರೆ ಇದೆ. ಇದಕ್ಕೆ ಎಲ್ಲಿ ಅಡ್ಡಿಯಾಗಬಾರದು ಎಂದರು.

## ಕೆಪಿಎಸ್‌ಸಿ ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸಿ: ವಿನಯ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗದಲ್ಲಿನ (ಕೆಪಿಎಸ್‌ಸಿ) ಭ್ರಷ್ಟ ವ್ಯವಸ್ಥೆಯಿಂದಾಗಿ ಲಕ್ಷಾಂತರ ಪದವೀಧರರು ಅವಕಾಶ ವಂಚಿತರಾಗುತಿದ್ದಾರೆ. ಪದೇ ಪದೇ ತಪ್ಪುಗಳನ್ನು ಮಾಡುವ ಮೂಲಕ ಆಯೋಗವು ರಾಜ್ಯದ ವಿದ್ಯಾವಂತ ವರ್ಗದ ವಿಶ್ವಾಸಾರ್ಹತೆ ಕಳೆದುಕೊಂಡಿದೆ ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ. ಅಸಮಾಧಾನ ವ್ಯಕ್ತಪಡಿಸಿದರು. ಅಖಿಲ ಕರ್ನಾಟಕ ವಿದ್ಯಾರ್ಥಿ, ಸಂಶೋಧಕರ ಸಂಘ ಇಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಕನ್ನಡ ಭಾಷಾಂತರ ಲೋಪಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು.

ಈ ವೇಳೆ ಸರ್ಕಾರವು ಎರಡು ದಿನಗಳ ಕಾಲಾವಕಾಶವನ್ನು ಪಡೆದು ಕೊಂಡಿತ್ತು. ಈಗ ಒಂಬತ್ತು ದಿನಗಳು ಕಳೆದರೂ ಸರ್ಕಾರ ಮೌನ ವಹಿಸಿದೆ. ಜಾಣ ಮೌನವನ್ನು ಮುರಿದು, ಸಮಸ್ಯೆ ಸರಿಪಡಿಸದಿದ್ದರೆ ರಾಜ್ಯದ ಜನರು ದಂಗೆ ಏಳಲಿದ್ದಾರೆ. ನೇಮಕಾತಿ ಸಂಬಂಧ ಮರು ಅಧಿಸೂಚನೆ ಹೊರಡಿಸಲು ಕೆಪಿಎಸ್‌ಸಿ ಕಾರ್ಯಪ್ರವೃತ್ತವಾಗಬೇಕು' ಎಂದು ಆಗ್ರಹಿಸಿದರು.


## ಗೃಹ ಸಚಿವರ ಮನೆಗೆ ಭೇಟಿಗೆ ನಿರ್ಬಂಧ ಕಡ್ಡಾಯ

• ಉದಯವಾಹಿನಿ, ಬೆಂಗಳೂರು

ಗೃಹ ಸಚಿವರ ಮನೆಗೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಭೇಟಿ ವಿಚಾರಕ್ಕೆ ಸಂಬಂಧಿಸಿದಂತೆ ಮೆಮೋ ನೀಡಲಾಗಿದೆ.

ವರ್ಗಾವಣೆ ಕೆಲಸದ ವಿಚಾರವಾಗಿ ಪೊಲೀಸರು ಗೃಹ ಸಚಿವರ ಮನೆ, ಕಚೇರಿಗೆ ಭೇಟಿ ಮಾಡುತ್ತಿದ್ದಾರೆ. ಈ ನಡುವೆ ಗೃಹ ಸಚಿವರ ಕಚೇರಿಯಿಂದ ಡಿಜಿ, ಐಜಿಪಿ ಕಚೇರಿಗೆ ಮಾಹಿತಿ ನೀಡಲಾಗಿದೆ.

ಹೀಗಾಗಿ ಪೊಲೀಸ್ ಅಧಿಕಾರಿಗಳಿಗೆ ಮೆಮೋ ನೀಡಲಾಗಿದ್ದು, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಗೃಹ ಸಚಿವರ ಮನೆಗೆ ಹೋಗುವಂತಿಲ್ಲ. ಒಂದು ವೇಳೆ ಗೃಹ ಸಚಿವರ ಮನೆ, ಕಚೇರಿಗೆ ಹೋಗಬೇಕೆಂದರೆ ಡಿಜಿ ಐಜಿಪಿ ಕಚೇರಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯ ನೋಂದಣಿ ಮಾಡಿಸಿಕೊಳ್ಳದೆ ಗೃಹ ಸಚಿವರ ಮನೆಗೆ ಹೋಗುವಂತಿಲ್ಲ ಎಂದು ಹೇಳಲಾಗಿದೆ.



1. ವಕ್ಫ್ ತಿದ್ದುಪಡಿ ಮಸೂದೆ ವರದಿಯಲ್ಲಿ 14 ಬದಲಾವಣೆಗಳಿಗೆ ಸಮ್ಮತಿ
2. ಜೆಪಿಸಿ ವರದಿಯಲ್ಲಿ ವಿಪಕ್ಷ ಸದಸ್ಯರು ಸೂಚಿಸಿದ್ದ ಬದಲಾವಣೆಗಳು
3. 14 ಬದಲಾವಣೆಗಳಿಗೆ ಅಸ್ತು ಎಂದ ಕೇಂದ್ರ ಸಚಿವ ಸಂಪುಟ
4. ಮಾ.10ರಂದು ಲೋಕಸಭೆಯಲ್ಲಿ ಮಂಡನೆ ಸಾಧ್ಯತೆ

# ವಕ್ಫ್ ಮಸೂದೆಗೆ ಕೇಂದ್ರ ಒಪ್ಪಿಗೆ

**ವಕ್ಫ್‌ಗೆ ಸಂಪುಟ ಅಸ್ತು**

- 14 ವಕ್ಫ್ ಮಸೂದೆ ಬದಲಾವಣೆಗಳಿಗೆ ಅಸ್ತು
- ಮುಂಬರುವ ಸಂಸತ್ ಅಧಿವೇಶನದಲ್ಲಿ ಮಂಡನೆ...!
- ಸಂಸತ್ತಿನಲ್ಲಿ ಮಂಡಿಸಲು ಅವಕಾಶ
- ಪ್ರಮುಖ ಬದಲಾವಣೆಗಳನ್ನು ಅನುಮೋದಿಸಿದ ಮೋದಿ ಸಂಪುಟ

• ಉದಯವಾಹಿನಿ, ಹೊಸದಿಲ್ಲಿ

ಕೇಂದ್ರ ಸಚಿವ ಸಂಪುಟವು ವಿವಾದಾತ್ಮಕ ವಕ್ಫ್ ತಿದ್ದುಪಡಿ ಮಸೂದೆಯಲ್ಲಿ 14 ಪ್ರಮುಖ ಬದಲಾವಣೆಗಳಿಗೆ ಅನುಮೋದನೆ ನೀಡಿದೆ. ಜಂಟಿ ಸನದ ಸಮಿತಿ(ಜೆಪಿಸಿ)ಯಲ್ಲಿ ವಿಪಕ್ಷ ನಾಯಕರು ಸೂಚಿಸಿದ್ದ ಒಟ್ಟು 23 ಬದಲಾವಣೆಗಳ ಪೈಕಿ,14 ಬದಲಾವಣೆಗಳಿಗೆ ಕೇಂದ್ರ ಸಚಿವ ಸಂಪುಟ ಅಸ್ತು ಎಂದಿದೆ. ಈ 14 ಬದಲಾವಣೆಗಳನ್ನು ಸೇರಿಸಿದ ವಕ್ಫ್ ತಿದ್ದುಪಡಿ ಮಸೂದೆಯನ್ನು ಇದೇ ಮಾ.10(ಸೋಮವಾರ) ರಂದು ಪುನಃ ಆರಂಭವಾಗಲಿರುವ ಸಂಸತ್ತಿನ ಅಧಿ ವೇಶನದಲ್ಲಿ ಮಂಡಿಸಲಾಗುವುದು ಎಂದು ಮೂಲಗಳು ಖಚಿತಪಡಿಸಿವೆ. ಈ ಬೆಳವಣಿಗೆಯು ವಕ್ಫ್ ಆಸ್ತಿಗಳ ನಿರ್ವಹಣೆಯನ್ನು ನಿಯಂತ್ರಿಸುವ ಕಾನೂನುಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ತರಲಿದೆ. ಇದು ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಿನ ದೀರ್ಘಕಾಲದ ಚರ್ಚೆ ಮತ್ತು ವಿವಾದವನ್ನು ತಣ್ಣಗಾಗಿಸುವ ಸಾಧ್ಯತೆ ಇದೆ. ಜೆಪಿಸಿ ಅನುಮೋದಿತ ಮಸೂದೆ ಮತ್ತು ವಿರೋಧ ಪಕ್ಷದ ಸದಸ್ಯರ ಆಕ್ಷೇಪಣೆಗಳು ಹಾಗೂ ಅಂತಿಮವಾಗಿ ಸಚಿವ ಸಂಪುಟದ ಅನುಮೋದನೆಯಂತಹ ಪ್ರಮುಖ ಘಟನಾವಳಿಗಳನ್ನು ಈ ಪ್ರಕ್ರಿಯೆಯು ಒಳ ಗೊಂಡಿದೆ.

ಜಂಟಿ ಸಂಸದೀಯ ಸಮಿತಿಯ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಕೇಂದ್ರ ಸರ್ಕಾರ ಸ್ವೀಕರಿಸಿತ್ತು. ಆದರೆ ಸಮಿತಿಯಲ್ಲಿರುವ ವಿರೋಧ ಪಕ್ಷದ ಸಂಸದರು ತಾವು ದಾಖಲಿಸಿದ ಭಿನ್ನಾಭಿಪ್ರಾಯಗಳ ಟಿಪ್ಪಣಿಗಳ ಕೆಲವು ಭಾಗಗಳುದಾಖಲೆಯಿಂದ ಕಣ್ಮರೆಯಾಗಿವೆ ಎಂದು ಆರೋಪಿಸಿದ್ದರು. ಕೇಂದ್ರ ಸರ್ಕಾರ ಈ ಆರೋಪವನ್ನು ನಿರಾಕರಿಸಿತ್ತಲ್ಲದೇ, ಜೆಪಿಸಿ ಮುಖ್ಯಸ್ಥರಾದ ಬಿಜೆಪಿಯ ಜಗದಾಂಬಿಕಾ ಪಾಲ್ ಅವರಿಗೆ ಸಮಿತಿಯ ಬಗ್ಗೆ ಅಪಪ್ರಚಾರ ಮಾಡುವ ಭಾಗಗಳನ್ನು ತೆಗೆದುಹಾಕುವ ವಿವೇಚನಾಧಿಕಾರ ಇದೆ ಎಂದು ಹೇಳಿತ್ತು.

ಆದರೆ ನಂತರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಪ್ರತಿಭಟನಾನಿರತ ವಿರೋಧ ಪಕ್ಷದ ಸಂಸದರ ನಡುವಿನ ಸಭೆಯ ಬಳಿಕ, ವಿಪಕ್ಷ ಸದಸ್ಯರ ಭಿನ್ನಾಭಿಪ್ರಾಯ ಟಿಪ್ಪಣಿಗಳನ್ನು ಅವುಗಳ ಮೂಲ ರೂಪದಲ್ಲಿ ಸೇರಿಸಲು ನಿರ್ಧರಿಸಲಾಯಿತು. ಜೆಪಿಸಿ ವರದಿ ವಿಚಾರವಾಗಿ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಡುವೆ ತೀವ್ರ ವಾಕ್ಸಮರ ನಡೆದಿತ್ತು. ಜೆಪಿಸಿ ವರದಿಯನ್ನು ಸ್ವೀಕರಿಸುವ ಮೊದಲು ಸಂಸತ್ತಿನಲ್ಲಿ ಈ ಕುರಿತು ಚರ್ಚೆ ನಡೆಸಬೇಕೆಂದು ಕಾಂಗ್ರೇಸ್ ಒತ್ತಾಯಿಸಿತ್ತು. ಆದರೆ ಸದ್ಯ ಕೇವಲ ವರದಿಯನ್ನು ಮತ್ರ ಸ್ವೀಕರಿಸಿದ್ದು, ನೈಜ ಮಸೂದೆ ಮಂಡನೆಯಾದ ಬಳಿಕ ಚರ್ಚೆಗೆ ಅವಕಾಶ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಸದ್ಯ ಜೆಪಿಸಿ ವರದಿಯಲ್ಲಿ 14 ಬದಲಾವಣೆಗಳನ್ನು ತರಲು ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ಮಸೂದೆಯ ಮೂಲ ಕರಡಿನಲ್ಲಿ ನಿರ್ದಿಷ್ಟಪಡಿಸಿದಂತೆ, ಕಡ್ಡಾಯವಾಗಿ ಇಬ್ಬರು ಮುಸ್ಲಿಮೇತರ ಸದಸ್ಯರು ನಾಮನಿರ್ದೇಶಿತ ಪದನಿಮಿತ್ತ ಸದಸ್ಯರ (ಮುಸ್ಲಿಂ ಅಥವಾ ಮುಸ್ಲಿಮೇತರ) ನಡುವೆ ವ್ಯತ್ಯಾಸವನ್ನು ಗುರುತಿಸುವುದು ಈ 14 ಬದಲಾವಣೆಗಳಲ್ಲಿ ಸೇರಿದೆ.

ಮತ್ತೊಂದು ಪ್ರಮುಖ ಬದಲಾವಣೆಯೆಂದರೆ ನಿರ್ದಿಷ್ಟ ಆಸ್ತಿ ವಕ್ಫ್‌ಗೆ ಸೇರಿದೆಯೇ ಎಂದು ನಿರ್ಧರಿಸಲು ಸಂಬಂಧಪಟ್ಟ ರಾಜ್ಯವು ನಾಮನಿರ್ದೇಶನ ಮಾಡಿದ ಅಧಿಕಾರಿಗೆ ನಿರ್ದೇಶನ ನೀಡಬಹುದಾಗಿದೆ. ಮೂಲ ಕರಡಿನಲ್ಲಿ ಈ ನಿರ್ಧಾರವನ್ನು ಜಿಲ್ಲಾಧಿಕಾರಿಗೆ ಬಿಡಲಾಗಿತ್ತು. ಒಟ್ಟಿನಲ್ಲಿ ವಕ್ಫ್ ತಿದ್ದುಪಡಿ ಮಸೂದೆ ವಿವಾದವು ಹಲವು ಹಂತಗಳನ್ನು ದಾಟುತ್ತಿದ್ದು, ಅಂತಿಮವಾಗಿ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಉದ್ಭವವಾಗಬಹುದಾದ ಪರಿಸ್ಥಿತಿಗಳ ಕುರಿತು ಇದೀಗ ಎಲ್ಲೆಡೆ ಚರ್ಚೆಗಳು ಆರಂಭವಾಗಿವೆ ಎಂದು ಹೇಳಬಹುದು.

**ಏನೆಲ್ಲ ಬದಲಾವಣೆ...?:** ವಕ್ಫ್ ಕಾಯ್ದೆಗೆ 14 ಪ್ರಮುಖ ಮಾರ್ಪಾಡುಗಳನ್ನು ಮಾಡಿ, ಸುಮಾರು 44 ತಿದ್ದುಪಡಿಗಳನ್ನು ಜಾರಿಗೆ ತರಲು ಜೆಪಿಸಿ ಸಮಿತಿಯು ಶಿಫಾರಸು ಮಾಡಿದೆ. ದೇಶದ ಯಾವುದೇ ಆಸ್ತಿ, ಜಾಗವನ್ನು ವಕ್ಫ್ ಆಸ್ತಿ ಎಂಬುದಾಗಿ ಘೋಷಿಸುವ ಪರಮಾಧಿಕಾರದ ಬದಲಾವಣೆ ಸೇರಿ ಹಲವು ಪ್ರಮುಖ ಬದಲಾವಣೆಗಳನ್ನು ಮಾಡಲಾಗುತ್ತದೆ ಎಂದು ತಿಳಿದುಬಂದಿದೆ.



### ಪ್ರಮುಖ ತಿದ್ದುಪಡಿಗಳು

ವಕ್ಫ್ (ತಿದ್ದುಪಡಿ) ಮಸೂದೆಯು ಮುಸ್ಲಿಂ ಸಮುದಾಯದಿಂದ ಧಾರ್ಮಿಕ ಮತ್ತು ದತ್ತಿ ಉದ್ದೇಶಗಳಿಗಾಗಿ ದಾನ ಮಾಡಿದ ಆಸ್ತಿಗಳನ್ನು ಮೇಲ್ವಿಚಾರಣೆ ಮಾಡುವ ವಕ್ಫ್ ಮಂಡಳಿಗಳ ಆಡಳಿತದ ಸಂಪೂರ್ಣ ಕೂಲಂಕಷ ಪರೀಕ್ಷೆ ಮಾಡುವ ಪ್ರಸ್ತಾಪ ಮತ್ತು ತಿದ್ದುಪಡಿಗೆ ಜೆಪಿಸಿ ಸಮ್ಮತಿ ನೀಡಿದೆ. ಮಸೂದೆಯ ಪ್ರಮುಖ ನಿಬಂಧನೆಗಳಲ್ಲಿ ರಾಜ್ಯ ವಕ್ಫ್ ಮಂಡಳಿಗಳಲ್ಲಿ ಕನಿಷ್ಠ ಇಬ್ಬರು ಮುಸ್ಲಿಮೇತರ ಸದಸ್ಯರನ್ನು ಸೇರಿಸುವುದು ಮತ್ತು ಆಸ್ತಿಯು ವಕ್ಫ್ ಆಸ್ತಿಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ಸರ್ಕಾರಿ ಅಧಿಕಾರಿಯಿಂದ ಮಧ್ಯಸ್ಥಿಕೆ ವಹಿಸುವುದೂ ಹೊಸ ತಿದ್ದುಪಡಿ ಮಸೂದೆಯಲ್ಲಿ ಒಳಗೊಂಡಿದೆ. 6 ತಿಂಗಳಿಗೂ ಹೆಚ್ಚು ಸಮಯದ ಚರ್ಚೆಗಳ ನಂತರ ಜ.30ರಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಜೆಪಿಸಿಯ ಅಂತಿಮ ವರದಿ ಸಲ್ಲಿಸಲಾಗಿತ್ತು. ಆ ನಂತರ ಫೆ.13 ರಂದು ಸಂಸತ್ತಿನ ಉಭಯ ಸದನಗಳಲ್ಲಿ ತಿದ್ದುಪಡಿ ವರದಿ ಮಂಡಿಸಲಾಗಿತ್ತು. ತಿದ್ದುಪಡಿ ಮಾಡಿದ ಪರಿಷ್ಕೃತ ಮಸೂದೆಯನ್ನು ಜ.29 ರಂದು ಸಮಿತಿ ಅಂಗೀಕರಿಸಿತ್ತು. ಆಡಳಿತಾರೂಢ ಎನ್‌ಡಿಎ ಸದಸ್ಯರು ಪ್ರಸ್ತಾಪಿಸಿದ 14 ತಿದ್ದುಪಡಿಗಳನ್ನು ಅನುಮೋದಿಸಲಾಗಿದ್ದರೂ, ವಿರೋಧ ಪಕ್ಷದ ಸಂಸದರು ಸೂಚಿಸಿದ ಬದಲಾವಣೆಗಳನ್ನು ತಿರಸ್ಕರಿಸಲಾಗಿತ್ತು.

### ಭೂಕಂದಾಯ ದಾಖಲೆಯಲ್ಲಿ ಇವತ್ತು ಕೂಡಾ ವಕ್ಫ್ ಹೆಸರಿನಲ್ಲಿದೆ

ದ.ಕ.ಮುಸ್ಲಿಂ ಯುವಜನ ಪರಿಷತ್ ರಾಜ್ಯ ಸಂಚಾಲಕ ನ್ಯಾಯವಾದಿ ಮತ್ತು ನೋಟರಿ ಎಂ.ಪಿ.ಅಬೂಬಕ್ಕರ್ ಅವರು ಮಾತನಾಡಿ ಭಾರತವನ್ನು ಆಳಿದ ರಾಜ ಮಹಾರಾಜರು ದೊಡ್ಡ ದೊಡ್ಡ ಶ್ರೀಮಂತರು ಹೆಚ್ಚು ಕಡಿಮೆ ಸುಮಾರು ಒಂದೂವರೆ ಲಕ್ಷ ಭೂಮಿಯನ್ನು ವಕ್ಫ್ ಗೆ ದಾನ ಮಾಡಿದ್ದರು. ಆದರೆ ನಮ್ಮಲ್ಲಿ ವಕ್ಫ್ ಕಮಿಟಿ ಸರಿಯಾದ ನಿಯಂತ್ರಣದಲ್ಲಿ ಇಲ್ಲದ ಕಾರಣ ಅದರಲ್ಲಿ ಇತ್ತೀಚೆಗೆ ಅದರಲ್ಲಿ ಹಲವಾರು ಸ್ಕೂಲ್, ಸರಕಾರಿ ಕಚೇರಿ, ದೇವಸ್ಥಾನಗಳು ಸಹಿತ ಬೇಸಾಯ ಮಾಡುತ್ತಿದ್ದಾರೆ. ಆದರೆ ಭೂಕಂದಾಯ ದಾಖಲೆಯಲ್ಲಿ ಇವತ್ತು ಕೂಡಾ ಅದು ವಕ್ಫ್ ಭೂಮಿ ಎಂದು ದಾಖಲೆ ಇದೆ.

### ಮಾ.1ಕ್ಕೆ ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ಪ್ರತಿಭಟನೆ

ಕೇಂದ್ರ ಸರಕಾರ ಜಾರಿಗೆ ತಂದಿರುವ ವಕ್ಫ್ ತಿದ್ದುಪಡಿ ಮಸೂದೆ 2024ರ ವಿರುದ್ಧ ವಕ್ಫ್ ಸಂರಕ್ಷಣಾ ಬೃಹತ್ ಪ್ರತಿಭಟನೆ ಮಾ.1ರಂದು ಬೆಳಿಗ್ಗೆ ಗಂಟೆ 10ಕ್ಕೆ ಪುತ್ತೂರು ತಾಲ್ಲೂಕು ಮಿನಿ ವಿಧಾನ ಸೌಧದ ಮುಂಭಾಗದಲ್ಲಿ ನಡೆಯಲಿದೆ ಎಂದು ಮುಸ್ಲಿಂ ಯುವಜನ ಪರಿಷತ್ ತಾಲ್ಲೂಕು ಅಧ್ಯಕ್ಷ ಅಶ್ರಫ್ ಕಲ್ಲೇಗ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ದ.ಕ.ಜಿಲ್ಲಾ ಮುಸ್ಲಿಂ ಯುವಜನ ಪರಿಷತ್ ಮತ್ತು ಪುತ್ತೂರು ತಾಲ್ಲೂಕು ಮುಸ್ಲಿಂ ಒಕ್ಕೂಟ ಇದರ ಆಶ್ರಯದಲ್ಲಿ ಈ ಪ್ರತಿಭಟನೆ ನಡೆಯಲಿದೆ ಎಂದ ಅವರು ವಕ್ಫ್ ತಿದ್ದುಪಡಿ ಮಸೂದೆಯ ಪ್ರಕಾರ ರಾಜ್ಯ ಕಂದಾಯ ಕಾನೂನುಗಳ ಅಡಿಯಲ್ಲಿ ಜಿಲ್ಲಾಧಿಕಾರಿಗಳು ವಕ್ಫ್ ಸಮೀಕ್ಷೆಗಳನ್ನು ನಡೆಸುತ್ತಾರೆ. ವಕ್ಫ್ ಆಸ್ತಿಗಳ ಇತರ ಸರಕಾರಿ ಸೊತ್ತಗಳಂತೆ ಸಾರ್ವತ್ರಿಕವಾಗಿರುತ್ತದೆ. ಕೇಂದ್ರ ಸರಕಾರವು ವಕ್ಫ್‌ಸೊತ್ತುಗಳ ಮೇಲೆ ಅಧಿಕಾರ ಚಲಾಯಿಸುತ್ತದೆ ಎಂದು ಹೇಳಿದರು.




## ತೆಲಂಗಾಣಕ್ಕೆ 1.24 ಟಿಎಂಸಿ ನೀರು ಬಿಡುಗಡೆ: ಕೈ ವಿರುದ್ಧ ಅಶೋಕ್ ವಾಗ್ದಾಳಿ

### ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರವು ದ್ರೋಹದಲ್ಲಿ ಮಲ್ಲಪ್ಪ ಶೆಟ್ಟಿ ಮತ್ತು ಮೀರ್ ಸಾದಿಕ್ ಅವರನ್ನು ಸಹ ಮೀರಿಸಿದೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ಜಲಾಶಯಗಳಿಂದ ತೆಲಂಗಾಣಕ್ಕೆ 1.24 ಟಿಎಂಸಿ ನೀರು ಬಿಡುಗಡೆ ಮಾಡಿರುವ ಕಾಂಗ್ರೇಸ್ ನೇತೃತ್ವದ ರಾಜ್ಯ ಸರ್ಕಾರವನ್ನು ಕರ್ನಾಟಕ ಬಿಜೆಪಿ ಟೀಕಿಸಿದೆ.

ವಿರೋಧ ಪಕ್ಷದ ನಾಯಕ ಆರ್ ಅಶೋಕ್, ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರವು 'ದ್ರೋಹದಲ್ಲಿ ಮಲ್ಲಪ್ಪ ಶೆಟ್ಟಿ ಮತ್ತು ಮೀರ್ ಸಾದಿಕ್ ಅವರನ್ನು ಸಹ ಮೀರಿಸಿದೆ' ಎಂದು ಹೇಳಿದ್ದಾರೆ. ಮಲ್ಲಪ್ಪ ಶೆಟ್ಟಿ, ಮೀರ್ ಸಾದಿಕ್ ಬ್ರಿಟಿಷರೊಂದಿಗೆ ಶಾಮೀಲಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿಗೆ ದ್ರೋಹ ಬಗೆದಿದ್ದರು. ಕಳೆದ ವರ್ಷ, ತೀವ್ರ ಬರಗಾಲದ ನಡುವೆಯೂ ಕಾಂಗ್ರೇಸ್ ಸರ್ಕಾರವು ತಮಿಳುನಾಡಿಗೆ ರಹಸ್ಯವಾಗಿ ಕಾವೇರಿ ನೀರನ್ನು ಬಿಡುಗಡೆ ಮಾಡಿತ್ತು. ಈಗ, ಸುಡುವ ಬೇಸಿಗೆಯನ್ನು ಪರಿಗಣಿಸದೆ, ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ತೆಲಂಗಾಣಕ್ಕೆ 1.24 ಟಿಎಂಸಿ ನೀರನ್ನು ಬಿಡುಗಡೆ ಮಾಡುತ್ತಿದೆ' ಎಂದು ಹೇಳಿದರು.



> ರಾಜ್ಯದ ರೈತರು ಮತ್ತು ಸಾಮಾನ್ಯ ಜನರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಿಂತ ನಿಮ್ಮ ರಾಜಕೀಯ ಸ್ವಾರ್ಥ ಮುಖ್ಯವೇ? ಕರ್ನಾ ಟಕದ ನೀರನ್ನು ತೆಲಂಗಾಣಕ್ಕೆ ಬಿಡಲು ನೀವು ಯಾವ ಅಧಿಕಾರದ ಮೇಲೆ ಅನುಮತಿ ನೀಡಿದ್ದೀರಿ. ಇತರ ರಾಜ್ಯಗಳಿಗೆ ನೀರು ಹರಿಸುವ ಮೂಲಕ ಕನ್ನಡಿಗರಿಗೆ ನೀರನ್ನು ನಿರಾಕರಿಸಿದ್ದಕ್ಕಾಗಿ ಈ ದೇಶದ್ರೋಹಿ ಕಾಂಗ್ರೇಸ್ ಸರ್ಕಾರಕ್ಕೆ ಸ್ವಾಭಿಮಾನಿ ಕನ್ನಡಿಗರು ಪಾಠ ಕಲಿಸಬೇಕು
>
> -ಆರ್. ಅಶೋಕ್
> ವಿರೋಧ ಪಕ್ಷದ ನಾಯಕ



### ಡಿಕೆಶಿ ಪ್ರತಿಕ್ರಿಯೆ

ನಾರಾಯಣಪುರ ಅಣೆಕಟ್ಟೆಯಿಂದ ತೆಲಂಗಾಣಕ್ಕೆ ರಾತ್ರಿಯಿಡೀ ನೀರು ಬಿಡುಗಡೆ ಮಾಡಲಾಗಿದೆ ಎಂಬ ಆರೋಪದ ಬಗ್ಗೆ ಉತ್ತರಿಸಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಶಿವಕುಮಾರ್, ಇಲ್ಲಿ ಮರೆಮಾಡಲು ಏನೂ ಇಲ್ಲ. ನದಿ ತೀರದ ರಾಜ್ಯಗಳು ಸಂಕಷ್ಟದ ಸಮಯದಲ್ಲಿ ಪರಸ್ಪರ ಸಹಾಯ ಮಾಡಿಕೊಳ್ಳುತ್ತವೆ. ಅವರು ಅನೇಕ ಸಂದರ್ಭಗಳಲ್ಲಿ ನಮಗೆ ಸಹಾಯ ಮಾಡಿದ್ದಾರೆ ಮತ್ತು ನಾವು ಸಹ ಅವರಿಗೆ ಸಹಾಯ ಮಾಡುತ್ತೇವೆ. ನೀರಾವರಿ ಸಚಿವರು ವೈಯಕ್ತಿಕವಾಗಿ ಮನವಿ ಮಾಡಿದ್ದರಿಂದ ಒಂದು ಟಿಎಂಸಿ ನೀರನ್ನು ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದರು. ತೆಲಂಗಾಣ ರಾಜ್ಯವು ರಾಜ್ಯದ ಅವಶ್ಯಕತೆಗಳಿಗೆ ಹಲವು ಬಾರಿ ಸ್ಪಂದಿಸಿದೆ. ಅವರು ನಮಗೆ ಕೃಷ್ಣಾ ನದಿಯಿಂದ ನೀರು ನೀಡಿದ್ದಾರೆ. ಇದರಲ್ಲಿ ಯಾವುದೇ ತಪ್ಪಿಲ್ಲ ಮತ್ತು ನೆರೆಯ ರಾಜ್ಯಗಳಾಗಿ ಪರಸ್ಪರ ಸಹಾಯಕ್ಕೆ ನಿಲ್ಲಬೇಕಾಗುತ್ತದೆ' ಎಂದರು.



ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೇ, ಈಗ ನೀರು ಬಿಡುಗಡೆ ಮಾಡುವುದರಿಂದ ರಾಜ್ಯಕ್ಕೆ ತೊಂದರೆ ಉಂಟಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದರೂ, ರೈತ ಸಂಘಟನೆಗಳ ವಿರೋಧದ ನಡು ವೆಯೂ, ನೀವಿನ್ನು ನಿಮ್ಮ ರಾಜಕೀಯ ಲಾಭಕ್ಕಾಗಿ ತೆಲಂಗಾಣಕ್ಕೆ ನೀರು ಬಿಡುಗಡೆ ಮಾಡುತ್ತಿದ್ದೀರಿ. ಮುಖ್ಯಮಂತ್ರಿ ಸ್ಥಾನಕ್ಕಾಗಿ ಕಾಂಗ್ರೇಸ್ ಹೈಕಮಾಂಡ್ ಅನ್ನು ಮೆಚ್ಚಿಸಲು ನೀವು ತೆಲಂಗಾಣ ಕಾಂಗ್ರೇಸ್ ನಾಯಕರೊಂದಿಗೆ ಯಾವುದೇ ರಹಸ್ಯ ಒಪ್ಪಂದಗಳನ್ನು ಮಾಡಿಕೊಂಡಿದ್ದೀರಾ?' ಎಂದು ಪ್ರಶ್ನಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,738/Gram24ct ₹8,010/Gram22ct | ಬೆಳ್ಳಿ: ₹98.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ನಾಮಧೇಯಂ ದಶಮ್ಯಾಂತು

ದ್ವಾದಶ್ಯಾಂ ವಾಸ್ಯ ಕಾರಯೇತ್.
ಮಙ್ಗಲ್ಯಂ ಬ್ರಾಹ್ಮಣಸ್ಯ ಸ್ಯಾತ್
ಶೂದ್ರಸ್ಯ ತು ಜುಗುಪ್ಸಿತಂ.

ಮನುಸ್ಮೃತಿಯ ಎರಡನೇ ಅಧ್ಯಾಯದ ಮೂವತ್ತು ಮೂವತ್ತೆರಡನೇ ಶ್ಲೋಕಗಳು. ಮಗುವಿಗೆ ಹೆಸರಿಡುವ 5 ನೇ ಸಂಸ್ಕಾರದ ವಿಧಿ. ಮಗು ಹುಟ್ಟಿದ ಹತ್ತನೇ ಅಥವಾ ಹನ್ನೆರಡನೇ ದಿನದ ಶುಭ ಸಮಯದಲ್ಲಿ ನಾಮಕರಣ ಮಾಡಬೇಕು. ಕೆಲವರು ಅನುಕೂಲವಾಗುವುದೆಂದು ಭಾವಿಸಿ ಹಲವು ತಿಂಗಳು ವರ್ಷ ಕಳೆದು ಹೆಸರಿಡುವರು. ಸರಿ ಎನಿಸದು. ಅಲ್ಲಿಯವರೆಗೆ ಕರೆಯಲೂ ಹೆಸರು ಬೇಕಲ್ಲ. ಮತ್ತೆ ಹೊಸ ಹೆಸರು ಇಟ್ಟರೆ ಮೊದಲಿನ ಹೆಸರು ಗೊಂದಲ ಮಾಡುವುದು. ಜನ್ಮನಾಮ ಕರೆಯುವ ಹೆಸರು ಎಂಬುದಾಗಿ ಎರಡೆರಡು ಹೆಸರಿಡುವುದುಂಟು. ಆದರೆ ಮನುಸ್ಮೃತಿಯಲ್ಲಿ ಈ ಬಗ್ಗೆ ಹೇಳಿಲ್ಲ. ಒಂದೇ ಹೆಸರಿಡುವುದು ಸೂಕ್ತ. ತಿಥಿ ವಾರ ನಕ್ಷತ್ರ ಮುಹೂರ್ತಗಳನ್ನು ಒಪ್ಪದವರುಂಟು. ಎಲ್ಲಾವೂ ಶುಭ ಎನ್ನುವರವರು. ತಪ್ಪಿಲ್ಲ. ಆ ಕಾಲದಲ್ಲಿ ಆಗಿನ ಹಿರಿಯರು ಒಂದು ವ್ಯವಸ್ಥೆ ಮಾಡಿದ್ದಾರೆ. ವಿರೋಧಿಸುವುದಕ್ಕಾಗಿ ವಿರೋಧ ಬೇಡ. ಹಿಂದಿನವರಿಗಿಂತಲೂ ಉತ್ತಮ ವ್ಯವಸ್ಥೆ ಮಾಡುವುದಾದಲ್ಲಿ ಸ್ವಾಗತವಿರಲಿ. ರಾತ್ರಿಗಿಂತ ಹಗಲು, ಹಗಲಿಗಿಂತ ನಸುಕಿನ ಜಾವ ಶುಭ ಎನ್ನಲು ಹಲವಾರು ಕಾರಣಗಳಿವೆ ಎಂಬುದನ್ನೂ ಮನಗಾಣಬೇಕು. ಬ್ರಾಹ್ಮಣ ಮಗುವಿನ ಹೆಸರು ಪವಿತ್ರ ಶುಭವಾಗಿರಬೇಕು, ಕ್ಷತ್ರಿಯ ಮಗುವಿನ ಹೆಸರು ಶೌರ್ಯಾರ್ಥಕವಾಗಿರಲಿ. ವೈಶ್ಯಮಗುವಿನ ಹೆಸರು ಧನಾಢ್ಯಾರ್ಥಕವಿರಲಿ. ಶೂದ್ರಮಗುವಿನ ಹೆಸರು ನಾಚಿಕೆ ನಿಂದನೆ ಅರ್ಥದಲ್ಲಿರಲಿ ಎಂದು ಇಲ್ಲಿ ಹೇಳಿದೆ. ಹೆಸರಿನಿಂದಲೇ ಜಾತಿ ಅಳೆಯುವ ಕುಯುಕ್ತಿ ಇದು. ಹುಟ್ಟಿನಿಂದ ಎಲ್ಲಾರೂ ಶೂದ್ರರು ಎಂದಾದರೆ ಎಲ್ಲಾ ಮಕ್ಕಳಿಗೂ ಒಂದೇ ರೀತಿಯ ಹೆಸರಿಡುವುದು ನ್ಯಾಯ. ಒಬ್ಬರಿಗೊಂದು ಇನ್ನೊಬ್ಬರಿಗೊಂದು ಬಗೆವುದು ಯಾವ ನ್ಯಾಯ? ಇದು ಗುಣ ಕರ್ಮದ ಆಧಾರದ ವರ್ಣವ್ಯವಸ್ಥೆಗೆ ವಿರುದ್ಧ.

## ನಮ್ಮ ಮೆಟ್ರೋಗೆ ಹೆಬ್ಬಾಳದಲ್ಲಿನ ೪೫ ಎಕರೆ ಜಮೀನು ಹಸ್ತಾಂತರ ವಿಚಾರ

• ಉದಯವಾಹಿನಿ,ಬೆಂಗಳೂರು



ನಮ್ಮ ಮೆಟ್ರೋ ರೈಲು ನಿಗಮದ ಮೂರನೇ ಹಂತದ ಮೆಟ್ರೋ ಯೋಜನೆಗೆ ಹೆಬ್ಬಾಳದಲ್ಲಿನ 45 ಎಕರೆ ಜಮೀನು ಹಸ್ತಾಂತರ ವಿಚಾರ ಕಗ್ಗಂಟಾಗಿದೆ. ಜಮೀನು ಹಸ್ತಾಂತರ ವಿಚಾರವಾಗಿ ವಿಳಂಬವಾಗುತ್ತಿದೆ. ಈ ವಿಚಾರವಾಗಿ ಫೆ. 28 ರಂದು ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಂ.ಬಿ.ಪಾಟೀಲ್ ಅವರ ನೇತೃತ್ವದಲ್ಲಿ ಬೆಂಗಳೂರು ನಗರಾಭಿವೃದ್ಧಿ ಇಲಾಖೆ, ಕೈಗಾರಿಕಾ ಪ್ರದೇಶಾಭಿವೃದ್ಧಿ



ಮಂಡಳಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಲಿದೆ. 'ಮಲ್ಟಿ ಮಾಡಲ್ ಟ್ರಾನ್ಸ್‌ಪೋರ್ಟ್ ಹಬ್' ನಿರ್ಮಿಸುವ ಬಿಎಂಆರ್‌ಸಿಎಲ್ ಯೋಜನೆ ಕೈಗೂಡುತ್ತದೆಯೆ ಇಲ್ಲವೆ ಎಂಬುದು ಈ ಸಭೆಯಲ್ಲಿ ನಿರ್ಧಾರವಾಗಲಿದೆ. ಹೆಬ್ಬಾಳದಲ್ಲಿ ಭೂಮಿ ಹಸ್ತಾಂತರ ವಿಚಾರವಾಗಿ, ಕಳೆದ ಅಕ್ಟೋಬರ್‌ನಲ್ಲಿ ಸಭೆ ನಡೆದಿತ್ತು. ಆದರೆ ಬಿಎಂಆರ್‌ಸಿಎಲ್‌ಗೆ ಭೂಮಿ ನೀಡುವ ಬಗ್ಗೆ ನಿರ್ಣಯವಾಗಿರಲಿಲ್ಲ. ಹೀಗಾಗಿ ಫೆ. 28 ರಂದು ಮತ್ತೊಂದು ಸುತ್ತಿನ ಸಭೆ ಕರೆಯಲಾಗಿದೆ. ಈ ವಿಚಾರವಾಗಿ ಚರ್ಚೆ ಜೋರಾಗಿದೆ. ಎಕ್ಸ್‌ನಲ್ಲಿ ಒತ್ತಾಯ ಕೂಡಾ ಕೇಳಿ ಬಂದಿದೆ. ಸಂಸದೆ ಶೋಭಾ ಕರಂದ್ಲಾಜೆ, ಉದ್ಯಮಿ ಮೋಹನ್‌ದಾಸ್ ಪೈ ಸೇರಿದಂತೆ ಹಲವರು ನಮ್ಮ ಮೆಟ್ರೋಗೆ ಈ ಭೂಮಿಯನ್ನು ಹಸ್ತಾಂತರ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

**ಫೆ. 28 ರಂದು ಡಿಕೆಶಿ ಸಭೆ**

**ಏನಿದು ವಿವಾದ :** ಏನಿದು ವಿವಾದ ಎಂದು ನೋಡುವುದಾದರೆ, ಹೆಬ್ಬಾಳದಲ್ಲಿ 2000 ದಲ್ಲಿ ಕೆಐಎಡಿಬಿ ಖಾಸಗಿ ಕಂಪನಿಗಾಗಿ 55 ಎಕರೆ ಭೂಸ್ವಾಧೀನ ಮಾಡಿಕೊಂಡಿತ್ತು. ಆದರೆ ಕಾರಣಾಂತರದಿಂದ ಕಂಪನಿ ಕಾಮಗಾರಿ ಆರಂಭಿಸಿರಲಿಲ್ಲ.

ಇದೇ ಏರಿಯಾದಲ್ಲಿ ನಮ್ಮ ಮೆಟ್ರೋದ ಮೂರನೇ ಹಂತದ ಮೆಟ್ರೋ ಯೋಜನೆ ಕಾಮಗಾರಿ ನಡೆಯುತ್ತಿದೆ. ಹೀಗಾಗಿ ಎಂಆರ್‌ಸಿಎಲ್ ಎಕರೆಗೆ ತಲಾ 12.10 ಕೋಟಿಯಂತೆ ಒಟ್ಟಾರೆ 551.15 ಕೋಟಿ ನೀಡುವುದಾಗಿ ಹೇಳಿ ಭೂಮಿ ನೀಡುವಂತೆ ಕೋರಿದೆ. ಇಲ್ಲಿಯೇ ಬಿಎಂಆರ್‌ಸಿಎಲ್ ಮೊದಲು 6712.97 ಚ.ಮೀ ಜಾಗವನ್ನು ಕೇಳಿತ್ತು. ಆಗ ಕೆಐಎಡಿಬಿ ನಿಗದಿ ಪಡಿಸಿದಂತೆ ಎಕರೆಗೆ 12.10ಕೋಟಿ ನೀಡಿ ಖರೀದಿ ಮಾಡಿದೆ. ಮುಂದುವರಿದು 3ನೇ ಹಂತದ ಯೋಜನೆಗೆ 45 ಎಕರೆ ಕೇಳುತ್ತಿದೆ.

## ರಾಜ್ಯ ರಾಜಕೀಯದಲ್ಲಿ ಕ್ಷಿಪ್ರ ಬೆಳವಣಿಗೆ: ಬಿವೈವಿ

### ಡಿಕೆಶಿ ಅವರು ಬಿಜೆಪಿ ಜತೆ ಹತ್ತಿರವಾಗುತ್ತಿದ್ದಾರೆ ಎಂದೆಲ್ಲಾ ಕಾಂಗ್ರೆಸ್ ಪಕ್ಷದಲ್ಲಿ ಆಕ್ಷೇಪಗಳು ವ್ಯಕ್ತವಾಗುತ್ತಿದೆ

• ಉದಯವಾಹಿನಿ,ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಒಳ ಜಗಳ ದಿನೇ ದಿನೇ ಹೆಚ್ಚಾಗುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯ ರಾಜಕೀಯದಲ್ಲಿ ಕ್ಷಿಪ್ರ ಬೆಳವಣಿಗೆಗಳು ನಡೆಯಲಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪುನರುಚ್ಚರಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಮುತ್ಸದ್ದಿ ಬಿ.ಎಸ್.ಯಡಿಯೂರಪ್ಪನವರ ಹುಟ್ಟುಹಬ್ಬದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಒಳ ಜಗಳ ಹೆಚ್ಚಾಗುತ್ತಿದೆ. ಮುಂದೆ ಕ್ಷಿಪ್ರ ರಾಜಕೀಯ ಬೆಳವಣಿಗೆಗಳು ಆಗುತ್ತವೆ ಎಂದು ನಾನು ಈ ಹಿಂದೆಯೇ ಹೇಳಿದ್ದೆ ಎಂದು ನೆನಪಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ಜತೆ ಹತ್ತಿರವಾಗುತ್ತಿದ್ದಾರೆ ಎಂದೆಲ್ಲಾ ಕಾಂಗ್ರೆಸ್ ಪಕ್ಷದಲ್ಲಿ ಆಕ್ಷೇಪಗಳು ವ್ಯಕ್ತವಾಗುತ್ತಿದೆ. ಡಿಕೆಶಿಯವರು ಬಿಜೆಪಿಗೆ ಹತ್ತಿರವಾಗುತ್ತಿದ್ದಾರಾ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊಡದೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದ ಅವರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಐತಿಹಾಸಿಕ ಕುಂಭ ಮೇಳದಲ್ಲಿ ಭಾಗವಹಿಸಿದ್ದಾರೆ. ಕುಂಭ ಮೇಳ ಯಾವುದೇ ಪಕ್ಷಕ್ಕೆ ಸೀಮಿತವಲ್ಲ. ಹಿಂದುತ್ವ, ಪ್ರಾಚೀನ



☛ ಉದಯವಾಹಿನಿ ಚಿತ್ರ

ಪರಂಪರೆ, ಸಂಸ್ಕೃತಿ ಬಗ್ಗೆ ವಿಶ್ವಾಸ ಇಟ್ಟುಕೊಂಡವರು ಕುಂಭ ಮೇಳದಲ್ಲಿ ಭಾಗವಹಿಸಿದ್ದಾರೆ ಎಂದರು. ಶಿವರಾತ್ರಿ ದಿನವಾದ ನಿನ್ನೆ ಕೊಯಮತ್ತೂರಿನ ಈಶಾ ಫೌಂಡೇಶನ್ ಧಾರ್ಮಿಕ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದರು. ಅಲ್ಲಿ ಡಿ.ಕೆ. ಶಿವಕುಮಾರ್ ಅವರು ಆಹ್ವಾನದ ಮೇರೆಗೆ ಪಾಲ್ಗೊಂಡಿದ್ದಾರೆ ಅಷ್ಟೇ ಎಂದು ಹೇಳಿ, ಈ ಬಗ್ಗೆ ಡಿ.ಕೆ.



ಶಿವಕುಮಾರ್ ಅವರೇ ಉತ್ತರ ಕೊಡಬೇಕು. ಈ ಬಗ್ಗೆ ನಾನೇನು ಹೇಳುವುದಿಲ್ಲ ಹೇಳಿದರು.

**ಸಿಎಂ ಭೇಟಿ :** ಈ ಹಿಂದೆ ಯಡಿಯೂರಪ್ಪನವರು ಯಾಗಿದ್ದಾಗ ಬೆಂಗಳೂರು ಅಭಿವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ನೀಡಿದ್ದರು. ಅವುಗಳಿಗೆಲ್ಲಾ ಈಗ ತಡೆ ಆಗುತ್ತಿದೆ. ಕ್ಷೇತ್ರಗಳಿಗೆ ಅನುದಾನ ಕೊಡುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಎಲ್ಲಾ ಬಿಜೆಪಿ ಶಾಸಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಿದ್ದೇವೆ ಎಂದು ಅವರು ಹೇಳಿದರು. ಗ್ರೇಟರ್ ಬೆಂಗಳೂರು ಯೋಜನೆಯನ್ನು ಕೈ ಬಿಟ್ಟು ಬಿಬಿಎಂಪಿ ಚುನಾವಣೆ ನಡೆಸಬೇಕು ಎಂದು ಮುಖ್ಯಮಂತ್ರಿಗಳ ಭೇಟಿ ಸಂದರ್ಭದಲ್ಲಿ ಒತ್ತಾಯಿಸಲಾಗುವುದು ಎಂದು ಅವರು ಹೇಳಿದರು.

#### ಅಭಿಮಾನಿಗಳು, ಕಾರ್ಯಕರ್ತರು ಸಂಭ್ರಮ

**ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಹುಟ್ಟುಹಬ್ಬದ ದಿನವಾದ ಇಂದು ಅವರ ಅಭಿಮಾನಿಗಳು, ಕಾರ್ಯಕರ್ತರು ಸಂಭ್ರಮದಿಂದ ನಾಡಿನ ಎಲ್ಲೆಡೆ ಹುಟ್ಟುಹಬ್ಬವನ್ನು ಆಚರಣೆ ಮಾಡುತ್ತಿದ್ದಾರೆ. ಯಡಿಯೂರಪ್ಪನವರು ಅಪ್ರತಿಮ ಹೋರಾಟಗಾರ, ಧೀಮಂತ ನಾಯಕ. ಹಾಗಾಗಿ ಎಲ್ಲೆಡೆ ಅವರ ಹುಟ್ಟಹಬ್ಬವನ್ನು ಅಭಿಮಾನಿಗಳು ಆಚರಿಸುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಹಣ್ಣು ಹಂಪುಗಳನ್ನು ಹಂಚಿದ್ದಾರೆ, ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿಸಿದ್ದಾರೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಜಾರಿ ಮಾಡಿದ ಭಾಗ್ಯಲಕ್ಷ್ಮಿ, ಬೈಸಿಕಲ್ ಯೋಜನೆಯ ಫಲಾನುಭವಿಗಳನ್ನು ನಮ್ಮ ಕಾರ್ಯಕರ್ತರು ಭೇಟಿ ಮಾಡುತ್ತಿದ್ದಾರೆ. ಯಡಿಯೂರಪ್ಪನವರ ಜನ್ಮದಿನವನ್ನು ಸರಳವಾಗಿ ಅಭಿಮಾನದಿಂದ ನಮ್ಮ ಕಾರ್ಯಕರ್ತರು ಆಚರಿಸಿದ್ದಾರೆ ಎಂದು ಹೇಳಿದರು.**

## ರಾಹುಲ್ ಗಾಂಧಿ ಕಟಾಕಟ್ ಅಂದ್ರೆ ಇವರು ಗೃಹಲಕ್ಷ್ಮಿ ಕಟ್ ಕಟ್ ಅಂತಾರೆ

• ಉದಯವಾಹಿನಿ,ಬೆಂಗಳೂರು

ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ ಯೋಜನೆಯ ಹಣ ಕೆಲವು ತಿಂಗಳುಗಳಿಂದ ಬಿಡುಗಡೆಯಾಗದಿರುವ ಬಗ್ಗೆ ಜೆಡಿಎಸ್ ನಾಯಕ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನವರು ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವ ನಿಧಿ ಸೇರಿ ಹಲವು ಯೋಜನೆಗಳ ಬಗ್ಗೆ ಮಾತು ಕೊಟ್ಟಿದ್ದರು. 2000 ಸಾವಿರ ಕೋಟಿ ರೂ. ಗೃಹ ಲಕ್ಷ್ಮಿ ಯೋಜನೆಗೆ ಮೀಸಲಿಟ್ಟು ಮಹಿಳೆಯ ಸಬಲೀಕರಣ ಮಾಡ್ತೀವಿ ಎಂದಿದ್ದರು. ಕಾಂಗ್ರೆಸ್‌ನ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಘೋಷಣೆ ಮಾಡಿದ್ದರು. ಪ್ರತಿ ತಿಂಗಳು ಹಣವನ್ನು ವರ್ಗಾವಣೆ ಮಾಡುತ್ತೇವೆ ''ಕಟಾಕಟ್'' ಎಂದು ರಾಹುಲ್ ಗಾಂಧಿ ಹೇಳಿದ್ದರು. ಆದರೆ, ಈಗ ಕಟ್ ಕಟ್ ಮಾಡಿ ಹಣ ವರ್ಗಾವಣೆ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

## ಅಕ್ರಮ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳದ ಬಿಬಿಎಂಪಿ

• ಉದಯವಾಹಿನಿ,ಬೆಂಗಳೂರು

ನಗರದಾದ್ಯಂತ ಅಕ್ರಮ ಕಟ್ಟಡಗಳನ್ನು ನಿರ್ಮಿಸುತ್ತಿರುವ ಡೆವಲಪರ್‌ಗಳ ವಿರುದ್ಧ ಕ್ರಮ ಕೈಗೊಳ್ಳದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿರುದ್ಧ ನಾಗರಿಕ ಕಾರ್ಯಕರ್ತರು ಮತ್ತು ನಿವಾಸಿಗಳು ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ಕಟ್ಟಡ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದರೂ, ಯಾವುದೇ ಅಡೆತಡೆಯಿಲ್ಲದೇ ತಮ್ಮ ಪ್ರಾಜೆಕ್ಟ್ ಪೂರ್ಣಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಅವಕಾಶ ನೀಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಸೀಗೆಹಳ್ಳಿಯಲ್ಲಿ ಅಂತಹ ಒಂದು ಪ್ರಕರಣ ಬೆಳಕಿಗೆ ಬಂದಿದ್ದು, ಜಯರಾಮ್ ನಾಯ್ಡು ಒಡೆತನದ ಕಟ್ಟಡವನ್ನು ಯಾವುದೇ ಅನುಮೋದನೆಗಳಿಲ್ಲದೆ ನಿರ್ಮಿಸಲಾಗಿದೆ ಎಂದು ಆರೋಪಿಸಲಾಗಿದೆ. ಕ್ರಮ ಕೈಗೊಳ್ಳುವ ಬದಲು, ಬಿಬಿಎಂಪಿ ಅಧಿಕಾರಿಗಳು ನಾಯ್ಡು ಅವರಿಗೆ ಅಕ್ರಮ ನಿರ್ಮಾಣವನ್ನು ಪೂರ್ಣಗೊಳಿಸಲು ಸಾಕಷ್ಟು ಸಮಯ ನೀಡಿದ್ದಾರೆ ಎಂದು ಕಾರ್ಯಕರ್ತರು ಆರೋಪಿಸಿದ್ದಾರೆ.

## ಸಹಕರಿಸದ ಪತ್ನಿಯ ಕೊಲೆ, ಪತಿ ಆತ್ಮಹತ್ಯೆ


• ಉದಯವಾಹಿನಿ,ಬೆಂಗಳೂರು

ಮೊಬೈಲ್‌ನಲ್ಲಿ ಅಶ್ಲೀಲ ವೀಡಿಯೋ ತೋರಿಸಿ, ಸಹಕರಿಸುವಂತೆ ತಾನು ಮಾಡಿದ ಒತ್ತಾಯವನ್ನು ಕೇಳದ ಪತಿಯನ್ನು ಪತಿಯೊಬ್ಬ ಹತ್ಯೆ ಮಾಡಿರುವ ಘಟನೆಯೊಂದು ಬೆಂಗಳೂರಿನ ಬ್ಯಾಡರಹಳ್ಳಿಯ ಕಾಳಿ ನಗರದಲ್ಲಿ ನಡೆದಿದೆ. ಮಮತಾ (33) ಕೊಲೆಯಾದ ದುರ್ದೈವಿ. ಸುರೇಶ್ (40) ಕೊಲೆ ಮಾಡಿ, ಆತ್ಮಹತ್ಯೆ ಮಾಡಿಕೊಂಡ ಆರೋಪಿಯಾಗಿದ್ದಾನೆ. ಸುರೇಶ್, ಮಮತಾ ದಂಪತಿ ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಸುರೇಶ್ ಕುಡಿದು ಬಂದು ಪತ್ನಿ ಜತೆ ಜಗಳ ಮಾಡುತ್ತಿದ್ದ. ಬೆಳಗ್ಗೆ ಕೂಡ ಪತಿ-ಪತ್ನಿ ಮಧ್ಯೆ ಜಗಳವಾಗಿದೆ. ಜಗಳದ ವೇಳೆ ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಸುರೇಶ್ ತುಮಕೂರಿನ ಗುಬ್ಬಿ ತಾಲ್ಲೂಕಿನ ಸಿ.ಎಸ್. ಪುರದವರು. ಪತ್ನಿ ಮಮತ ತುಮಕೂರು ಜಿಲ್ಲೆ ನಿಡುವಳ್ಳಿಯವರು. ಕಳೆದ 13 ವರ್ಷದ ಹಿಂದೆ ವಿವಾಹ ಮಾಡಿಕೊಂಡಿದ್ದು, ಇತ್ತೀಚೆಗೆ ಬೆಂಗಳೂರಿಗೆ ಕೆಲಸ ಅರಸಿ ಬಂದಿದ್ದರು. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಸುರೇಶ್ ವೃತ್ತಿಯಲ್ಲಿ ಆಟೋ ಚಾಲಕನಾಗಿದ್ದರೆ, ಹೆಂಡತಿ ಖಾಸಗಿ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸೆಕ್ಸ್ ವಿಚಾರಕ್ಕೆ ಪತ್ನಿ ಮಮತಾ ಜೊತೆಗೆ ಸುರೇಶ್ ಆಗಾಗ ಜಗಳ ಮಾಡುತ್ತಿದ್ದ ಎನ್ನಲಾಗಿದೆ. ಮೊಬೈಲ್ ಫೋನ್‌ನಲ್ಲಿ ಅಶ್ಲೀಲ ವಿಡಿಯೊ ತೋರಿಸಿ, ಅದೇ ರೀತಿ ಸಹಕರಿಸಲು ಒತ್ತಾಯ ಮಾಡುತ್ತಿದ್ದ. ಈ ಬಗ್ಗೆ ಬೇಸತ್ತಿದ್ದ ಮಮತಾ ಗಂಡನ ಕಿರುಕುಳದ ಬಗ್ಗೆ ಆಕೆಯ ತಾಯಿಯ ಬಳಿ ಹೇಳಿಕೊಂಡಿದ್ದಳು.

## ರಾಯರ ಮಠದಲ್ಲಿ ಋಗ್ವೇದ ಸಂಹಿತೆ ಹೋಮ ಮತ್ತು ಪ್ರವಚನ ಮಾಲಿಕೆ

• ಉದಯವಾಹಿನಿ,ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ 'ಕಲಿಯುಗ ಕಾಮಧೇನು' ಶ್ರೀ ರಾಘವೇಂದ್ರ ಗುರುಸಾರ್ವಭೌಮರ 404ನೇ ಪಟ್ಟಾಭಿಷೇಕ. 430ನೇ ವರ್ಧಂತಿ ಮಹೋತ್ಸವ ಪ್ರಯುಕ್ತ ಫೆ. 28ರಿಂದ ಮಾರ್ಚ್ 6ರ ವರೆಗೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಫೆ. 28, ಮಾರ್ಚ್ 1, 2ರಂದು ಋಗ್ವೇದ ಸಂಹಿತೆ ಹೋಮ ಜರುಗಲಿದ್ದು, ಈ ಹೋಮದ ಪೂರ್ಣಾಹುತಿಯು ಮಾರ್ಚ್ 3ರಂದು ಶ್ರೀಮನ್ ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ ಮಾಧವತೀರ್ಥ ಮೂಲ



ಮಠದ ತಂಬಿಹಳ್ಳಿ ಮಠದ ಶ್ರೀ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದಂಗಳವರಿಂದ ಅಮೃತ ಹಸ್ತದಿಂದ ಹೋಮದ ಪೂರ್ಣಾಹುತಿ ನಡೆಯಲಿದ್ದು, ಆ ದಿನವೇ ಶ್ರೀಗಳಿಂದ ಸಂಸ್ಥಾನ ಪೂಜೆ ಮತ್ತು ಭಿಕ್ಷೆ ನಡೆಯಲಿದೆ. ಪ್ರವಚನ ಮಾಲಿಕೆ : (ಪ್ರತಿದಿನ ಸಂಜೆ 6-30ಕ್ಕೆ) ಮಾರ್ಚ್ 1- ಶ್ರೀ ಬ್ರಹ್ಮಣ್ಯಾಚಾರ್, ಮಾರ್ಚ್ 2- ಶ್ರೀ ವೇಣುಗೋಪಾಲಾಚಾರ್ ಅಗ್ನಿಹೋತ್ರಿ, ಮಾರ್ಚ್ 3- ಶ್ರೀ ಮರುತಾಚಾರ್, ಮಾರ್ಚ್ 4- ಶ್ರೀ ಚಂದ್ರಶೇಖರಾಚಾರ್, ಮಾರ್ಚ್ 5- ಶ್ರೀ ಕಲ್ಯಾ ಶ್ರೀಕಾಂತಾಚಾರ್ ಮತ್ತು ಮಾರ್ಚ್ 6- ಶ್ರೀ ಆಯನೂರು ಮಧುಸೂದನಾಚಾರ್ ಇವರುಗಳು ರಾಯರ ಜೀವನ ಚರಿತ್ರೆ ಬಗ್ಗೆ, ರಾಯರ ಮಹಿಮೆಗಳ ಬಗ್ಗೆ ಉಪನ್ಯಾಸ ನೀಡಲಿದ್ದಾರೆ ಎಂದು ಶ್ರೀಮಠದ ಗೌರವ ಕಾರ್ಯದರ್ಶಿ ಶ್ರೀ ನರಹರಿ ರಾವ್ ತಿಳಿಸಿದ್ದಾರೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

## ಮರಾಠಿ ಪುಂಡರ ಶಾಶ್ವತವಾಗಿ ಗಡಿಪಾರಿಗೆ ಚಂದ್ರು ಒತ್ತಾಯ

• ಉದಯವಾಹಿನಿ,ಬೆಂಗಳೂರು



ಬೆಳಗಾವಿ ಸಾರಿಗೆ ಬಸ್ ನಿರ್ವಾಹಕರು ಕನ್ನಡಿಗರ ಮೇಲೆ ಮರಾಠಿ ಭಾಷಾಂಧ ಪುಂಡರು ನಡೆಸಿದ ಕುಕೃತ್ಯವು ಯಾವುದೇ ನಾಗರೀಕ ಸಮಾಜವು ಸಹಿಸಲು ಸಾಧ್ಯವಿಲ್ಲ. ಇಂತವರನ್ನು ಗುರುತಿಸಿ ರಾಜ್ಯದಿಂದ ಶಾಶ್ವತವಾಗಿ ಗಡಿಪಾರು ಮಾಡಲು ಸಿಎಂ ಸಿದ್ದರಾಮಯ್ಯ ಅಚರ ಕೂಡಲೆ ಆದೇಶ ಹೊರಡಿಸಬೇಕು ಎಂದು ಆಮ್ ಆದ್ಮಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಒತ್ತಾಯಿಸಿದ್ದಾರೆ.

ಅನೇಕ ವರ್ಷಗಳಿಂದ ತಮ್ಮ ರಾಜಕೀಯ ಅಭಿಲಾಷೆಗಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯದ ಸಾಮರಸ್ಯ ಸಂಬಂಧಕ್ಕೆ ಧಕ್ಕೆ ತರುವ ಕೃತ್ಯಗಳನ್ನು ಎಸಗಿ ರಾಜ್ಯದ ಕಾನೂನು ಸುವ್ಯವಸ್ಥೆಗೆ ಭಂಗ ತರುತ್ತಿರುವ ಈ ಸಮಾಜದ್ರೋಹಿಗಳನ್ನು ಕೂಡಲೇ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳದಿದ್ದಲ್ಲಿ ಎರಡೂ ರಾಜ್ಯಗಳಲ್ಲಿ ಶಾಂತಿಭಂಗ ವಾಗುವ ಅಪಾಯ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

**ಕೂಡಲೇ ಕಠಿಣ ಕಾನೂನು ಕ್ರಮ**

ಈ ಕೃತ್ಯಕ್ಕೆ ಸಂಬಂಧಿಸಿದಂತೆ ತಾವು ಕೂಡಲೇ ಮಹಾರಾಷ್ಟ್ರ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಬೇಕು. ಅಲ್ಲದೆ ಭಾಷಾ ಸಾಮರಸ್ಯವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಹಾಳು ಮಾಡುತ್ತಿರುವ ತಮ್ಮ ಪಕ್ಷವು ಸೇರಿದಂತೆ ಎಲ್ಲಾ ಪಕ್ಷಗಳ ನಾಯಕರುಗಳಿಗೆ ಕಠಿಣ ಎಚ್ಚರಿಕೆ ನೀಡುವ ಮೂಲಕ ಕನ್ನಡಿಗರೊಂದಿಗೆ ಸರಕಾರ ಇದೆ ಎಂಬ ಎಚ್ಚರಿಕೆಯನ್ನು ರವಾನಿಸಬೇಕೆಂದು ಒತ್ತಾಯಿಸುತ್ತಿದ್ದೇನೆ ಎಂದು ಸಿಎಂಗೆ ಪತ್ರ ಬರೆದು ಚಂದ್ರ ಹೇಳಿದ್ದಾರೆ

## ಇಡ್ಲಿ ತಿಂದರೆ ಬರಬಹುದು ಕ್ಯಾನ್ಸರ್! ಆಘಾತಕಾರಿ ವರದಿ ಬಹಿರಂಗ

• ಉದಯವಾಹಿನಿ,ಬೆಂಗಳೂರು

ಬೆಂಗಳೂರಿನ ಆಹಾರಪ್ರಿಯರಿಗೆ ಆಹಾರ ಇಲಾಖೆ ಶಾಕಿಂಗ್ ಸುದ್ದಿ ನೀಡಿದೆ. ಅದರಲ್ಲೂ, ಹೋಟೆಲ್‌ಗೆ ತೆರಳಿ ಇಡ್ಲಿ ಸವಿಯುವ ಗ್ರಾಹಕರಂತೂ ಇನ್ನು ಮುಂದೆ ಸಾಕಷ್ಟು ಎಚ್ಚರಿಕೆ ವಹಿಸಲೇಬೇಕಾಗಿದೆ. ಇದಕ್ಕೆ ಕಾರಣ, ಆಹಾರ ಇಲಾಖೆ ಪರೀಕ್ಷೆಯಲ್ಲಿ ಕಂಡುಬಂದ ಅಂಶ. ಬೆಂಗಳೂರಿನ ಅನೇಕ ಹೋಟೆಲ್‌ಗಳಲ್ಲಿ ತಯಾರಾಗುವ ಇಡ್ಲಿ ಅಸುರಕ್ಷಿತ ಎಂಬುದು ಆಹಾರ ಇಲಾಖೆಯ ಪ್ರಯೋಗದಿಂದ ದೃಢಪಟ್ಟಿದೆ. ಬೆಂಗಳೂರಿನ ವಿವಿಧೆಡೆಗಳಿಂದ ಇಡ್ಲಿ ಮಾದರಿಗಳನ್ನು ಪಡೆದಿದ್ದ ಆಹಾರ ಇಲಾಖೆ ಅವುಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿತ್ತು. ಇದೀಗ ಪ್ರಯೋಗಾಲಯ ವರದಿ ಬಂದಿದ್ದು, 35 ಕ್ಕೂ ಹೆಚ್ಚು ಇಡ್ಲಿ ಮಾದರಿಗಳು ಅಸುರಕ್ಷಿತ ಎಂಬ ಶಾಕಿಂಗ್ ವಿಚಾರ ಬೆಳಕಿಗೆ ಬಂದಿದೆ. ಇದು, ರಸ್ತೆಬದಿಯ ಇಡ್ಲಿ ಖರೀದಿಸಿ ತಿನ್ನುವ ಮೊದಲು ಎರಡು ಬಾರಿ



☛ ಉದಯವಾಹಿನಿ ಚಿತ್ರ

ಯೋಚಿಸುವಂತೆ ಮಾಡಿದೆ.

**ಇಡ್ಲಿಯಿಂದ ಕ್ಯಾನ್ಸರ್: ಹೇಗೆ ಸಾಧ್ಯ, ಕಾರಣವೇನು:** ಬೆಂಗಳೂರಿನ ಹಲವಡೆ ಇತ್ತೀಚೆಗೆ ಇಡ್ಲಿ ತಯಾರಿಸಲು ಬಟ್ಟೆಯ ಬದಲು ಪ್ಲಾಸ್ಟಿಕ್ ಕವರ್ ಬಳಕೆ ಮಾಡಲಾಗುತ್ತಿದೆ. ಇಡ್ಲಿ ಮಾಡುವಾಗ ಮಾತ್ರವಲ್ಲದೆ ಆಹಾರವನ್ನು ಬಡಿಸುವಾಗ ಮತ್ತು ಪ್ಯಾಕ್ ಮಾಡುವಾಗಲೂ ಪ್ಲಾಸ್ಟಿಕ್ ಬಳಕೆ ಮಾಡಲಾಗುತ್ತಿದೆ. ಪ್ಲಾಸ್ಟಿಕ್ ಹಾಳೆಯು ಶಾಖಕ್ಕೆ ಒಡ್ಡಿಕೊಂಡು ಹಾನಿಕಾರಕ ವಸ್ತುವನ್ನು ಹೊರಸೂಸುತ್ತಿದೆ. ಇದು ಕ್ಯಾನ್ಸರ್ ಕಾರಕವಾಗಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದರು.

#### 500ಕ್ಕೂ ಹೆಚ್ಚು ಇಡ್ಲಿ ಮಾದರಿ ಸಂಗ್ರಹ

**ತಜ್ಞರ ಎಚ್ಚರಿಕೆ ಬೆನ್ನಲ್ಲೇ ಆಹಾರ ಇಲಾಖೆ ಬೆಂಗಳೂರಿನ ಹಲವಡೆಯಿಂದ ಇಡ್ಲಿ ಮಾದರಿಗಳನ್ನು ಸಂಗ್ರಹ ಮಾಡಿದೆ. ಆಹಾರ ಹಾಗೂ ಗುಣಮಟ್ಟ ಇಲಾಖೆ ಬೆಂಗಳೂರಿನ ವಿವಿಧ ಭಾಗಗಳಲ್ಲಿ 500ಕ್ಕೂ ಹೆಚ್ಚು ಇಡ್ಲಿ ಸ್ಯಾಂಪಲ್ಸ್ ಕಲೆಕ್ಟ್ ಮಾಡಿದೆ. ಹೋಟೆಲ್ ಹಾಗೂ ತಿಂಡಿಗಳ ಅಂಗಡಿಗಳಿಂದಲೂ ಮಾದರಿ ಸಂಗ್ರಹ ಮಾಡಲಾಗಿದೆ. ಇವುಗಳಲ್ಲಿ 35 ಕ್ಕೂ ಹೆಚ್ಚು ಇಡ್ಲಿ ಸ್ಯಾಂಪಲ್ಸ್ ಅಸುರಕ್ಷಿತ ಎಂಬ ವರದಿ ಬಂದಿದೆ.**

## ಅರಮನೆ ಜಮೀನು ವಿವಾದ; ರಾಜ್ಯ ಸರ್ಕಾರದ ಸುಗ್ರೀವಾಜ್ಞೆ ಒಪ್ಪದ ಸುಪ್ರೀಂ ಕೋರ್ಟ್

• ಉದಯವಾಹಿನಿ,ಬೆಂಗಳೂರು

ಬೆಂಗಳೂರಿನ ಅರಮನೆ ಜಮೀನಿನ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಸುಗ್ರೀವಾಜ್ಞೆಯನ್ನು ಒಪ್ಪದ ಸುಪ್ರೀಂಕೋರ್ಟ್ ಟಿಡಿಆರ್ ಅನ್ನು ತನ್ನ ಸುಪರ್ದಿಗೆ ನೀಡುವಂತೆ ಹೇಳಿದೆ.10 ದಿನಗಳ ಒಳಗಾಗಿ ಸುಪ್ರೀಂಕೋರ್ಟ್‌ಗೆ ಟಿಡಿಆರ್ ಪ್ರಮಾಣಪತ್ರವನ್ನು ಸರ್ಕಾರ ನೀಡಬೇಕಾಗಿದೆ. ಬಳ್ಳಾರಿ ರಸ್ತೆ ಹಾಗೂ ಜಯಮಹಲ್ ರಸ್ತೆ ಅಗಲೀಕರಣಕ್ಕಾಗಿ ಬೆಂಗಳೂರು ಅರಮನೆ ಮೈದಾನದ 15.7 ಎಕರೆ ಜಾಗ ಬಳಕೆಗೆ ಬರೋಬ್ಬರಿ 3400 ಕೋಟಿ ರೂ. ಮೊತ್ತದ ಟಿಡಿಆರ್ ಪರಿಹಾರ ನೀಡಲು ನ್ಯಾಯಾಲಯ ಆದೇಶ ನೀಡಿತ್ತು. ಇಷ್ಟು ಮೊತ್ತದ ಪರಿಹಾರ ನೀಡಿದರೆ ಸರ್ಕಾರಕ್ಕೆ ಹೊರೆ ಆಗಲಿದೆ ಎಂಬ ಕಾರಣಕ್ಕೆ ಜ.23ರಂದು ತುರ್ತು ಸಚಿವ ಸಂಪುಟ ಸಭೆ ನಡೆಸಿದ್ದ ರಾಜ್ಯ ಸರ್ಕಾರ ರಸ್ತೆ ಅಗಲೀಕರಣ ಪ್ರಸ್ತಾಪವನ್ನೇ ಕೈಬಿಟ್ಟು



ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿತ್ತು. ಕಳೆದ ವಾರ ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಪ್ರಕರಣದ ವಿಚಾರಣೆ ವೇಳೆ ರಾಜ್ಯ ಸರ್ಕಾರವು ಸುಗ್ರೀವಾಜ್ಞೆ ನಿರ್ಣಯವನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಿ ರಸ್ತೆ ಅಗಲೀಕರಣ ಪ್ರಸ್ತಾವನೆ ಕೈಬಿಟ್ಟಿದ್ದೇವೆ.

ಹೀಗಾಗಿ 3400 ಕೋಟಿ ಟಿಡಿಆರ್ ಪರಿಹಾರ ನೀಡುವುದಿಲ್ಲ ಎಂದು ಸರ್ಕಾರ ಹೇಳಿತ್ತು. ಆದರೆ, ಇದನ್ನು ಪುರಸ್ಕರಿಸದ ಸುಪ್ರೀಂ ಕೋರ್ಟ್ 3400 ಕೋಟಿ ಟಿಡಿಆರ್ ಪರಿಹಾರ ನೀಡುವಂತೆ ನ್ಯಾಯಾಲಯ ಈಗಾಗಲೇ ಆದೇಶ ನೀಡಿದೆ.

ಈ ಬಗ್ಗೆ ಯಾವುದೇ ಚರ್ಚೆ ಇಲ್ಲ ಎಂದು ಸ್ಪಷ್ಟಪಡಿಸಿತ್ತು.

ಆದರೆ, ಟಿಡಿಆರ್ ನೀಡಿದರೂ ಅದು ಬಳಕೆಯಾದಂತೆ ನೋಡಿಕೊಂಡ ಸರ್ಕಾರದ ಪರ ವಕೀಲರು ರಾಜ ಮನೆತನದವರಿಗೆ ನೀಡಬೇಕಿದ್ದ ಟಿಡಿಆರ್ ನ್ಯಾಯಾಲಯಕ್ಕೆ ಹಸ್ತಾಂತರವಾಗುವಂತೆ ನೋಡಿಕೊಂಡಿದ್ದಾರೆ. ರಾಜ ಮನೆತನದವರಿಗೆ ನೀಡಬೇಕಿದ್ದ 3,400 ಕೋಟಿಯ ಟಿಡಿಆರ್ ನ್ಯಾಯಾಲಯದ ಅಧಿಕಾರ ದಲ್ಲಿ ಇರಲಿದೆ.

ಇದರಿಂದ ಟಿಡಿಆರ್ ಬಳಕೆ ಆಗಬಹುದು ಎನ್ನುವ ಆತಂಕದಿಂದ ಸರ್ಕಾರ ನಿರಾಳವಾಗಿದೆ. ಇತ್ತ ಟಿಡಿಆರ್ ನೀಡಲು ಸೂಚಿಸಿದ್ದ ನ್ಯಾಯಾಲಯಕ್ಕೆ ಖಿಆಖ ನೀಡುವ ಮೂಲಕ ನ್ಯಾಯಾಂಗ ನಿಂದನೆಯಿಂದಲೂ ಸಿದ್ದರಾಮಯ್ಯ ಸರ್ಕಾರ ಪಾರಾಗುವ ಮೂಲಕ ತಾತ್ಕಾಲಿಕವಾಗಿ ನಿರಾಳವಾಗಿದೆ. ಬಾಕಿ ಉಳಿದ ಇನ್ನೊಂದು ಟಿಡಿಆರ್ ಜಮೀನು ಮಾಲೀಕರಿಗೆ ನೀಡಲು ಒಪ್ಪಿಗೆ ನೀಡಿದೆ. 49 ಕೋಟಿ ಟಿಡಿಆರ್ ಅನ್ನು ಜಮೀನು ಮಾಲೀಕರಿಗೆ ನೀಡಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಹೀಗಾಗಿ ಟಿಡಿಆರ್ ಸಂಕಷ್ಟಕ್ಕೆ ತಾತ್ಕಾಲಿಕ ಪರಿಹಾರ ಕಂಡುಕೊಂಡ ಸರ್ಕಾರ ಕೊಂಚ ನಿರಾಳವಾಗಿದೆ.

## ಸಲಹೆ ಕೊಡಲಿ, ಟೀಕೆ ಬಿಡಲಿ

• ಉದಯವಾಹಿನಿ,ಬೆಂಗಳೂರು

ಉದ್ಯಮಿ ಮೋಹನದಾಸ್ ಪೈ ಅವರು ಬೆಂಗಳೂರು ನಗರದ ವ್ಯವಸ್ಥೆ ಸುಧಾರಣೆಗೆ ಸಲಹೆ ಕೊಡಲಿ, ಆದರೆ ವಿನಾ ಕಾರಣ ಟೀಕಿಸುವುದನ್ನು ಬಿಡಲಿ. ಪದೇ ಪದೇ ಹೀಗೆ ಮಾತನಾಡುತ್ತಿರುವ ಅವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಕುಟುಕಿದ್ದಾರೆ. ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪೈ ಕೂಡ ಬೆಂಗಳೂರಿನಿಂದಲೇ ಲಾಭ ಮಾಡಿಕೊಂಡಿರುವವರು. ಇಲ್ಲಿಂದಲೇ ಎಲ್ಲಾವನ್ನೂ ಪಡೆದುಕೊಂಡಿರುವವರು. ಈಗ ಅವರು ಇಲ್ಲಿಂದ ಹುಬ್ಬಳ್ಳಿಗಾಗಲಿ, ಮೈಸೂರಿಗಾಗಲಿ ಹೋಗಲು ತಯಾರಿಲ್ಲ' ಎಂದು ಹರಿಹಾಯ್ದಿದ್ದಾರೆ. ಸಂಚಾರ ದಟ್ಟಣೆ ಬರೀ ಬೆಂಗಳೂರಿನ ಸಮಸ್ಯೆಯಲ್ಲ. ಲಂಡನ್, ಸ್ಯಾನ್ ಫ್ರಾನ್ಸಿಸ್ಕೊ, ಚೆನ್ನೈ ಎಲ್ಲಾ ಕಡೆಗಳಲ್ಲೂ ಇದೆ. ಈ ಬಗ್ಗೆ ಪೈ ಯಾಕೆ ಮಾತನಾಡುವುದಿಲ್ಲ ಲಂಡನ್ನಿನಲ್ಲಿ ನಾನೇ ಒಂದೂವರೆ ಮೈಲುದ್ದದ ಟ್ರಾಫಿಕ್ ಜಾಮ್ ನಲ್ಲಿ ಸಿಲುಕಿದ್ದೆ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಹದಿನೈದಿಪ್ಪತ್ತು ಮೈಲಿ ಸಂಚಾರ ದಟ್ಟಣೆ ಸೃಷ್ಟಿಯಾಗಿದ್ದಿದೆ ಎಂದು ಅವರು ಉತ್ತರಿಸಿದ್ದಾರೆ.

## ಡಿಕೆಶಿ ನಡವಳಿಕೆಯಿಂದ ಕಾಂಗ್ರೆಸ್ಸಿಗರಿಗೆ ಫುಲ್ ಕನ್‌ಫ್ಯೂಶನ್..!

### ಡಿಕೆಶಿ , ತಾವು ಹುಟ್ಟಿನಿಂದ ಹಿಂದೂವಾಗಿದ್ದು, ಹಿಂದೂವಾಗಿಯೇ ಉಳಿಯುತ್ತೇನೆ ಇಶಾ ಫೌಂಡೇಷನ್ ಕಾರ್ಯಕ್ರಮ

• ಉದಯವಾಹಿನಿ,ಬೆಂಗಳೂರು

ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡವಳಿಕೆ ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ ಬಿಸಿ ತುಪ್ಪವಾಗಿದ್ದು, ನಾಯಕತ್ವ ಬದಲಾವಣೆಯ ಕೂಗಿನ ಸಂದರ್ಭದಲ್ಲಿ ವಿರೋಧಿ ಗುಂಪಿನ ಬಾಯಿ ಬಂದ್ ಮಾಡುವಂತಾಗಿದೆ.

ಮಹಾಶಿವರಾತ್ರಿ ಅಂಗವಾಗಿ ನಿನ್ನೆ ತಮಿಳುನಾಡಿನ ಕೊಯಮತ್ತೂರಿನ ಈಶಾ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಡಿ.ಕೆ.ಶಿವಕುಮಾರ್ ವೇದಿಕೆ ಹಂಚಿಕೊಂಡಿದ್ದಾರೆ. ಇದು ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ. ತಮಿಳುನಾಡಿಗೆ ತೆರಳುವ ಮುನ್ನಾ ಪತ್ರಿಕಾಗೋಷ್ಠಿ ನಡೆಸಿದ್ದ ಡಿಕೆಶಿ ತಾವು ಹುಟ್ಟಿನಿಂದ ಹಿಂದೂವಾಗಿದ್ದು, ಹಿಂದೂವಾಗಿಯೇ ಉಳಿಯುತ್ತೇನೆ. ಇಶಾ ಫೌಂಡೇಷನ್ ಕಾರ್ಯಕ್ರಮದಲ್ಲಿ ಇನ್ನೂ ಭಾಗವಹಿಸಿಲ್ಲ, ಅಮಿತ್ ಶಾರನ್ನು ಭೇಟಿಯಾಗಿಲ್ಲ. ಆಗಲೇ ನನ್ನನ್ನು ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ ಎಂದು ಬಿಂಬಿಸುತ್ತಿರುವುದು ಸರಿಯಲ್ಲ ಎಂದಿದ್ದರು. ನಿನ್ನೆ ಸಂಜೆ ಅಮಿತ್‌ರೊಂದಿಗೆ ಡಿ.ಕೆ.ಶಿವಕುಮಾರ್ ವೇದಿಕೆ ಹಂಚಿಕೊಂಡ ಬಳಿಕವಂತೂ ಸಾಮಾಜಿಕ ಜಾಲತಾಣದಲ್ಲಿ ಸಂಚಲನವೇ ಸೃಷ್ಟಿಯಾಗಿದೆ.



☛ ಉದಯವಾಹಿನಿ ಚಿತ್ರ

**ಸಿಎಂ ಬಣದ ಸಚಿವರು ತಮ್ಮ ವಿರುದ್ಧ ಷಡ್ಯಂತ್ರ**

ಡಿಕೆಶಿ ಬಿಜೆಪಿಯತ್ತ ಮುಖ ಮಾಡಿದ್ದಾರೆ ಎಂಬರ್ಥದ ಸಂದೇಶಗಳ ಮಹಾಪೂರವೇ ಹರಿದು ಬರುತ್ತಿದೆ. ಜೈಲಿಗೆ ಹೋಗಬೇಕಾದ ಸಂದರ್ಭದಲ್ಲೂ ಡಿಕೆಶಿ ಪಕ್ಷನಿಷ್ಠೆ ಬದಲಿಸದೆ ಕಾಂಗ್ರೆಸಿಗರಾಗಿ ಉಳಿದುಕೊಂಡಿದ್ದರು ಎಂಬ ಅಭಿಮಾನ ಪಕ್ಷದ ಕಾರ್ಯಕರ್ತರಲ್ಲಿ ಈಗಲೂ ಬಲವಾಗಿ ಬೇರೂರಿದೆ. ಅಂತಹ ಡಿಕೆಶಿ ಈಗ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲ, ಸಿದ್ದರಾಮಯ್ಯ ಬಣದ ಸಚಿವರು ತಮ ವಿರುದ್ಧ ಷಡ್ಯಂತ್ರ ನಡೆಸಿದ್ದಾರೆ, ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಹುನ್ನಾರಗಳಾಗುತ್ತಿವೆ ಎಂಬ ಕಾರಣಗಳಿಗೆ ಬಿಜೆಪಿ ಸೇರುತ್ತಾರೆಯೇ ಎಂಬ ಪ್ರಶ್ನೆಗಳು ಉದ್ಭವಿಸಿವೆ. ಡಿಕೆಶಿ ತಾವು ಈ ಅವಧಿಯಲ್ಲಿ ಮುಖ್ಯಮಂತ್ರಿ ಹುದ್ದೆಗೆ ಆಸೆ ಪಡುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸ್ವಸಾಮರ್ಥ್ಯದ ಮೇಲೆ ಅಧಿಕಾರಕ್ಕೆ ತರುತ್ತೇನೆ. ಅದಕ್ಕಾಗಿ ನನ್ನ ನೇತೃತ್ವದಲ್ಲೇ ಚುನಾವಣೆ ನಡೆಯಲಿದೆ. ಮುಂದಿನ ಅವಧಿಗೆ ನಾನು ಮುಖ್ಯಮಂತ್ರಿಯಾಗುತ್ತೇನೆ ಎಂಬ ಸಂದೇಶವನ್ನು ಆಪ್ತ ಬಳಗಕ್ಕೆ ನೀಡುತ್ತಿದ್ದಾರೆ. ಅದರ ಹೊರತಾಗಿಯೂ ಬಿಜೆಪಿ ನಾಯಕರ ಜೊತೆ ಡಿ.ಕೆ.ಶಿವಕುಮಾರ್ ಕಾಣಿಸಿಕೊಳ್ಳುತ್ತಿರುವುದು ಕಾಂಗ್ರೆಸ್ ಪಾಲಿಗೆ ಬಿಸಿ ತುಪ್ಪವಾಗಿದೆ. ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ಬಿಜೆಪಿ ನಾಯಕರು, ರಾಜ್ಯ ರಾಜಕಾರಣದಲ್ಲಿ ಮುಂದಿನ ದಿನಗಳಲ್ಲಿ ಸಂಚಲನವಾಗಲಿದೆ ಕಾದು ನೋಡುತ್ತಿರಿ ಎನ್ನುತ್ತಿದ್ದಾರೆ. ಮೊದಲಿನಿಂದಲೂ ಕಾಂಗ್ರೆಸ್ ಪಕ್ಷ ದಲಿತ, ಅಲ್ಪಸಂಖ್ಯಾತ ಮತಬ್ಯಾಂಕ್ ಅನ್ನು ನಂಬಿಕೊಂಡು ರಾಜಕಾರಣ ಮಾಡುತ್ತಿದೆ. ಬಿಜೆಪಿ ಕಠೋರ ಹಿಂದುತ್ವದ ಪ್ರತಿಪಾದನೆ ಮಾಡುವುದರಿಂದ ಅಲ್ಪಸಂಖ್ಯಾತ ಮತಗಳನ್ನು ಬಹುತೇಕ ಕಳೆದುಕೊಂಡಿದೆ. ಅವು ಕಾಂಗ್ರೆಸ್ ಮಡಿಲಿನಲ್ಲಿವೆ. ಕಾಂಗ್ರೆಸ್ ಕೂಡ ಹಿಂದುತ್ವದ ಮೊರೆ ಹೋದರೆ ಅಲ್ಪಸಂಖ್ಯಾತ ಮತಗಳು ಛಿದ್ರವಾಗಲಿವೆ ಎಂಬ ಅಳುಕಿನಿಂದ ಬಹುತೇಕ ನಾಯಕರು ತಮ ಧಾರ್ಮಿಕ ಆಚರಣೆಗಳನ್ನು ಮನೆಗೆ ಅಥವಾ ದೇವಸ್ಥಾನಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಡಿಕೆಶಿ ಬಹಿರಂಗವಾಗಿ ತಾನು ಹಿಂದು, ನನ್ನ ಆಚರಣೆಗಳು ನನ್ನವು ಎಂದು ಹೇಳುತ್ತಲೇ ಕಾಂಗ್ರೆಸ್ ನಾಯಕರಿಗೆ ಸಡ್ಡು ಹೊಡೆದಿದ್ದಾರೆ. ಲೋಕಸಭೆ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಚುನಾವಣೆ ಸಂದರ್ಭದಲ್ಲಿ ದೇವಸ್ಥಾನ, ಚರ್ಚ್ ಹಾಗೂ ದರ್ಗಾಗಳಿಗೆ ಭೇಟಿ ನೀಡಿ, ಅಲ್ಲಿನ ಆಚರಣೆಗಳನ್ನು ಗೋಚರವಾಗುವಂತೆ ಪಾಲನೆ ಮಾಡುತ್ತಾರೆ. ಉಳಿದಂತೆ ಮಲ್ಲಿಕಾರ್ಜುನ ಖರ್ಗೆ ಹಾಗೂ ಇತರ ಬಹುತೇಕ ನಾಯಕರು ಚುನಾವಣೆ ಸಂದರ್ಭದಲ್ಲೂ ದೇವಸ್ಥಾನಗಳತ್ತ ಮುಖ ಮಾಡುವುದಿಲ್ಲ. ಆದರೆ ಡಿ.ಕೆ. ಶಿವಕುಮಾರ್ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ನಾನು ಎಲ್ಲಾ ಧರ್ಮಗಳ ಅಭಿಮಾನಿ ಎನ್ನುತ್ತಿದ್ದಾರೆ.

**ಈ ಮೊದಲು ಡಿಕೆಶಿ ಹೈಕಮಾಂಡ್ ನಾಯಕರಿಗೆ ಮಾಹಿತಿ ನೀಡದೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು ಎನ್ನಲಾಗುತ್ತಿದೆ. ಆದರೆ ಮೂಲಗಳ ಪ್ರಕಾರ ಎಐಸಿಸಿ ನಾಯಕರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದ ಬಳಿಕವೇ ಪ್ರಧಾನಿ ಭೇಟಿ ಮಾಡಿದರು ಎಂದು ತಿಳಿದು ಬಂದಿದೆ.**

**ಗಂಗಾನದಿಯಲ್ಲಿ ಮುಳುಗಿದರೆ ದೇಶದ ಬಡತನ ಕಡಿಮೆಯಾಗುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ನೀಡಿದ ಬಳಿಕವೂ ಡಿ.ಕೆ.ಶಿವಕುಮಾರ್ ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಿದರು. ಈ ರೀತಿಯ ಪ್ರಸಂಗಗಳನ್ನು ಮುಂದಿಟ್ಟುಕೊಂಡು ಡಿಕೆಶಿ ಪಕ್ಷ ಬದಲಾವಣೆಯಾಗಬಹುದು ಎಂಬ ಚರ್ಚೆಯಾಗುತ್ತಿದೆ.**


# ದುಪ್ಪಟ್ಟು ಲಾಭದ ಆಮಿಷ: 17 ಲಕ್ಷ ವಂಚನೆ

• ಉದಯವಾಹಿನಿ ತುಮಕೂರು

21 ಹೂಡಿಕೆ ಮಾಡಿದರೆ 12 ಲಾಭ ಪಡೆಯಬಹುದು. 21 ಸಾವಿರ ವರ್ಗಾಯಿಸಿ 22 ಸಾವಿರ ಗಳಿಸಬಹುದು' ಎಂಬ ಆಮಿಷಕ್ಕೆ ಒಳಗಾಗಿ ಯಾದವ ನಗರದ ಎಂಜಿನಿಯರ್ ಎನ್.ಕಾರ್ತಿಕ್ ಎಂಬುವರು 27 ಲಕ್ಷ ಕಳೆದುಕೊಂಡಿದ್ದಾರೆ.

ವಾಟ್ಸ್ ಆ್ಯಪ್ ಮುಖಾಂತರ ಮೆಸೇಜ್ ಮಾಡಿದ ವಂಚಕರು ಹಣ ಹೂಡಿಕೆ ಬಗ್ಗೆ ತಿಳಿಸಿದ್ದಾರೆ. ಒಂದು ಕ್ಯೂಆರ್ ಕೋಡ್ ಕಳುಹಿಸಿ ನೀವು 21 ಹಾಕಿದರೆ 12 ವಾಪಸ್ ನೀಡುತ್ತೇವೆ ಎಂದು ನಂಬಿಸಿದ್ದಾರೆ. ಮೊದಲಿಗೆ ಕಾರ್ತಿಕ್ 21 ವರ್ಗಾಯಿಸಿದ್ದು, ಅವರ ಖಾತೆಗೆ 12 ಮರಳಿಸಿದ್ದಾರೆ. ಇದನ್ನು ನಂಬಿ 21 ಸಾವಿರ ವರ್ಗಾವಣೆ ಮಾಡಿದ್ದಾರೆ. ಸೈಬರ್ ಆರೋಪಿಗಳು ಕರೆ ಮಾಡಿ ನಿಮ್ಮ ಖಾತೆಗೆ 12 ಸಾವಿರ ಜಮಾ ಮಾಡಿದ್ದು, ವರ್ಗಾವಣೆ ಪ್ರಕ್ರಿಯೆ ನಡೆಯುತ್ತಿದೆ. ಸ್ವಲ್ಪ ತಡವಾಗುತ್ತದೆ ಎಂದು ಹೇಳಿದ್ದಾರೆ.

21 ಸಾವಿರ ವಾಪಸ್ ಕೊಡುವಂತೆ ಕಿರಣ್ ಕೇಳಿದ್ದಾರೆ. ಇನ್ನೂ ಹೆಚ್ಚಿನ ಹಣ ಹೂಡಿಕೆ ಮಾಡಿದರೆ ಮಾತ್ರ ನೀವು ವರ್ಗಾವಣೆ ಮಾಡಿದ ಹಣ ನಿಮ್ಮ ಖಾತೆಗೆ ಜಮಾ ಆಗುತ್ತದೆ ಎಂದು ತಿಳಿಸಿದ್ದಾರೆ. ಸ್ನೇಹಿತರಿಂದ ಹಣ ಪಡೆದು ಹಂತ ಹಂತವಾಗಿ ವಿವಿಧ ಬ್ಯಾಂಕ್ ಖಾತೆಗಳಿಗೆ ಒಟ್ಟು



27,01,773 ವರ್ಗಾಯಿಸಿದ್ದಾರೆ. ಅವರಿಗೆ ಯಾವುದೇ ಹಣ ವಾಪಸ್ ನೀಡಿಲ್ಲ. ಮೋಸ ಹೋಗಿರುವುದು ಖಚಿತವಾದ ನಂತರ ಸೈಬರ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಿಸಲಾಗಿದೆ.

**ಟಾಸ್ಕ್ ನೆಪ 10 ಲಕ್ಷ ಮೋಸ:** ಟಾಸ್ಕ್‌ಗಳಿಗೆ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿ ನಗರದ ಮಾರುತಿ ನಗರದ ಎಸ್. ರೇವಂತ್ ಎಂಬುವರಿಗೆ 10.29 ಲಕ್ಷ ವಂಚಿಸಲಾಗಿದೆ. ಟೆಲಿಗ್ರಾಮ್ ಮುಖಾಂತರ ಪರಿಚಯವಾದ ಆರೋಪಿಗಳು ವಿವಿಧ ಟಾಸ್ಕ್‌ಗಳ ಮಾಹಿತಿ ಹಂಚಿಕೊಂಡಿದ್ದಾರೆ. ವಿಕ್ರಾಂತ್ ಇನ್‌ವೆಸ್ಟ್‌ಮೆಂಟ್ ಪ್ಲಾನ್' ಎಂಬ ಗ್ರೂಪ್‌ನಲ್ಲಿ ಹಣ ಹೂಡಿಕೆ ಕುರಿತು ಚರ್ಚಿಸಿದ್ದಾರೆ. ಗ್ರೂಪ್‌ನಲ್ಲಿ ಕಳುಹಿಸಿದ ಲಿಂಕ್ ಕ್ಲಿಕ್ ಮಾಡಿ ಆನ್‌ಲೈನ್ ಖಾತೆ ತೆರೆದಿದ್ದಾರೆ. ಹೂಡಿಕೆ ಮತ್ತು ವಿತ್ ಡ್ರಾ ಮಾಡಿಕೊಳ್ಳುವ ಬಗ್ಗೆ ತಿಳಿಸಿದ್ದಾರೆ. ಪ್ರಾರಂಭದಲ್ಲಿ 23 ಸಾವಿರ ವರ್ಗಾಯಿಸಿದ್ದು, ಆನ್‌ಲೈನ್ ಖಾತೆಗೆ ಹೆಚ್ಚಿನ ಲಾಭ ಬಂದಿರುವುದಾಗಿ ತೋರಿಸಿದೆ. ಇದನ್ನು ನಂಬಿದ ರೇವಂತ್ ಹಂತ ಹಂತವಾಗಿ ಒಟ್ಟು 210,20,022 ಹಣ ವರ್ಗಾವಣೆ ಮಾಡಿದ್ದಾರೆ. ಹಣ ವಿತ್ ಡ್ರಾ ಮಾಡಲು ಪ್ರಯತ್ನಿಸಿದಾಗ ನಿರಾಸೆಯಾಗಿದೆ. ಟಾಸ್ಕ್ ಹೆಸರಿನಲ್ಲಿ ಹಣ ಪಡೆದು ವಂಚಿಸಿರುವುದು ಗೊತ್ತಾದ ನಂತರ ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

# ರಾಜ್ಯ ಮಟ್ಟದ ಜನಪರ ಉತ್ಸವಕ್ಕೆ ಅದ್ಧೂರಿ ಚಾಲನೆ

## ರಾಜ್ಯದ ಮೂಲೆ ಮೂಲೆಗಳಲ್ಲಿ ಅಡಗಿರುವ ಜನಪದ ಕಲೆಗಳು ಎಲ್ಲಾ ಕಡೆಗಳಲ್ಲೂ ತಿಳಿಯುವ ಕೆಲಸವಾಗಬೇಕು: ತಂಗಡಗಿ

• ಉದಯವಾಹಿನಿ ಕೋಲಾರ

ಕಲೆ ಮತ್ತು ಕಲಾವಿದರನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಜನಪರ ಉತ್ಸವದಂತಹ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರೋತ್ಸಾಹಿಸುತ್ತಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎಸ್. ಸುರೇಶ್ ಅವರು ತಿಳಿಸಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ, ರಾಜ್ಯ ಮಟ್ಟದ ಜನಪರ ಉತ್ಸವ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎಸ್. ಸುರೇಶ್ ಅವರು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದರು.

ಜಾನಪದ ಕಲೆಯು ಗ್ರಾಮೀಣ ಭಾಗದ ಬಡವರು ಹಿಂದುಳಿದವರು ಹಾಗೂ ದಲಿತರಲ್ಲಿ ಉಳಿದಿದೆ. ಆಗಾಗಿ ಈ ಕಲೆಯನ್ನು ತಮ್ಮ ಯುವ ಪೀಳಿಗೆಗೆ ಮುಂದುವರಿಸಿಕೊಂಡು ಹೋಗಲು, ಅವರಿಗೂ ಕಲಿಸಬೇಕು. ಇಂದಿನ ಕಲೆಗಳಲ್ಲಿ ಯಾವುದೇ ಸಂಸ್ಕೃತಿ ಉಳಿದಿಲ್ಲ. ಹಿಂದೆ ನಮ್ಮ ಹಿರಿಯರು ನಮಗೆ ಹಲವಾರು ಜಾನಪದ ಹಾಡುಗಳನ್ನು ಕಲಿಸುತ್ತಿದ್ದರು. ಹಳ್ಳಿಗಳಲ್ಲಿ ನಾಟಕ, ಕೋಲಾಟ, ಭಜನೆ ಪದಗಳನ್ನು


ಉದಯವಾಹಿನಿ ಚಿತ್ರ

ಕುಳಿತು ಕೇಳಬಹುದಾಗಿತ್ತು. ಈಗ ಇಂತಹ ಕಲೆಗಳು ನಶಿಸುತ್ತಿದ್ದು, ಕಲವಿದರಾದ ತಾವು ಇವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದರು.

**ಮಹಿಳಾ ಶಕ್ತಿಯೇ ದೇಶದ ಶಕ್ತಿ**

ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಿಂದಲೇ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮೀಸಲಾತಿಯನ್ನು ಪಡೆದುಕೊಂಡು ಕೆಳ ಮಟ್ಟದ ಸಮುದಾಯಗಳು ಮುನ್ನಡೆಯುತ್ತಿದೆ. ಮಹಿಳಾ ಶಕ್ತಿಯೇ ದೇಶದ ಶಕ್ತಿ ಅದನ್ನು ಅಂಬೇಡ್ಕರ್ ಅವರು ತಮ್ಮ ಸಂವಿಧಾನದಲ್ಲಿ ಬರೆದು ಕೊಡುಗೆಯಾಗಿ ನೀಡಿದ್ದಾರೆ ನಾವು ದೇವರನ್ನು ಕಾಣದೆ ಇರಬಹುದು ಆದರೆ ನಮಗೆ ಕಾಣದೆ ಇರುವ ದೇವರು ಅಂಬೇಡ್ಕರ್ ಅದನ್ನು ನಾವು ಕೇವಲ ಬಾಯಿಂದ ಹೇಳುವುದಲ್ಲ ತಮ್ಮ ನಡೆ ನುಡಿಯಲ್ಲಿ ಅಳವಡಿಸಿಕೊಳ್ಳಬೇಕು ಅಂಬೇಡ್ಕರ್ ಅವರ ಚಿಂತನೆಗಳನ್ನು ನಮ್ಮೆಲ್ಲರ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದರು.

ರಾಜ್ಯದಲ್ಲಿ ಇರುವಂತಹ ವಿದ್ಯಾವಂತರಿಂದ ವಿಚಾರಗೋಷ್ಠಿ ಕವಿಗೋಷ್ಠಿ ಸಾಂಸ್ಕೃತಿಕ ಕಾರ್ಯಕ್ರಮಗಳು ಕೆಲ ಸಮುದಾಯಗಳ ಜನಪದ ಕಲೆಗಳು ಪ್ರದರ್ಶನಗಳನ್ನು ಮಾಡುವ ನಿಟ್ಟಿನಲ್ಲಿ ಪ್ರೋತ್ಸಾಹ ಕೊಡುವ ಸಲುವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿರುವುದು ಸಂತಸದ ಸಂಗತಿ ಎಂದರು.

ಕೋಲಾರದಲ್ಲಿ ರಾಜ್ಯ ಮಟ್ಟದ ಜನಪರ ಉತ್ಸವ ಕಾರ್ಯಕ್ರಮಕ್ಕೆ ಸರ್ಕಾರದಿಂದ ಸುಮಾರು 93 ಲಕ್ಷ ರೂಪಾಯಿ ಅನುದಾನ ಒದಗಿಸಲಾಗಿದೆ. ಪರಿಶಿಷ್ಟ ಜಾತಿ ವಿಶೇಷ ಘಟಕ ಅಡಿಯಲ್ಲಿ ಈ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪರಿಶಿಷ್ಟ ಜಾತಿಯವರಿಗೆ

**ಸಮಸಮಾಜ ನಿರ್ಮಾಣದವರೆಗೆ ಮೀಸಲಾತಿ ಜೀವಂತ ?**

**ಕೆಲವರು ಮೀಸಲಾತಿ ಬಗ್ಗೆ ಅರಿವು ಇಲ್ಲದವರು ಮೀಸಲಾತಿಯನ್ನು ತೆಗೆಯಬೇಕು ಎಂದು ಹೇಳುತ್ತಾರೆ ಆದರೆ ಯಾವುದೇ ಕಾರಣಕ್ಕೂ ಮೀಸಲಾತಿಯನ್ನು ತೆಗೆಯುವುದಿಲ್ಲ ಯಾವತ್ತೂ ಸಮಾಜದಲ್ಲಿ ತುಳಿತಕ್ಕೆ ಒಳಗಾಗುವವರು, ಕೆಳಮಟ್ಟದಲ್ಲಿರುವವರು ಮಹಿಳೆಯರು. ಇವರು ಎಂದು ಉನ್ನತ ಮಟ್ಟಕ್ಕೆ ಬೆಳೆಯುತ್ತಾರೂ ಅಲ್ಲಿಯವರೆಗೂ ಮೀಸಲಾತಿಯನ್ನು ತೆಗೆಯಲು ಸಾದ್ಯವಿಲ್ಲ. ಆದ್ದರಿಂದ ನಾವೆಲ್ಲರೂ ಸೇರಿ ಸಮಸಮಾಜವನ್ನು ಕಟ್ಟುವ ಕೆಲಸ ಮಾಡೋಣ ಎಂದು ತಿಳಿಸಿದರು.**

**ಸಮ ಸಮಾಜ ನಿರ್ಮಾಣ**

**ಕರ್ನಾಟಕ ಸರ್ಕಾರದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಸಮಾಜದಲ್ಲಿರುವ ಎಲ್ಲರೂ ಸಮಾನರು ಎಂಬ ಸಮಸಾಮಾಜ ನಿರ್ಮಾಣದ ದೃಷ್ಟಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದಂತೆ ಈ ಕಾರ್ಯಕ್ರಮವನ್ನು ಆಯೋಜಿಸಿರುವುದಾಗಿ ತಿಳಿಸಿದರು.**

ಜನಪದ ಕಲೆಗಳು ತಮ್ಮ ರಕ್ತದಲ್ಲಿಯೇ ಇರುತ್ತದೆ. ಅವರು ವಂಶ ಪಾರಂಪರ್ಯವಾಗಿ ಜನಪದ ನಾಟಕ, ಹಾಡುಗಾರಿಕೆ, ಸಂಗೀತ, ನೃತ್ಯ, ಮಾಡಿಕೊಂಡು ಬಂದಿರುತ್ತರೆ ಆದ್ದರಿಂದ ಅವರನ್ನು ಪ್ರೋತ್ಸಾಹಿಸಿ ಆ ಕಲೆಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಕೋಲಾರದಲ್ಲಿ ಹಮ್ಮಿಕೊಂಡಿರುವುದಾಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಅವರು ಮಾತನಾಡಿ ನಮ್ಮ ಕರ್ನಾಟಕದ ಇತಿಹಾಸದಲ್ಲಿಯೇ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕಾರ್ಯಕ್ರಮವನ್ನು ಯಾರು ಮಾಡಿರಲಿಲ್ಲ ಯಾಕೆಂದರೆ ನಮ್ಮ ರಾಜ್ಯದಲ್ಲಿ ಎಸ್.ಪಿ/ಟಿ.ಎಸ್.ಪಿ ಕಾನೂನು ಜಾರಿಗೆ ತಂದು ಪ್ರತಿಯೊಂದು ಇಲಾಖೆಗಳಿಂದಲೂ ಸಮುದಾಯದ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ದೇಶದಲ್ಲಿಯೇ ಇಂತಹ ಕಾರ್ಯಕ್ರಮವನ್ನು ಮೊದಲು ಜಾರಿಗೆ ತಂದಿದ್ದು ನಮ್ಮ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಬಜೆಟ್ ನಲ್ಲಿ ಶೇಕಡಾ 24.1% ರಷ್ಟು ಅನುದಾನವನ್ನು ಎಸ್.ಪಿ/ಟಿ.ಎಸ್.ಪಿ ಯೋಜನೆಗಳಿಗೆ ಮೀಸಲಿಟ್ಟಿದ್ದಾರೆ ಎಂದು ತಿಳಿಸಿದರು.

# ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿಲ್ಲ: ಡಾ.ಯತೀಂದ್ರ

• ಉದಯವಾಹಿನಿ ತಿ.ನರಸೀಪುರ

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳು ಸೇರಿದಂತೆ ಶಾಸಕರ ಕ್ಷೇತ್ರಾಭಿವೃದ್ಧಿಗೂ ಅನುದಾನಗಳನ್ನು ಮೀಸಲಿಟ್ಟಿದ್ದು, ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ವರುಣ ವಿಧಾನಸಭಾ ಕ್ಷೇತ್ರದ ತಾಲ್ಲೂಕಿನ ಇಂಡವಾಳು ಗ್ರಾಮದಲ್ಲಿ ವಿಶೇಷ ಘಟಕ( ಎಸ್ಸಿಪಿ/ಟಿಎಸ್ಪಿ) ಯೋಜನೆ ಸೇರಿದಂತೆ ವಿವಿಧ ಇಲಾಖೆಗಳ 10.70 ಕೋಟಿ ರೂಗಳ ಅನುದಾನದಲ್ಲಿ ಸಮುದಾಯ ಭವನ ನಿರ್ಮಾಣ , ರಸ್ತೆ ಮತ್ತು ಹೈಮಾಸ್ಟ್ ದೀಪ ಅಳವಡಿಕೆ, ಶಾಲಾ ಕೊಠಡಿ ನಿರ್ಮಾಣ, ಸಿಸಿ ರಸ್ತೆ ಮತ್ತು ಚರಂಡಿ, ಸೇತುವೆ ನಿರ್ಮಾಣ ಹಾಗೂ ದೇಗುಲ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಸಲ್ಲಿಸಿ, ಕೊಳವೆ ಬಾವಿ ಮತ್ತು ಈಗಾಗಲೇ ನಿರ್ಮಾಣಗೊಂಡಿರುವ ಚರಂಡಿಗಳು ಮತ್ತು ತುಂಬಲ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಆಯ್ಕೆ ಮಾಡಿರುವ ಪ್ರಕ್ರಿಯೆಗೆ ಚಾಲನೆ ನೀಡಿ


ಉದಯವಾಹಿನಿ ಚಿತ್ರ

ಮಾತನಾಡಿದ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಿಗಾಗಲಿ ಅಥವಾ ಶಾಸಕರುಗಳ ಪ್ರದೇಶ ಅಭಿವೃದ್ಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಬೊಕ್ಕಸ ಖಾಲಿಯಾಗಿಲ್ಲವೆಂದರು.

ವರುಣಾ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಿದ್ದು, ಕಳೆದ ಅಕ್ಟೋಬರ್ 2024ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 518 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು. ಈ ದಿನ ಕೂಡ 10.70 ಕೋಟಿ ರೂ. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ವಿಪಕ್ಷಗಳು ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ, ರಾಜ್ಯದ ಅಭಿವೃದ್ಧಿಗೆ ಹಣವಿಲ್ಲ ಎಂದು ಆರೋಪ ಮಾಡುತ್ತಿವೆ.

**ಗ್ಯಾರಂಟಿ ಯೋಜನೆಯು ಆರ್ಥಿಕವಾಗಿ ತಳಮಟ್ಟದಲ್ಲಿರುವ ಜನರಿಗಾಗಿ ಜಾರಿಯಾಗಿರುವ ಬಹುಪಯುಕ್ತ ಯೋಜನೆ. ಇದರಿಂದ ರಾಜ್ಯದ ಗ್ರಾಮೀಣ ಪ್ರದೇಶದ ಜನರಲ್ಲದೆ ನಗರ ಪ್ರದೇಶದ ಜನರು ಕೂಡ ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗುತ್ತಿದೆ. ಈ ಯೋಜನೆ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಕೂಡ ಮೆಚ್ಚುಗೆ ವ್ಯಕ್ತಪಡಿಸಿವೆ. ಆದರೆ, ರಾಜ್ಯದ ವಿರೋಧ ಪಕ್ಷಗಳು ಮಾತ್ರ ಇಲ್ಲಸಲ್ಲದ ಆರೋಪ ಮಾಡುತ್ತಾ ಜನರಲ್ಲಿ ಗೊಂದಲ ಮೂಡಿಸುತ್ತಿವೆ -ಡಾ. ಯತೀಂದ್ರ**

ಇದೆಲ್ಲ ಶುದ್ಧ ಸುಳ್ಳು. ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಪ್ರತಿ ವರ್ಷ 56,000 ಕೋಟಿ ರೂಗಳನ್ನು ವ್ಯಯಿಸುತ್ತಿದೆ. ಜತೆಯಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿಗೆ ಅವಶ್ಯವಿರುವ ಅನುದಾನಗಳನ್ನು ಬಜೆಟ್ ನಲ್ಲಿ ಮೀಸಲಿರಿಸಿದೆ ಎಂದರು.

# ಜೆಡಿಎಸ್ ಕಾರ್ಯಕರ್ತರು ಸೈನಿಕರಿದ್ದಂತೆ: ಮಂಜು

• ಉದಯವಾಹಿನಿ ಕೆ.ಆರ್.ಪೇಟೆ

ಚುನಾವಣೆಗಳಲ್ಲಿ ಗೆಲುವು ಸೋಲು ಸಹಜ ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ ಅದನ್ನ ಸಮಾನವಾಗಿ ಸ್ವೀಕರಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಅವರು ಮುಂಬರುವ ಕೃಷಿ ಪತ್ತಿನ ಸಹಕಾರ ಸಂಘಗಳ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಅಕ್ಕಿಹೆಬ್ಬಾಳು, ಮಾಂಬಳ್ಳಿ,ಬೀರುವಳ್ಳಿ ಹಾಗು ಮಂದಗೆರೆ ವ್ಯಾಪ್ತಿಯ ಜೆಡಿಎಸ್ ಮುಖಂಡರು ಹಾಗು ಕಾರ್ಯಕರ್ತರ ಪೂರ್ವಭಾವಿ ನಡೆಸಿ ಸಲಹೆ ಸೂಚನೆಗಳನ್ನು ನೀಡಿ ಮಾತನಾಡಿದರು.

ತಾಲ್ಲೂಕಿನಲ್ಲಿ ಜೆಡಿಎಸ್ ಕಾರ್ಯಕರ್ತರು ಸೈನಿಕರಂತೆ ಪಕ್ಷದ ಪರವಾಗಿ ಕೆಲಸ ಮಾಡುತ್ತಾರೆ ಪಕ್ಷದ ಮುಖಂಡರು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಮೂಲಕ ಚುನಾವಣೆಗಳನ್ನು ನಡೆಸಿ ಪಕ್ಷದ ಕಾರ್ಯಕರ್ತರಿಗೆ ಅಧಿಕಾರ ಸಿಗುವಂತೆ ಶ್ರಮಿಸಬೇಕು ಈ ಚುನಾವಣೆಯಲ್ಲಿ ಅವಕಾಶ ಸಿಗದಿದ್ದರೆ ಆಕಾಂಕ್ಷಿಗಳು ಧೃತಿಗೆಡುವುದು ಬೇಡ ಇನ್ನೂ ಹಲವು ಚುನಾವಣೆಗಳಿವೆ ಯಾವುದಾದರೂ ಒಂದು ಚುನಾವಣೆಯಲ್ಲಿ ಅವಕಾಶ ಸಿಗಲಿದೆ ಎಂದು ಚುನಾವಣಾ ಸ್ಪರ್ಧಾ ಆಕಾಂಕ್ಷಿಗಳಿಗೆ


ಉದಯವಾಹಿನಿ ಚಿತ್ರ

ಆತ್ಮವಿಶ್ವಾಸ ತುಂಬಿದರು. ಪಕ್ಷದ ಮುಖಂಡರು ಒಗ್ಗಟ್ಟಿನಿಂದ ಚುನಾವಣೆ ನಡೆಸಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಬೇಕು ಎಂದ ಶಾಸಕ ಮಂಜು ನಿಮ್ಮ ಬೆಂಬಲಕ್ಕೆ ನಾನು ಸದಾ ಸಿದ್ದನಿದ್ದು ಚುನಾವಣೆಗೆ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದು ಕಾರ್ಯಕರ್ತರಿಗೆ ಧೈರ್ಯ ತುಂಬಿದರು. ಜೆಡಿಎಸ್ ಮುಖಂಡರಾದ ಎ.ಆರ್.ರಘು, ದಿಶಾ ಸಮಿತಿ ಸದಸ್ಯ ನರಸನಾಯಕ, ವಕೀಲ ನವೀನ್ ಕುಮಾರ್, ಕಟ್ಟೆಕ್ಯಾತನಹಳ್ಳಿ ಚಂದ್ರೇಗೌಡ, ಗ್ರಾಮ ಪಂಚಾಯತಿ ಸದಸ್ಯ ಬೆಳತೂರು ಪುಟ್ಟೇಗೌಡ, ಗ್ರಾ.ಪಂ.ಮಾಜಿ ಅಧ್ಯಕ್ಷ ಬೀರುವಳ್ಳಿ ಕುಮಾರ, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಬೀರುವಳ್ಳಿ ಕೃಷ್ಣ, ಬೆಳತೂರು ದಿನೇಶ, ಮುಖಂಡರು ಹಾಜರಿದ್ದರು.

## ಮಿನಿ ನ್ಯೂಸ್

### ಗೋಡೌನ್‌ನಲ್ಲಿ ಅಗ್ನಿ ಅವಘಡ

• ಉದಯವಾಹಿನಿ ನಂಜನಗೂಡು

ತಾಲೂಕಿನ ಕತ್ವಾಡಿಪುರ ಗ್ರಾಮದಲ್ಲಿ ಕೆಮಿಕಲ್ ಪದಾರ್ಥಗಳ ಗೋಡೌನ್‌ನಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು ಆತಂಕ ಸೃಷ್ಟಿಸಿದೆ.

ನಂಜನಗೂಡು ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಕತ್ವಾಡಿಪುರ ಗ್ರಾಮದ ಗ್ಯಾಸ್ ಗೋಡೌನ್ ಬಳಿ ಇರುವ ಕೆಮಿಕಲ್ ಮಿಶ್ರಿತ ಹಳೆ ಪದಾರ್ಥಗಳ ಗೋಡನ್ ನಲ್ಲಿ ಏಕಾಏಕಿ ಭಾರೀ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಕತ್ವಾಡಿಪುರ ಗ್ರಾಮಸ್ಥರು ಮನೆ ಬಿಟ್ಟು ರಸ್ತೆಗೆ ಬಂದಿದ್ದಾರೆ. ಮೈಸೂರು ಮೂಲದ ವ್ಯಕ್ತಿ ಜುಬಲಿಯಂಟ್ ಕಾರ್ಖಾನೆಯಿಂದ ಕೆಮಿಕಲ್ ಮಿಶ್ರಿತ ಹಳೆ ಟ್ಯಾಂಕರ್ ಮತ್ತು ಇತರೆ ಪದಾರ್ಥಗಳನ್ನು ತಂದು ಸಂಗ್ರಹಿಸಿಟ್ಟಿದ್ದು, ಇದಕ್ಕಿದ್ದಂತೆ ಈ ಕೆಮಿಕಲ್ ಮಿಶ್ರಿತ ಗೋಡೌನ್ ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿಯ ಕಾವು ಹೆಚ್ಚಾಗುತ್ತಿದ್ದಂತೆ ಕೆಮಿಕಲ್ ಮಿಶ್ರಿತ ಹಳೆ ಟ್ಯಾಂಕ್ ಬ್ಲಾಸ್ಟ್ ಆಗಿದೆ. ಹಳೆ ಟ್ಯಾಂಕ್ ಬ್ಲಾಸ್ಟ್ ಆದ ಶಬ್ದಕ್ಕೆ ಹೆದರಿ ಕತ್ವಾಡಿಪುರ ಗ್ರಾಮಸ್ಥರು ಮನೆಯಿಂದ ಹೊರ ಬಂದಿದ್ದಾರೆ.ಇನ್ನು ಸ್ಥಳಕ್ಕೆ ಅಗ್ನಿಶಾಮಕ ಠಾಣೆ ಸಿಬ್ಬಂದಿಗಳು ಬಂದು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

### ಮಡಿಕೇರಿಯ ಇಗ್ಗುತಪ್ಪ, ನಾಲಾಡಿ ಬೆಟ್ಟದಲ್ಲಿ ಕಾಡ್ಗಿಚ್ಚು: 20 ಎಕ್ರೆಗೆ ಬೆಂಕಿ

• ಉದಯವಾಹಿನಿ ಮಡಿಕೇರಿ

ಇಲ್ಲಿನ ಮಲ್ಮ, ಕಕ್ಕಬ್ಬೆ ವ್ಯಾಪ್ತಿಯ ಇಗ್ಗುತಪ್ಪ , ನಾಲಾಡಿ ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಸಂಜೆ ಕಾಣಿಸಿಕೊಂಡ ಕಾಡ್ಗಿಚ್ಚು ಅಂದಾಜು 20 ಎಕ್ರೆ ಪ್ರದೇಶಕ್ಕೆ ವ್ಯಾಪಿಸಿರುವ ಶಂಕೆ ವ್ಯಕ್ತವಾಗಿದೆ.

### ಮಾ.8ರಂದು ರಾಷ್ಟ್ರೀಯ ಲೋಕ-ಅದಾಲತ್

• ಉದಯವಾಹಿನಿ ಮಂಡ್ಯ

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ರಾಜ್ಯಾದ್ಯಂತ ಮಾ. 08 ರಂದು ರಾಷ್ಟ್ರೀಯ ಲೋಕ-ಅದಾಲತ್ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ 7 ತಾಲೂಕುಗಳಲ್ಲಿಯೂ ಸಹ ಲೋಕ-ಅದಾಲತ್ ಮುಖಾಂತರ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಪೂರ್ವಭಾವಿ ಬೈಠಕ್‌ಗಳನ್ನು ನಡೆಸಲಾಗುತ್ತಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ-ಅದಾಲತ್‌ನಲ್ಲಿ ಆಸ್ತಿ ವಿವಾದಗಳನ್ನು ಒಳಗೊಂಡಂತೆ ಸಿವಿಲ್ ವ್ಯಾಜ್ಯಗಳು, ವಿಭಾಗ ದಾವೆಗಳು, ಹಣ ವಸೂಲಾತಿ ದಾವೆಗಳು, ನಿರ್ದಿಷ್ಟ ಪರಿಹಾರ ಕಾಯ್ದೆಯಡಿ ದಾಖಲಿಸಿರುವ ದಾವೆಗಳು ಮೋಟಾರ್ ವಾಹನಗಳ ಪ್ರಕರಣಗಳು, ಜೀವನಾಂಶ ಪ್ರಕರಣ, ದಾಂಪತ್ಯ ಪುನರ್ ಸ್ಥಾಪನೆ ಪ್ರಕರಣಗಳು, ರಾಜಿ ಆಗಬಹುದಾತಂತಹ ಕ್ರಿಮಿನಲ್ ಪ್ರಕರಣಗಳು ಮತ್ತು ಚೆಕ್ ಬೌನ್ಸ್ ಪ್ರಕರಣಗಳು ಎಲ್ಲವನ್ನೂ ರಾಜಿಗೆ ತೆಗೆದುಕೊಂಡು ಆಯಾ ನ್ಯಾಯಲಯಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಪ್ರಯತ್ನ ಮಾಡಲಾಗುವುದು.

ಲೋಕ-ಅದಾಲತ್ ನ್ಯಾಯಾಲಯಗಳಲ್ಲಿ ಬಾಕಿ ಇರುವಂತಹ ಪ್ರಕರಣಗಳ ಜೊತೆಗೆ ನ್ಯಾಯಾಲಯಕ್ಕೆ ದಾಖಲಾಗುವ ಮುನ್ನ ಅಂದರೆ, ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ಸಂಬಂಧಿಸಿದಂತೆ ಉಭಯ ಪಕ್ಷದವರಿಗೆ ನೋಟಿಸ್ ನೀಡಿ ಕರೆಸಿ ಪ್ರಾಧಿಕಾರದ ವತಿಯಿಂದ ಪೂರ್ವಭಾವಿ ಬೈಠಕ್ ನಡೆಸಿ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ.

# ಆರೋಗ್ಯವಂತರಾಗಲು ಉತ್ತಮ ಅಭ್ಯಾಸ ರೂಢಿಸಿಕೊಳ್ಳಲು ಸಲಹೆ

• ಉದಯವಾಹಿನಿ ಚಾಮರಾಜನಗರ,

ರೋಗಮುಕ್ತ ಸ್ಥಿತಿ ಕಾಪಾಡಿಕೊಳ್ಳಲು ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಗುಂಡ್ಲುಪೇಟೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಎಂ. ಷಣ್ಮುಗಂ ರವರು ಹೇಳಿದರು.

ಗುಂಡ್ಲುಪೇಟೆ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿಂದು ಜಿಲ್ಲಾ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಅನುಷ್ಠನ ಬೆಂಬಲ ಸಂಸ್ಥೆ ಕರ್ಡ್ಸ್ ರವರ ಸಂಯುಕ್ತಾಶ್ರಯದಲ್ಲಿ ಜೆ.ಜೆ.ಎಂ ಮತ್ತು ಎಸ್.ಬಿ.ಎಂ (ಗ್ರಾ) ಯೋಜನೆಯ ಐ.ಇ.ಸಿ ಹಾಗೂ ಹೆಚ್.ಆರ್.ಡಿ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕು ಮಟ್ಟದ ವಾಕ್ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.ಶೇ. 80ರಷ್ಟು ರೋಗಗಳು ಮೂಲ ಕಲುಷಿತವಾದ ನೀರು ಮತ್ತು ಅಶುಚಿತ್ವದಿಂದ ಬರುತ್ತವೆ. ಆದ್ದರಿಂದ ಕಾಲಕಾಲಕ್ಕೆ ಬದಲಾವಣೆಗಳನ್ನು ರೂಢಿಸಿಕೊಂಡು


ಉದಯವಾಹಿನಿ ಚಿತ್ರ

ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು. ಗ್ರಾಮೀಣ ಭಾಗದಲ್ಲಿರುವ ಪ್ರತಿ ಮನೆ ಮನೆಗೂ ಜಲ ಜೀವನ್ ಮಿಷನ್ ಯೋಜನೆ ಮೂಲಕ ಶುದ್ಧ ಮತ್ತು ಸುರಕ್ಷಿತವಾದ ಕುಡಿಯುವ ನೀರು ದೊರೆಯುತ್ತದೆ. ಈ ಕಾರ್ಯಾಗಾರವು ಬಹಳ ಉಪಯುಕ್ತವಾಗಿದೆ ಎಂದರು. ಜೋಸೆಫ್ ಜಿ.ಎಂ ರೆಬೆಲ್ಲೋ ರವರು, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಬಗ್ಗೆ, ನೀರಿನ ಪೂರೈಕೆಯ ಜವಾಬ್ದಾರಿಗಳು, ದ್ರವ ತ್ಯಾಜ್ಯಗಳ ನಿರ್ವಹಣೆ, ನೀರಿನ ಮಹತ್ವ, ಶುಚಿತ್ವ, ಮಳೆ ನೀರು ಕೊಯ್ಲು ಬಗ್ಗೆ ತಿಳಿಸಿಕೊಟ್ಟರು.

# ಹೈವೇಯಲ್ಲಿ ಸರಣಿ ಅಪಘಾತ

• ಉದಯವಾಹಿನಿ ಚಿಕ್ಕಬಳ್ಳಾಪುರ

ತಾಲ್ಲೂಕಿನ ಅಗಲಗುರ್ಕಿ ಬಳಿ ಬೆಂಗಳೂರು ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ 44 ರಲ್ಲಿ ಟಿಪ್ಪರ್ ಲಾರಿಯೊಂದು ಡಿವೈಡರ್ ಹಾರಿ ಎದುರು ಪಥದಲ್ಲಿ ಸಾಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ.

ಇದ್ರಿಂದ ಕಾರು ಹಾಗೂ ಬೈಕ್ ಸಹ ಅಪಘಾತಕ್ಕೀಡಾಗಿ ಸರಣಿ ಅಪಘಾತ ಸಂಭವಿಸಿದೆ. ಅಂದಹಾಗೆ ಮಹಾಶಿವರಾತ್ರಿ ಹಬ್ಬದ ಜಾಗರಣೆ ಅಂಗವಾಗಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಆವಲಗುರ್ಕಿ ಬಳಿಯ ಆದಿಯೋಗಿ ಈಶಾ ಫೌಂಡೇಶನ್‌ಗೆ ಭಕ್ತಸಾಗರವೇ ಹರಿದುಬಂದಿದೆ. ಇದ್ರಿಂದ ಮೊದಲೇ ಎಲ್ಲಾ ರಸ್ತೆಗಳು ಹೈವೇ ಸಹ ಸಂಪೂರ್ಣ ಟ್ರಾಫಿಕ್ ಮಯವಾಗಿದೆ.

# ಅನಾಹುತಗಳಿಂದ ಪಾರಾಗಲು ದೈವೀಕ ಭಾವನೆ ಹೊಂದಬೇಕು: ಗಣಪತಿ ಶ್ರೀ

• ಉದಯವಾಹಿನಿ ಮೈಸೂರು

ಈ ವರ್ಷ ಕಠಿಣವಾದ ದಿನಗಳನ್ನು ದೇಶ ಎದುರಿಸಬೇಕಾಗುತ್ತದೆ, ಪ್ರಾಕೃತಿಕ ಅನಾಹುತಗಳು ಸಂಭವಿಸುತ್ತದೆ ಹಾಗಾಗಿ ದೈವೀಕ ಭಾವನೆ ಹೊಂದಬೇಕು ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಜನತೆಗೆ ತಿಳಿಸಿದ್ದಾರೆ.

**ಆಧ್ಯಾತ್ಮಿಕ ಪ್ರಪಂಚಕ್ಕೆ ಶುಭಕರ**

ಮಹಾಶಿವರಾತ್ರಿ ಪ್ರಯುಕ್ತ ಜನತೆಗೆ ಆಶೀರ್ವಚನ ನೀಡಿದ ಶ್ರೀಗಳು ಈ ವರ್ಷ ಪ್ರಾಕೃತಿಕ ವಿಕೋಪಗಳು, ಯುದ್ಧಗಳು, ಅಪಮೃತ್ಯುಗಳು ಸಂಭವಿಸಲಿವೆ ಹರಿ, ಶಿವನ ಕೃಪೆ ಇರುವುದರಿಂದ ಇವು ಕಡಿಮೆಯಾದರೂ ಜನತೆ ಕೂಡಾ ದೈವದ ಕಡೆ ಹೆಚ್ಚು ಗಮನ ಕೊಡಬೇಕು ಎಂದು ತಿಳಿ


ಉದಯವಾಹಿನಿ ಚಿತ್ರ

ಹೇಳಿದರು. ಈ ಬಾರಿಯ ಕುಂಭ ಮೇಳ ಅತ್ಯಂತ ಶುಭ,ಅದರಲ್ಲೂ ಆಧ್ಯಾತ್ಮಿಕ ಪ್ರಪಂಚಕ್ಕೆ ಶುಭಕರವಾಗಿದೆ, ದೇಶದ ಜನತೆ ಧಾರ್ಮಿಕತೆ ಬಗ್ಗೆ ಅತ್ಯಂತ ಶ್ರದ್ಧೆ ತೋರಿದ್ದಾರೆ ,ಇದು ಅದೃಷ್ಟವೇ ಸರಿ ಎಂದು ತಿಳಿಸಿದರು.

ಅತೀ ದೊಡ್ಡ ಸಂಖ್ಯೆಯಲ್ಲಿ ಯುವಜನರು ಕುಂಭ ಮೇಳದಲ್ಲಿ ಪಾಲ್ಗೊಂಡಿದ್ದು ಅವರಲ್ಲಿ ನಮ್ಮ ದರ್ಮದ ಬಗ್ಗೆ ಜಾಗೃತಿ ಮೂಡುತ್ತಿದೆ ಇದು ಒಳ್ಳೆಯದು ಎಂದು ಶ್ರೀಗಳು ಸಂತಸಪಟ್ಟರು.

ಇಡೀ ಕುಂಭಮೇಳದ ದಿನಗಳಲ್ಲಿ ನಮ್ಮ ದೇಶ ಅಷ್ಟೇ ಅಲ್ಲ ಇಡೀ ಪ್ರಪಂಚಕ್ಕೆ ಒಳ್ಳೆಯದಾಗಲಿ ಎಂದು ನಮ್ಮ ಭಾರತ ಪ್ರಾರ್ಥಿಸಿದೆ ನಮ್ಮ ವೇದ ಪದ್ಧತಿಯು ಸಹ ಇದನ್ನೇ ಬೋಧಿಸುತ್ತದೆ ಇದರಿಂದ ಎಲ್ಲರಿಗೂ ಒಳಿತಾಗುತ್ತದೆ ಎಂದು ಹೇಳಿದರು.

ಮುಂದೆ ಆಗುವ ಅನಾಹುತಗಳು ಕಷ್ಟಗಳು ತಪ್ಪಬೇಕಾದರೆ ಯುವಜನರು ಸೇರಿದಂತೆ ಇಡೀ ದೇಶದ ಜನತೆ ಮತ್ತು ಪ್ರಜಾಪ್ರತಿನಿಧಿಗಳು ದೈವಿಕ ಭಾವನೆ ಹೊಂದಿರಬೇಕು ಆದಷ್ಟು ದೇವಸ್ಥಾನಗಳನ್ನು ದರ್ಶಿಸಬೇಕು, ಪುರಾತನ ಆಲಯಗಳನ್ನು ದರ್ಶನ ಮಾಡಬೇಕು ದೇವಸ್ಥಾನಗಳ ಜೀರ್ಣೋದ್ಧಾರಗಳು ಆದರೆ ಇನ್ನೂ ಒಳಿತಾಗಲಿದೆ ಎಂದು ಶ್ರೀಗಳು ಅಭಿಪ್ರಾಯಪಟ್ಟರು.

# ರಸ್ತೆ ಅಪಘಾತ ಬೈಕ್ ಸವಾರ ಸಾವು

• ಉದಯವಾಹಿನಿ ಪಾವಗಡ

ತಾಲ್ಲೂಕಿನ ದೊಮ್ಮತಮರಿ ಗ್ರಾಮದ ಹಿಂದೂಪುರ ರಸ್ತೆಯಲ್ಲಿ ತಡರಾತ್ರಿ ದ್ವಿಚಕ್ರ ವಾಹನಕ್ಕೆ ಆಟೋ ಡಿಕ್ಕಿ ಹೊಡೆದು, ದ್ವಿಚಕ್ರ ವಾಹನ ಸವಾರ ಮೃತಪಟ್ಟಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆ, ಪೆನುಕೊಂಡ ತಾಲ್ಲೂಕಿನ ರೆಡ್ಡಿಪಲ್ಲಿ ಗ್ರಾಮದ ಐಟಿಐ ವಿದ್ಯಾರ್ಥಿ ಚರಣ್ (19) ಮೃತ ಯುವಕ. ದ್ವಿಚಕ್ರ ವಾಹನದಲ್ಲಿದ್ದ ಭರತ್, ತಿರುಮಲೇಶ್ ಎಂಬುವರಿಗೆ ಗಾಯಗಳಾಗಿವೆ. ಶಿವರಾತ್ರಿ ಪ್ರಯುಕ್ತ ದೇಗುಲಕ್ಕೆ ಭೇಟಿ ನೀಡಿ, ಹಿಂದೂಪುರದ ಕಡೆ ಹೋಗುತ್ತಿದ್ದ ದ್ವಿಚಕ್ರವಾಹನಕ್ಕೆ ಹಿಂದೂಪುರ ಕಡೆಯಿಂದ ದೊಮ್ಮತಮರಿ ಗ್ರಾಮದ ಕಡೆ ಬರುತ್ತಿದ್ದ ಆಟೊ ಡಿಕ್ಕಿಯಾಗಿದೆ. ಅಪಘಾತಕ್ಕೆ ಕಾರಣವಾದ ಆಟೊ ವಿವರ ತಿಳಿದುಬಂದಿಲ್ಲ. ತೀವ್ರವಾಗಿ ಗಾಯಗೊಂಡಿದ್ದ ಚರಣ್ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

# ಬೈಕ್‌ಗಳಿಗೆ ಬೆಂಕಿ: ಆರೋಪಿ ಬಂಧನ

• ಉದಯವಾಹಿನಿ ಕೊರಟಗೆರೆ

ಹಳೆಯ ದ್ವೇಷದ ಕಾರಣಕ್ಕೆ ಮನೆ ಮುಂದೆ ನಿಲ್ಲಿಸಲಾಗಿದ್ದ ಬೈಕ್‌ಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ ಆರೋಪಿಯನ್ನು ಕೊರಟಗೆರೆ ಪೊಲೀಸರು ಬಂಧಿಸಿದ್ದಾರೆ. ಪಟ್ಟಣದ ತೇರಿನ ಬೀದಿ ನಿವಾಸಿ ಕಾರ್ತಿಕ್ ಬಂಧಿತ ಆರೋಪಿ. ಈ ಸಂಬಂಧ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಟ್ಟಣದ ಮುಖ್ಯ ರಸ್ತೆಯ ಪ್ರಥಮ ದರ್ಜೆ ಕಾಲೇಜಿನ ಪಕ್ಕದ ಲಕ್ಷ್ಮಿನರಸಪ್ಪ ಎಂಬುವರು ತಮ್ಮ ಮನೆ ಮುಂದೆ ಎರಡು ದ್ವಿಚಕ್ರ ವಾಹನಗಳನ್ನು ನಿಲ್ಲಿಸಿದ್ದರು. ಮನೆಯವರೆಲ್ಲ ಮಹಾಶಿವರಾತ್ರಿ ಹಬ್ಬದ ಸಂಭ್ರಮದಲ್ಲಿದ್ದಾಗ ರಾತ್ರಿ ಸುಮಾರು 10.15 ಗಂಟೆ ವೇಳೆಗೆ ಎರಡೂ ಬೈಕ್‌ಗಳಿಗೆ ಬೆಂಕಿ ಹಚ್ಚಲಾಗಿತ್ತು. ಇದನ್ನು ಕಂಡ ಸ್ಥಳೀಯರು ಅಗ್ನಿಶಾಮಕ ಸಿಬ್ಬಂದಿಗೆ ಕರೆ ಮಾಡಿ, ಬೆಂಕಿ ನಂದಿಸಲು ಯತ್ನಿಸಲಾಯಿತು. ಆದಾಗ್ಯೂ, ಎರಡು ದ್ವಿಚಕ್ರ ವಾಹನಗಳು ಬೆಂಕಿಗೆ ಆಹುತಿಯಾಗಿವೆ.

# ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ, ಸಾಧನೆಗಳನ್ನು ಅರಿಯಬೇಕು

## ದೇಶದ ಅಸಮಾನತೆ ಸಮಸ್ಯೆಗೆ ಪರಿಹಾರ ಕಂಡುಹಿಡಿದ ಅಂಬೇಡ್ಕರ್ ಅವರ ಬದುಕು, ಸಾಧನೆ ವಿಶ್ವಕ್ಕೆ ಮಾದರಿ

• ಉದಯವಾಹಿನಿ ಚಾಮರಾಜನಗರ

ಬಹು ವೈವಿಧ್ಯಮಯ ಸಂಸ್ಕೃತಿ ಹೊಂದಿರುವ ಭಾರತದಲ್ಲಿ ಸಂವಿಧಾನದಡಿ ಎಲ್ಲಾ ನಾಗರಿಕರಿಗೆ ಏಕತೆಯಿಂದ ಬದುಕಲು ಭದ್ರನೆಲೆ ಒದಗಿಸಿಕೊಟ್ಟ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ-ಸಾಧನೆಗಳನ್ನು ಇಂದಿನ ವಿದ್ಯಾರ್ಥಿಗಳು ಓದುವ ಮೂಲಕ ಅರಿಯಬೇಕಿದೆ ಎಂದು ಚಂದಕವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಚ್.ಎನ್. ಸ್ವಾಮಿ ಅವರು ತಿಳಿಸಿದರು.

**ದೇಶದ ಅಸಮಾನತೆ ಸಮಸ್ಯೆಗೆ ಪರಿಹಾರ**

ನಗರದ ಜೆ.ಎಸ್.ಎಸ್. ಮಹಿಳಾ ಕಾಲೇಜು ಸಭಾಂಗಣದಲ್ಲಿಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೆ.ಎಸ್.ಎಸ್. ಮಹಿಳಾ ಕಾಲೇಜು ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಓದು ಬಹಳ ಮಹತ್ವಪೂರ್ಣ ಕಾರ್ಯಕ್ರಮವಾಗಿದೆ. ಸಂಸ್ಕಾರವಿದ್ದರೆ ಇಡೀ ಜಗತ್ತೇ ಗೌರವ ನೀಡಲಿದೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕಾರ ಬೆಳೆಸಿಕೊಳ್ಳಬೇಕು.

ಇಡೀ ಜಗತ್ತು ಗುರುತಿಸಿರುವ ಶ್ರೇಷ್ಠ ವ್ಯಕ್ತಿತ್ವ ಡಾ. ಬಿ.ಆರ್. ಅಂಬೇಡ್ಕರ್ ಅವರದ್ದು. ಅಂಬೇಡ್ಕರ್ ಬದುಕಿದ್ದ 65 ವರ್ಷಗಳಲ್ಲಿ 33 ವರ್ಷ ಅಧ್ಯಯನದಲ್ಲಿಯೇ ತೊಡಗಿದ್ದರು. ಅವರ ಜೀವನ ಸಾಧನೆಗಳನ್ನು ಅರ್ಥೈಸಿಕೊಂಡರೆ ಮಾತ್ರ ವಿದ್ಯಾರ್ಥಿ ಜೀವನ ಪರಿಪೂರ್ಣ ಹಂತ ತಲುಪಲು ಸಾಧ್ಯವಾಗಲಿದೆ ಎಂದರು.

ಆ ರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಉದಯ್‌ಕುಮಾರ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲೆ, ಸಾಹಿತ್ಯ, ಸಂಸ್ಕೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಜೊತೆಗೆ ವಿಶ್ವಕೋಶ ಎನಿಸಿಕೊಂಡಿರುವ ಡಾ. ಬಿ.ಆರ್. ಅಂಬೇಡ್ಕರ್ ಕುರಿತು ವಿದ್ಯಾರ್ಥಿಗಳಿಗೆ ಪೂರ್ಣ ಮಾಹಿತಿಯ ಅರಿವು ಮೂಡಿಸಲು ಅಂಬೇಡ್ಕರ್ ಓದು ಕಾರ್ಯಕ್ರಮವನ್ನು ಪ್ರತಿವರ್ಷ ಏರ್ಪಡಿಸಲಾಗುತ್ತಿದೆ. ಕಾರ್ಯಕ್ರಮದ ಸದ್ಬಳಕೆ ಇಲಾಖೆಯ ಸದುದ್ದೇಶವಾಗಿದೆ ಎಂದರು.

ಇದೇ ವೇಳೆ ಡಾ. ಬಿ.ಆರ್. ಅಂಬೇಡ್ಕರ್


ಉದಯವಾಹಿನಿ ಚಿತ್ರ

**ಜ್ಞಾನದ ಹಸಿವಿದ್ದ ಅಂಬೇಡ್ಕರ್ ಅವರು ತಮಗೆ ದೊರಕುತ್ತಿದ್ದ 2 ರೂ. ಗಳಲ್ಲಿ 1 ರೂ. ಊಟಕ್ಕೆ ವ್ಯಯಿಸಿದರೆ ಮತ್ತೊಂದು ರೂ. ನಲ್ಲಿ ಪುಸ್ತಕ ಕೊಳ್ಳುತ್ತಿದ್ದರು. ತಮ್ಮ ಮನೆಯಲ್ಲಿ 51 ಸಾವಿರ ಪುಸ್ತಕಗಳ ಬೃಹತ್ ಗ್ರಂಥಾಲಯವನ್ನು ಹೊಂದಿದ್ದರು. ಜೊತೆಗೆ ಸಮಯದ ಮೌಲ್ಯವನ್ನು ಅರಿತಿದ್ದ ಅಂಬೇಡ್ಕರ್ ಒಂದು ಕ್ಷಣ ವ್ಯರ್ಥ ಮಾಡದ ಮಾದರಿಯನ್ನು ಇಂದಿನ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕಾಗಿದೆ. ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿ, ಆ ಮೂಲಕ ದೇಶದ ಎಲ್ಲಾ ರಂಗಗಳ ಅಭಿವೃದ್ಧಿಗೆ ಕೊಡುಗೆ ನೀಡಿದ ಅಂಬೇಡ್ಕರ್‌ರವರ ಜೀವನ, ಸಾಧನೆಗಳನ್ನು ಓದುವ ಮೂಲಕ ಪ್ರತಿಯೊಬ್ಬರು ಅರಿತು ಕೊಳ್ಳಬೇಕಾಗಿದೆ -ಎಚ್.ಎನ್. ಸ್ವಾಮಿ**

ಕುರಿತು ಅಂತರ ಕಾಲೇಜು ಮಟ್ಟದಲ್ಲಿ ಏರ್ಪಡಿಸಲಾ ಗಿದ್ದ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ, ಆಶು ಭಾಷಣ, ಕವನ ವಾಚನ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ಹಾಗೂ ಬಹುಮಾನ ವಿತರಿಸಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ. ರಮೇಶ, ಜೆಎಸ್‌ಎಸ್ ಮಹಿಳಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಎ.ಆರ್. ಸುಷ್ಮಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಇದೊಂದು ಜಾತೀಯ ಅಸಮಾನತೆ ಕಿತ್ತೊಗೆದು ಸಾಮಾಜಿಕ ನ್ಯಾಯ ಹಾಗೂ ಸಮಾನತೆ ಮೂಲಕ ಜಗತ್ತಿಗೆ ಚಲನಶೀಲ ಸಮಾಜದ ಪರಿಕಲ್ಪನೆ ನೀಡಿದ ಡಾ. ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮ ಅರ್ಥಪೂರ್ಣವಾಗಿದೆ. ದೇಶದ ಅಸಮಾನತೆ ಸಮಸ್ಯೆಗೆ ಪರಿಹಾರ ಕಂಡುಹಿಡಿದ ಅಂಬೇಡ್ಕರ್ ಅವರ ಬದುಕು, ಸಾಧನೆ ವಿಶ್ವಕ್ಕೆ ಮಾದರಿಯಾಗಿದೆ. ಸಂವಿಧಾನದ ಮೂಲಕ ರಚನಾತ್ಮಕ ಸಮಾಜಕ್ಕೆ ಅಡಿಪಾಯ ಹಾಕಿದ ಅಂಬೇಡ್ಕರ್ ಅವರ ಅದರ್ಶ ಮೌಲ್ಯಗಳ ಬಗ್ಗೆ ಚಿಂತನೆಗಳು ಹೆಚ್ಚಾಗಿ ಆಗಬೇಕು**

**-ಡಾ. ಎನ್. ಮಹದೇವಸ್ವಾಮಿ , ಜೆ.ಎಸ್.ಎಸ್. ಮಹಿಳಾ ಕಾಲೇಜು ಪ್ರಾಂಶುಪಾಲರಾದ**

ಅಂತರಾಳದಿಂದ... EDITORIAL

# ಕುಲಪತಿ ನೇಮಕದಲ್ಲಿ ವಿಳಂಬ

## ಶೈಕ್ಷಣಿಕ ಚಟುವಟಿಕೆಗೆ ಪೆಟ್ಟು

ರಾಜ್ಯ ಸರ್ಕಾರದ ಅಧೀನದ ಆರು ವಿಶ್ವವಿದ್ಯಾಲಯಗಳು ನಾಯಕತ್ವ ಇಲ್ಲದೆ ಸೊರಗುತ್ತಿವೆ. ಅಂದರೆ, ಈ ವಿಶ್ವವಿದ್ಯಾಲಯಗಳಲ್ಲಿ ಪೂರ್ಣಾವಧಿ ಕುಲಪತಿ ಇಲ್ಲದೆ ಹಲವು ತಿಂಗಳು ಸಂದಿವೆ. ಇದು ಸರ್ಕಾರದ ಉದಾಸೀನ ಧೋರಣೆಯನ್ನು ತೋರಿಸುತ್ತಿದೆ. ಆರು ವಿಶ್ವವಿದ್ಯಾಲಯಗಳಲ್ಲಿ ಪೂರ್ಣಾವಧಿ ಕುಲಪತಿ ಇಲ್ಲದ ಕಾರಣಕ್ಕೆ ಅಲ್ಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಗದಗದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯ. ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಮತ್ತು ರಾಯಚೂರು ವಿಶ್ವವಿದ್ಯಾಲಯದಲ್ಲಿ ಈ ಸಮಸ್ಯೆ ಉಂಟಾಗಿದೆ.ಈ ವಿಶ್ವವಿದ್ಯಾಲಯಗಳಲ್ಲಿ ವಿವಿಧ ನಿಕಾಯಗಳ ಹಿರಿಯರಿಗೆ ಹಂಗಾಮಿ ಕುಲಪತಿ ಹೊಣೆ ವಹಿಸಲಾಗಿದೆ. ಆದರೆ ಅವರ ನೇಮಕ ತಾತ್ಕಾಲಿಕ ಆಗಿರುವ ಕಾರಣದಿಂದಾಗಿ ನಿರ್ಧಾರಗಳನ್ನು ಕೈಗೊಳ್ಳುವುದು ಕಷ್ಟವಾಗುತ್ತಿದೆ. ಪಂರ್ಣಾವಧಿ ಕುಲಪತಿಗೆ ಇರುವ ಅಧಿಕಾರ ಇವರಿಗೆ ಇಲ್ಲವಾದ ಕಾರಣದಿಂದಾಗಿ ಅವರು ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ, ಶೈಕ್ಷಣಿಕ ಕಾರ್ಯಕ್ರಮಗಳು ವಿಳಂಬ ಆಗುತ್ತಿದೆ. ಏಕೆಂದರೆ ನೇಮಕದಲ್ಲಿ ಆಗಿರುವ ವಿಳಂಬವೇ ಕಳವಳ ಮೂಡಿಸುವಂತಿದೆ. ಕುಲಪತಿ ನಿವೃತ್ತಿ ಆಗುವುದು ಯಾವಾಗ ಎಂಬುದು ಸಂಬಂಧಪಟ್ಟವರಿಗೆ ಮೊದಲೇ ಗೊತ್ತಿರುತ್ತದೆ. ಹೀಗಿದ್ದರೂ ಹೊಸ ಕುಲಪತಿ ನೇಮಕಕ್ಕೆ ಅಗತ್ಯವಿರುವ ಶೋಧನಾ ಸಮಿತಿಯನ್ನು ರಚಿಸಲು ಸರ್ಕಾರ ವಿಫಲವಾಗಿದ್ದುದು ಈಗಿನ ಸಮಸ್ಯೆಗೆ ಕಾರಣ, ಶೋಧನಾ ಸಮಿತಿಯಲ್ಲಿ ಸರ್ಕಾರ, ರಾಜ್ಯಪಾಲ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಪ್ರತಿನಿಧಿಗಳು ಇರುತ್ತಾರೆ. ಎಲ್ಲಾವೂ ಸರಿಯಾಗಿ ನಡೆದರೆ, ಕುಲಪತಿಯೊಬ್ಬರ ಅಧಿಕಾರ ಅವಧಿ ಪೂರ್ಣಗೊಳ್ಳುವ ಮೊದಲೇ ಶೋಧನಾ ಸಮಿತಿಯ ಕೆಲಸಗಳು ಪೂರ್ಣಗೊಂಡಿರಬೇಕು. ಆಗ ಹೊಸ ಕುಲಪತಿಯ ನೇಮಕ ಹಾಗೂ ಅಧಿಕಾರ ಹಸ್ತಾಂತರ ಪ್ರಕ್ರಿಯೆ ಸುಗಮವಾಗಿ ನಡೆಯುತ್ತದೆ. ಆದರೆ ಈ ಪ್ರಕ್ರಿಯೆಯಲ್ಲಿ ವಿಳಂಬ ಆದಾಗ, ವಿಶ್ವವಿದ್ಯಾಲಯಗಳಿಗೆ ಬಹುಕಾಲದವರೆಗೆ ನಾಯಕ ಇಲ್ಲದಂತೆ ಆಗುತ್ತದೆ. ಇದರ ಜೊತೆಗೆ ಕುಲಪತಿ ನೇಮಕದಲ್ಲಿ ಪ್ರತಿಭೆಯನ್ನು ಮಾನದಂಡವಾಗಿ ಇರಿಸಿಕೊಳ್ಳುವ ಬದಲು ವ್ಯಕ್ತಿಗಳ ರಾಜಕೀಯ ಒಲವು, ಜಾತಿ, ಪ್ರಭಾವ, ಹಣ ಮತ್ತು ಇತರ ಅಂಶಗಳನ್ನು ಪರಿಗಣಿಸಲಾಗುತ್ತದೆ. ನಾಯಕತ್ವದ ಗುಣ ಹಾಗೂ ಶೈಕ್ಷಣಿಕ ಅರ್ಹತೆಗಳಿಗಿಂತ ಇದೇ ಹೆಚ್ಚು ಪರಿಗಣಿತವಾಗುತ್ತವೆ ಎಂಬ ಆರೋಪಗಳು ಇವೆ. ಇದರಿಂದಾಗಿ ನೇಮಕ ಪ್ರಕ್ರಿಯೆಯ ಬಗ್ಗೆ ಅನುಮಾನ ಮೂಡುವಂತಾಗುತ್ತದೆ. ವಿಶ್ವವಿದ್ಯಾಲಯಗಳ ಭವಿಷ್ಯ ಹಾಳಾಗುತ್ತದೆ. ಕುಲಪತಿಗಳ ನೇಮಕವು ಅರ್ಹತೆ ಮತ್ತು ಸಾಮರ್ಥ್ಯವನ್ನು ಆಧರಿಸಿಯೇ ಆಗಬೇಕು. ಈ ಪ್ರಕ್ರಿಯೆಯಲ್ಲಿ ವೈಯಕ್ತಿಕ ಹಾಗೂ ರಾಜಕೀಯ ಕಾರ್ಯಸೂಚಿಗಳು ಕೆಲಸ ಮಾಡಬಾರದು.ಕರ್ನಾಟಕದ ವಿಶ್ವವಿದ್ಯಾಲಯಗಳು ಅನುದಾನದ ಕೊರತೆಯಂತಹ ಸಮಸ್ಯೆಗಳನ್ನು ಈಗಾಗಲೇ ಎದುರಿಸುತ್ತಿವೆ. ಹೀಗಾಗಿ, ಸಮಸ್ಯೆಗಳು ಇನ್ನಷ್ಟು ಹೆಚ್ಚಾಗದಂತೆ ನೋಡಿಕೊಳ್ಳಲು ಸರ್ಕಾರವು ಮುಂದಡಿ ಇರಿಸಬೇಕು. ಕುಲಪತಿ ಹುದ್ದೆಗೆ ಅರ್ಹರನ್ನು ತ್ವರಿತವಾಗಿ ನೇಮಕ ಮಾಡಬೇಕು. ಮುಂದಿನ ದಿನಗಳಲ್ಲಿ ಶೋಧನಾ ಸಮಿತಿಯನ್ನು ಸಕಾಲದಲ್ಲಿ ರಚಿಸಬೇಕು. ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗೆ ಸೂಕ್ತ ವ್ಯಕ್ತಿಯು ಸಮಯಕ್ಕೆ ಸರಿಯಾಗಿ ನೇಮಕ ಆಗುವಂತೆ ಮಾಡಬೇಕು. ಪೂರ್ಣಾವಧಿಯ ಹಾಗೂ ಸಮರ್ಥವಾದ ಕುಲಪತಿ ಇಲ್ಲದೇ ಇದ್ದರೆ ವಿಶ್ವವಿದ್ಯಾಲಯಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ಇದರಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಸೊರಗುತ್ತವೆ ಎಂಬುದು ಆಳುವ ವರ್ಗಕ್ಕೆ ತಿಳಿದಿರಬೇಕು. ಉನ್ನತ ಶಿಕ್ಷಣದ ಭವಿಷ್ಯವು ಚೆನ್ನಾಗಿರಬೇಕು ಎಂದಾದರೆ, ಸಮರ್ಥ ನಾಯಕತ್ವವು ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಇರಬೇಕು ಎಂಬುದು ಸರ್ಕಾರದ ಅರಿವಿಗೆ ಬರಬೇಕು. ವಿಶ್ವವಿದ್ಯಾಲಯ ಗಳ ಕುಲಾಧಿಪತಿ ಕೂಡ ಆಗಿರುವ ರಾಜ್ಯಪಾಲರು ಈ ವಿಚಾರದಲ್ಲಿ ಮೌನವಾಗಿ ಇರುವುದು ಆಶ್ಚರ್ಯ ಮೂಡಿಸುವಂತೆ ಇದೆ.

**ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಂಡಿವೆ. ನಿರ್ಧಾರ ಕೈಗೊಳ್ಳದೇ ಇರುವುದರಿಂದಾಗಿ ನಿತ್ಯದ ಚಟುವಟಿಕೆಗಳಿಗೆ ಅಡಚಣೆ ಉಂಟಾಗಿದೆ. ದೀರ್ಘಾವಧಿಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಅಗತ್ಯ ಅಧಿಕಾರ ಇಲ್ಲದಿರುವುದರಿಂದಾಗಿ ವಿದ್ಯಾರ್ಥಿಗಳು ಸಿಬ್ಬಂದಿ ಅನಿಶ್ಚಿತ ಸ್ಥಿತಿಗೆ ಸಿಲುಕಿದ್ದಾರೆ. ಇದರಿಂದಾಗಿ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಉಂಟಾಗುತ್ತದೆ.ಪೂರ್ಣಾವಧಿ ಕುಲಪತಿಗಳ ನೇಮಕಕ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ನೀಡಿರುವ ಭರವಸೆಯು ಅಲ್ಪ ಸಮಾಧಾನವನ್ನಷ್ಟೇ ನೀಡುತ್ತದೆ.**

---

• ಉದಯವಾಹಿನಿ,ಬೆಂಗಳೂರು

**ನಗರದ ಚಾಮರಾಜಪೇಟೆಯ ರಾಘವೇಂದ್ರ ಕಾಲೋನಿಯಲ್ಲಿರುವ ಶ್ರೀ ಶ್ರೀಪಾದರಾಜ ಮಠದ ಶಾಖೆಯ 88ನೇ ವಾರ್ಷಿಕೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಶ್ರೀನಿವಾಸ ದೇವರಿಗೆ, ಶ್ರೀ ಪ್ರಾಣದೇವರಿಗೆ, ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರಿಗೆ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಪ್ರವಚನ ಕಾರ್ಯಕ್ರಮ ನಂತರ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು, ಹಾಗು ಮಹಾಶಿವರಾತ್ರಿ ಹಬ್ಬದ ನಿಮಿತ್ತ ವಿಶೇಷ ರುದ್ರಹೋಮ ಮತ್ತು ರುದ್ರಾಭಿಷೇಕ ಕಾರ್ಯಕ್ರಮಗಳು ಕೂಡ ನೆರವೇರಿದವು.**



---



# ರಾಮಾಯಣ

**ದಶರಥನು ಶ್ರೀ ರಾಮನನ್ನು ಬರ ಮಾಡಿ ಕೊಳ್ಳು ವುದು**

• ಹಿಂದಿನ ಸಂಚಿಕೆಯಿಂದ **78 ನೆಯ ಅಧ್ಯಾಯ**

ಅಲ್ಲದೆ ಇತರ ನಾನಾ ಪುಣ್ಯನದಿಗಳಿಂದಲೂ, ಸರೋವರಗಳಿಂದಲೂ ಸಮುದ್ರ, ಗಳಿಂದಲೂ ಜಲವನ್ನು ತರಲಾಗಿತ್ತು. ಚಿನ್ನ ಮತ್ತು ಬೆಳ್ಳಿಯ ಕಲಶಗಳಲ್ಲಿ ಅರಳನ್ನು ತುಂಬಿ ತಳಿರುಗಳಿಂದ ಮುಚ್ಚಿದ್ದರು. ಕೆಲವು ಕುಂಭಗಳಲ್ಲಿ ಪುಣೋದಕವನ್ನು ತುಂಬಿ, ಕಮಲ ಮತ್ತು ನೈದಿಲೆಯ ಹೂಗಳನ್ನು ಇಟ್ಟಿದ್ದರು. ಹಾಲು, ಮೊಸರು, ತುಪ್ಪ, ಜೇನುತುಪ್ಪ, ಅರಳು, ದರ್ಭೆ ಮತ್ತು ಪುಷ್ಪಗಳು ಸಿದ್ಧವಾಗಿದ್ದವು. ಸದಾಚಾರದಲ್ಲಿ ನಡೆಯುವ ವೇಶ್ಯೆಯರು ಸರ್ವಾಭರಣಭೂಷಿತ ರಾಗಿ ಬಂದಿದ್ದರು. ಶ್ರೀರಾಮನಿಗೋಸ್ಕರ ಚಿನ್ನದ ಹಿಡಿಕೆಯುಳ್ಳ ರತ್ನ ಖಚಿತವಾದ ಶ್ವೇತಚಾಮರವು ತರಲ್ಪಟ್ಟಿತ್ತು. ಚಂದ್ರಮಂಡಲದಂತೆ ಶುಭ್ರವಾದ ಶ್ವೇತಚ್ಛತ್ರವು ಸಿದ್ಧವಾಗಿತ್ತು. ವೃಷಭವೂ ಬಿಳಿಯ ಕುದುರೆಯೂ ಬಂದು ನಿಂತಿದ್ದವು. ಮಂಗಳಾರ್ಥವಾಗಿ ಎಂಟುಮಂದಿ ಕನ್ನಿಕೆಯರು ಆಭರಣಭೂಷಿತೆಯರಾಗಿ ಬಂದಿದ್ದರು. ಸಕಲವಿಧ ವಾದ್ಯಗಳು ನೆರೆದಿದ್ದವು. ಸ್ತೋತ್ರಪಾಠಕರು ರಾಜಾಜ್ಞೆಯಂತೆ ಬಂದು ಸೇರಿದ್ದರು. ಅವರೆಲ್ಲರೂ ಅಲ್ಲಿ ನೆರೆದಿದ್ದ ಸಾಮಂತರಾಜರೊಡನೆ ಹೀಗೆ ಹೇಳುತ್ತಿದ್ದರು : ಮಹಾರಾಜನು ಕಾಣಿಸುವುದಿಲ್ಲವಲ್ಲ ಮುಂದಿನ ವಿಷಯವನ್ನು ನಮಗೆ ತಿಳಿಸುವವರು ಯಾರು ನೂರನು ಆಗಲೇ ಉದಿಸಿಬಿಟ್ಟಿದ್ದಾನೆ. ಶ್ರೀರಾಮನಿಗೆ ಯುವರಾಜಪಟ್ಟಾಭಿಷೇಕವಾಗಬೇಕಾಗಿದೆ . ಆ ಮಾತನ್ನು ಕೇಳಿ ಸುಮಂತ್ರನು ನೆರೆದಿದ್ದ ಮಹಾಜನರನ್ನು ಅಭಿವಂದಿಸಿ ಹೀಗೆಂದನು: ನೀವು ಮಹಾರಾಜನಿಗೂ ಶ್ರೀರಾಮನಿಗೂ ಪೂಜ್ಯರು. ನೀವು ಬಂದ ವೃತ್ತಾಂತವನ್ನು ದಶರಥ ರಾಯನಿಗೆ ಅರಿಕೆಮಾಡುತ್ತೇನೆ ಎಂದು ಹೇಳಿ ಶೀಘ್ರದಲ್ಲಿ ಅಂತಃಪುರಕ್ಕೆ ಹೋದನು. ಅಲ್ಲಿ ದಶರಥನನ್ನು ಸ್ತೋತ್ರಮಾಡುತ್ತ ಎಲೈ ದಶರಥರಾಯನೆ, ನಿನಗೆ ಹರಿಹರಬ್ರಹ್ಮಾದಿಗಳೂ ಇಂದ್ರಾದಿದೇವತೆಗಳೂ ಅನೇಕ ಶ್ರೇಯಸ್ಸನ್ನುಂಟುಮಾಡಲಿ. ಬೆಳಗಾಯ್ತು : ಏಳು. ವಸಿಷ್ಠನೇ ಮೊದಲಾದ ವೇದಪಾರಂಗತರಾದ ಬ್ರಾಹ್ಮಣರು ಶ್ರೀರಾಮನ ಪಟ್ಟಾಭಿಷೇಕಮುಹೂರ್ತವು ಸಮೀಪವಾಯಿತೆಂದು ನಿನ್ನ ದರ್ಶನಕ್ಕಾಗಿ ಬಂದಿದ್ದಾರೆ ಎಂದು ಬಿನ್ನವಿಸಿದನು. ಆಗ ದಶರಥರಾಯನು ಎಲೈ ಸುಮಂತ್ರನೆ, ಮೊದಲೇ ಶ್ರೀರಾಮನನ್ನು ಇಲ್ಲಿಗೆ ಕರೆತರಹೇಳಿದೆನು. ಏಕೆ ನನ್ನ ಆಜ್ಞೆಯನ್ನು ಮೀರಿದೆ ನಾನು ಮಲಗಿ ನಿದ್ದೆ ಮಾಡುತ್ತಿಲ್ಲ. ಶ್ರೀರಾಮನನ್ನು ಇಲ್ಲಿಗೆ ಕರೆದುಕೊಂಡು ಬಾ ಎಂದು ಆಜ್ಞಾಪಿಸಿದನು. ಸುಮಂತ್ರನು ತನ್ನ ಒಡೆಯನಾದ ದಶರಥರಾಯನ ಮಾತನ್ನು ಶಿರಸಾವಹಿಸಿ ಆ ರಾಯನ ವಾಕ್ಯವು ಶ್ರೀರಾಮನಿಗೆ ಹಿತವೆಂದೆಣಿಸಿ ಸಂತೋಷಯುಕ್ತನಾಗಿ ಅಲ್ಲಿಂದ ಹೊರಟು ಅನೇಕ ಧ್ವಜಪತಾಕಿಗಳಿಂದ ಅಲಂಕರಿಸಲ್ಪಟ್ಟಿದ್ದ ರಾಜಮಾರ್ಗವನ್ನು ಪ್ರವೇಶಿಸಿದನು. ಮಾರ್ಗದಲ್ಲಿ ಶ್ರೀರಾಮನ ಪಟ್ಟಾಭಿಷೇಕ ಪ್ರಸಂಗಗಳನ್ನು ಕೇಳುತ್ತ ಶ್ರೀರಾಮನ ಅರಮನೆಗೆ ಹೋದನು. ಆ ಭವನವು ಕೈಲಾಸಪರ್ವತದಂತೆಯೂ ದೇವೇಂದ್ರನ ಅರಮನೆಯಂತೆಯ ವಿಕಸಿತವಾದ ತಾವರೆಹೂವುಗಳಿಂದ ಮನೋಹರವಾಗಿತ್ತು.

**ಮುಂದುವರಿಯುವುದು...**

---

# ಅಂಬೇಡ್ಕರ್ ಸಂದೇಶಗಳು



☛ ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ

ಅಂಬೇಡ್ಕರ್ ಸಂದೇಶಗಳು ಇದು ಡಿ.ಎಸ್.ವೀರಯ್ಯ ಅವರ ಸಂಗ್ರಹ ಕೃತಿ. ಈ ಕೃತಿಗೆ ಮುನ್ನುಡಿಯನ್ನು ಡಾ.ಬೈರಮಂಗಲ ರಾಮೇಗೌಡ ಅವರುಬರೆದಿದ್ದಾರೆ. ಬೆಂಗಳೂರಿನ ಪಿತಾಮಹ ಪ್ರಕಾಶನ ಅವರಿಂದ ಪ್ರಕಟಗೊಂಡಿದೆ.

ಒಂದು ಕುಗ್ರಾಮದಲ್ಲಿ ಹುಟ್ಟಿ ಬೆಳೆದ ಲೇಖಕರು ತಮ್ಮ ಹಾಸ್ಟೆಲ್ಲಿನ ಅನುಭವ, ಸಹ ವಿದ್ಯಾರ್ಥಿಗಳೊಂದಿಗೆ ಓದು ಮತ್ತು ಆಟ, ಹಾಸ್ಯ, ವಿದ್ಯಾರ್ಥಿ ಪರ ಹೋರಾಟಗಳ ಪ್ರತಿಫಲವೇ ಈ ಕೃತಿಯಾಗಿದೆ.

ಅಂಬೇಡ್ಕರ್ ಸಂದೇಶಗಳು ಒಂದು ವಿಶಿಷ್ಟ ಲೇಖನಗಳ ಸಂಗ್ರಹ,ಅನೇಕ ಸಂದರ್ಭಗಳಲ್ಲಿ ಅಂಬೇಡ್ಕರ್‌ರವರು ಮಾಡಿದ ಭಾಷಣ, ಬರಹಗಳು, ಮಂಡಿಸಿದ ಲೇಖನಗಳು ಪ್ರಬಂಧಗಳು ಪತ್ರಿಕಾ ಪ್ರಕಟಣೆಯಲ್ಲಿ ದಾಖಲಾದ ತುಣುಕುಗಳು. ಅಂಬೇಡ್ಕರ್‌ರವರು ಸಂಸತ್ತಿನಲ್ಲಿ ಮಾಡಿದ ಭಾಷಣ, ಸಂವಿಧಾನದ ರಚನಾ ಸಮಿತಿಯ ಅಧ್ಯಕ್ಷರಾಗಿ ಬರೆದ ಪತ್ರಿಕೆಗಳಲ್ಲಿ ದಾಖಲು ಮಾಡಿದ ವಿಚಾರಗಳು, ವಿವಿಧ ಲೇಖಕರು ಅವರೇ ಬರೆದ ಅನೇಕ ಕೃತಿಗಳಿಂದ ಆಯ್ಕೆ ಮಾಡಿಕೊಂಡ ಅರ್ಥಪೂರ್ಣ ವಾಖೆಗಳು, ಸಂದೇಶಗಳು ಈ ಕೃತಿಯಲ್ಲಿ ದಾಖಲಾಗಿವೆ. ಅಂಬೇಡ್ಕರ್ ಕೇವಲ ಒಬ್ಬ ವ್ಯಕ್ತಿಯಲ್ಲ, ಅವರು ಒಂದು ಶಕ್ತಿ ಕೇವಲ ಸಾಧಾರಣದ ಶಕ್ತಿಯಲ್ಲ, ಅವರು ಬೃಹತ್ ಶಕ್ತಿ, ಇಡೀ ದೇಶಕ್ಕೆ ಅಲ್ಲ ಮನುಕುಲಕ್ಕೂ ಶಕ್ತಿಯಾದವರು 'ವಿಶ್ವ ಮಾನ್ಯತೆ' ಪಡೆದ ವಿಶ್ವಮಾನವ ಸಮಾಜ ಶಿಲ್ಪಿ, ದೇಶ ಪ್ರೇಮದ ಸಂಕೇತ, ಸ್ವಾಭಿಮಾನದ ಸಂಕೇತ, ಧೈರ್ಯದ ಸಂಕೇತ ಸಾಮಾಜಿಕ ಚಿಕಿತ್ಸಕ, ಶ್ರೇಷ್ಠ ಪಂಡಿತ, ಅವರ ಭಾಷಣಗಳು, ಬರಹಗಳು, ಅವರ ಬಗ್ಗೆ ಬರೆದ ಕೃತಿಗಳು ದೇಶ ವಿದೇಶಗಳ ನಾಯಕರುಗಳ ಪುಂಸೆಗೆ ಒಳಗಾಗಿವೆ. ಅನುಕರಣೆಗೆ ಹದವಾಗಿದೆ. ಅವರೊಬ್ಬ ವ್ಯಕ್ತಿಯಲ್ಲ, ಅವರೊಬ್ಬ ದಾರ್ಶನಿಕ, ಮಹಾ ಪುರುಷರ ಮಧ್ಯೆ, ಎತ್ತರಕ್ಕೆ ನಿಂತ ದೊಡ್ಡ ಆಲದ ಮರ, ಅವರಲೇಖನಗಳ ಸ್ಫೂರ್ತಿ, ಹರಿತವಾದ ಮಾತುಗಳು, ಕಠಿಣ, ಚರ್ಚೆಗಳು, ಹೋರಾಟಗಳು, ದುಂಡುಮೇಜಿನ ಪರಿಷತ್ತಿನಲ್ಲಿ ಮಂಡಿಸಿದ ಲೇಖನಗಳು, ಪ್ರತಿಪಾದನೆಗಳು, ನಿಷ್ಠುರ ಮಾತುಗಳು ಅವರಿಗಿದ್ದ ದೇಶಪ್ರೇಮಕ್ಕೆ ಸಾಕ್ಷಿಯಾಗಿ ಇಂದಿನ ಪೀಳಿಗೆಗೆ ಮಾರ್ಗದರ್ಶನವಾಗಿವೆ, ದಾರಿದೀಪವಾಗಿದೆ. ಅವರೊಂದು ಜ್ಞಾನ ಸಾಗರ, ಪ್ರಖರ ಪಂಡಿತ, ಆಡುಮೇಯದ ಸೊಪ್ಪಿಲ್ಲ. ಎಂಬ ಗಾದೆಯಂತೆ ಅವರು ಮಾಡದ ಅಧ್ಯಯನವಿಲ್ಲ. ಓದಿರದ ಪುಸ್ತಕಗಳಿಲ್ಲ. ಅಧ್ಯಯನ ಮಾಡದ ಕ್ಷೇತ್ರಗಳಿಲ್ಲ. ಅದರಿಂದಾಗಿಯೇ ಇಂದು ಪ್ರಪಂಚದೆಲ್ಲೆಡೆ ಅವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿದೆ. ಗಲ್ಲಿ ಗಲ್ಲಿಗಳಲ್ಲಿ ಅವರ ಪ್ರತಿಮೆಗಳು ರಾರಾಜಿಸುತ್ತಿವೆ.




**ಓದುವವರಿಗೆ ಅನುಕೂಲವಾಗುವಂತೆ, ಅನುಕರಣೆ ಮಾಡುವವರಿಗೆ ಬೆಳಕಾಗಿ, ಎಲ್ಲಾ ದೇಶ ಪ್ರೇಮಿಗಳಿಗೆ ಮಾರ್ಗದರ್ಶನವಾಗಲೆಂದು ಈ ದಾರ್ಶನಿಕರ ಎಲ್ಲಾ ಸಂದೇಶಗಳನ್ನೂ ಒಗ್ಗೂಡಿಸಿ, ಸುಮಾರು 2000 ಸಂದೇಶಗಳನ್ನು ಸಂಗ್ರಹಿಸಿ ಒಂದು ಪುಸ್ತಕವನ್ನು ಈ ದೇಶವಾಸಿಗಳಿಗೆ ನೀಡುವ ಉದ್ದೇಶದಿಂದ ಪ್ರಕಟಿಸುತ್ತಿದ್ದೇನೆ.**

ಅವರು ನಿತ್ಯ ಸ್ಮರಣೆಯ ಸಂಕೇತವಾಗಿದ್ದಾರೆ. ನಾನು ಈ ಕೃತಿಯನ್ನು ಹೊರತಂದಿರುವ ಉದ್ದೇಶವಿಷ್ಟೆ, ಎಲ್ಲಾರೂ ಅವರ ಸಾಹಿತ್ಯ ಸಾಗರವನ್ನು ಓದುವುದಕ್ಕಾಗುವುದಿಲ್ಲ. ಅರ್ಥ ಮಾಡಿಕೊಡುವುದ ಕ್ಕಾಗುವುದಿಲ್ಲ. ಜೀವನದಲ್ಲಿ ಅವರ ಭಾಷಣಗಳು ಹಾಗೂ ಬರಹಗಳನ್ನೆಲ್ಲವನ್ನೂ ಓದಿ ಅರಗಿಸಿಕೊಳ್ಳುವುದಕ್ಕಾಗುವುದಿಲ್ಲ. ಸಂಶೋಧಕರಿಗೆ, ಭಾಷಣಕಾರರಿಗೆ, ಉನ್ನತ ಶಿಕ್ಷಣದ ವಿದ್ಯಾರ್ಥಿಗಳ ಸಂಶೋಧನೆಗೆ ಈ ಕೃತಿ ಆಹಾರವಾಗಲೆಂದು ಈ ಸಂಕ್ಷಿಪ್ತ ಸಂಗ್ರಹವನ್ನು ಹೊರತರುತ್ತಿದ್ದೇನೆ. ಓದುಗರು ಇದರ ಸದುಪಯೋಗ ಪಡೆದರೆ ಅದಕ್ಕಿಂತ ಕೊಡುಗೆ ನನಗೆ ಮತ್ತೊಂದಿಲ್ಲ. ಈ ಸಂದೇಶಗಳು ಜೀವನಕ್ಕೆ ಮತ್ತು ಸಮಾಜಕ್ಕೆ ಬದಲಾವಣೆ ಕುರಿತು ಅನೇಕ ಅರ್ಥ ಪೂರ್ಣವಾದ ವಾಕ್ಯವನ್ನು ಕೊಡುತ್ತದೆ. ಅಂಬೇಡ್ಕರ್ ತತ್ವದಲ್ಲಿ ನಾವು ನಡೆದರೆ ನಮ್ಮ ಜೀವನವು ಬದಲಾವಣೆಯಾಗಿದೆ ಶೋಷಣೆ ಎಂಬುದು ನಮ್ಮ ಜೀವನದಲ್ಲಿ ಇರುವುದಿಲ್ಲವೆಂದು ಸಂದೇಶ ಸಾರುತ್ತದೆ. ಲೇಖಕರಿಗೆ ಅಭಿನಂದನೆಗಳನ್ನು.

ಜೈ ಭೀಮ್ ಜೈ ಭೀಮ್ ಜೈ ಭೀಮ್ ಜೈ ಭೀಮ್....

---

# ಶ್ರೀ ಆದಿಶಕ್ತಿ ಅಮ್ಮನವರ ದೇವಸ್ಥಾನ ನವೀಕರಣ

## ಕಾಮಗಾರಿಗಳಿಗೆ ಬಿಬಿಎಂಪಿ ಸಹಕಾರ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಕೇಂದ್ರ ಕಛೇರಿ ಅವರಣದಲ್ಲಿರುವ ಶ್ರೀ ಅದಿ ಶಕ್ತಿ ಅಮ್ಮನವರ ದೇವಸ್ಥಾನ ಸರಿಸುಮಾರು 300ವರ್ಷಗಳ ಹಳೆಯದಾದ ಪುರಾತನ ದೇವಸ್ಥಾನವಾಗಿದೆ, ಇತ್ತಿಚೇಗೆ ದೇವಸ್ಥಾನ ಅಭಿವೃದ್ಧಿ , ನವೀಕರಣ ಕಾರ್ಯ ಕೈಗೊಂಡಗ ಆರ್ಥಿಕವಾಗಿ ತೊಂದರೆಯಾದ ಕಾರಣ ನಿಧಾನಗತಿಯಲ್ಲಿ ನವೀಕರಣ ಕಾರ್ಯ ನಡೆಯುತ್ತಿದೆ ಇದರ ಕುರಿತು ದೇವಸ್ಥಾನ ನಿರ್ವಹಣೆ ಮಾಡುವವರು ಮತ್ತು ಅರ್ಚಕರು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರನ್ನು ಭೇಟಿ ಮಾಡಿದರು.

ಎ.ಅಮೃತ್ ರಾಜ್ ರವರು ಮತ್ತು ಸಂಘದ ಪದಾಧಿಕಾರಿಗಳನ್ನ ದೇವಸ್ಥಾನದವರು ನವೀಕರಣ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಶ್ರೀ ಅದಿ ಶಕ್ತಿ ಅಮ್ಮನವರ ದೇವಸ್ಥಾನದಲ್ಲಿ ಸಪ್ತಮಾತೃಕೆಯವರು, ನವಗ್ರಹ ದೇವರು ದೇವಸ್ಥಾನವಿದೆ . ಇತಿಹಾಸ ಪ್ರಸಿದ್ಧಿ ಪಡೆದಿರುವ ದೇವಸ್ಥಾನವಾಗಿದೆ. ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ನವೀಕರಣ ಕಾರ್ಯದಲ್ಲಿ ಆರ್ಥಿಕ ಸಹಕಾರ ನೀಡಬೇಕು. ಮಹಾಪೌರರ ಪದಗ್ರಹಣ ಮತ್ತು ಬಜೆಟ್ ಮಂಡನೆ, ಕರಗ ಮಹೋತ್ಸವ ನವರಾತ್ರಿ ಉತ್ಸವಗಳು, ವಿಶೇಷ ಪೂಜೆ ನಡೆಯುತ್ತಿರುತ್ತದೆ. ಬರುವ ಭಕ್ತಾಧಿಗಳಿಗೆ ಸುಸಜ್ಜಿತ ದೇವಸ್ಥಾನ ಹಾಗೂ ಪ್ರಸಾದ ವಿತರಣಾ ಸ್ಥಳ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಿದೆ.



☛ ಉದಯವಾಹಿನಿ ಚಿತ್ರ

**ಎ.ಅಮೃತ್ ರಾಜ್ ರವರು ಹೇಳಿಕೆ**

**ಬಿಬಿಎಂಪಿ ಕೇಂದ್ರ ಕಛೇರಿ ಅವರಣದಲ್ಲಿರುವ ದೇವಸ್ಥಾನವನ್ನು ಅತಿಶೀಘ್ರದಲ್ಲಿ ವೇಗವಾಗಿ ಅಭಿವೃದ್ಧಿ ಮತ್ತು ನವೀಕರಣ ಕಾರ್ಯವಾಗಲು ಅಧಿಕಾರಿ ಮತ್ತು ನೌಕರರ ಆರ್ಥಿಕ ಸಹಕಾರ ನೀಡಬೇಕು ಎಂದು ಮನವಿ ಮಾಡಲಾಗುತ್ತಿದೆ ಎಂದು ಎ.ಅಮೃತ್ ರಾಜ್ ರವರು ಹೇಳಿದರು**

---


# ನೀರು ಬಿಟ್ಟ ರಾಜ್ಯ ಕಾಂಗ್ರೆಸ್ ಸರ್ಕಾರ: ಬಿಜೆಪಿಯಿಂದ ವಿರೋಧ

• ಉದಯವಾಹಿನಿ,ಬೆಂಗಳೂರು

ಕರ್ನಾಟಕ ಸರ್ಕಾರವು ಇದೀಗ ತೆಲಂಗಾಣ ರಾಜ್ಯಕ್ಕೆ ನೆರವು ನೀಡುವ ಮೂಲಕ ಮತ್ತೆ ವಿವಾದಕ್ಕೆ ಗುರಿಯಾಗಿದೆ. ಕರ್ನಾಟಕ ಹಾಗೂ ತೆಲಂಗಾಣ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿ ಇದೆ. ಇನ್ನು ಇಂಡಿಯಾ ಮೈತ್ರಿಕೂಟ ಅಧಿಕಾರದಲ್ಲಿ ಇರುವ ರಾಜ್ಯಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರವು ನೆರವು ನೀಡುತ್ತಿದೆ. ಈ ಮೂಲಕ ಕನ್ನಡಿಗರು ಹಾಗೂ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗುತ್ತಿದೆ ಎಂದು ಇದೀಗ ಬಿಜೆಪಿ ಆರೋಪಿಸಿದೆ. ಕರ್ನಾಟಕ ಸರ್ಕಾರದ ನೀರು ಬಿಡುವ ನಿರ್ಧಾರಕ್ಕೆ ತೀವ್ರ ಆಕ್ಷೇಪಣೆ ವ್ಯಕ್ತವಾಗಿದೆ.

ಕರ್ನಾಟಕ ಸರ್ಕಾರವು ತೆಲಂಗಾಣ ರಾಜ್ಯಕ್ಕೆ ನೀರು ಬಿಟ್ಟಿದ್ದು. ಈ ವಿಷಯ ಇದೀಗ ವಿವಾದಕ್ಕೆ ಕಾರಣವಾಗಿದೆ. ಕರ್ನಾಟಕದಲ್ಲಿ ಬಿಸಿಲಿನ ಝಳ ಹೆಚ್ಚಳವಾಗುತ್ತಿದ್ದು. ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಳವಾಗುವ ಕರ್ನಾಟಕದಲ್ಲಿ ಆತಂಕ ಎದುರಾಗಿದೆ. ಅಲ್ಲದೆ ಕರ್ನಾಟಕದಲ್ಲಿ ಶಾಖದ ಅಲೆ ಹೆಚ್ಚಾಗುತ್ತಿದ್ದು ಮುಂದಿನ ದಿನಗಳಲ್ಲಿ ಬಿಸಿಲ ಝಳ ಹೆಚ್ಚಳವಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಮುಂದಿನ ದಿನಗಳಲ್ಲಿ ರೈತರ ಬೆಳೆಗಳಿಗೆ ನೀರಿನ ಕೊರತೆ ಆಗುವ ಆತಂಕ ಇದೆ. ಈ ರೀತಿ ಇರುವಾಗಲೇ ಕರ್ನಾಟಕ ಸರ್ಕಾರವು ತೆಲಂಗಾಣ ರಾಜ್ಯಕ್ಕೆ ನೀರು ಬಿಟ್ಟಿದೆ. ಈ ಸಂಬಂಧ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿಯು ಸೋಷಿಯಲ್ ಮೀಡಿಯಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಅಧಿಕಾರಕ್ಕೆ ಬಂದ ಆರಂಭದಲ್ಲಿ ಇಂಡಿಯಾ ಮೈತ್ರಿಕೂಟ ಮನವೊಲಿಸಲು ತಮಿಳುನಾಡು ಸರ್ಕಾರಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರವು ಕಾವೇರಿ ನೀರು ಬಿಟ್ಟು ಕನ್ನಡಿಗರಿಗೆ ದ್ರೋಹ ಬಗೆದಿತ್ತು. ಇದೀಗ ಜಲಸಂಪನ್ಮೂಲ ಸಚಿವ ಡಿ.ಕೆ ಶಿವಕುಮಾರ್ ಅವರು, ತೆಲಂಗಾಣ ಕಾಂಗ್ರೆಸ್ ಸರ್ಕಾರಕ್ಕೆ ನಾರಾಯಣಪುರ ಡ್ಯಾಂನಿಂದ ರಾತ್ರೋ ರಾತ್ರಿ ಕದ್ದು ಮುಚ್ಚಿ 1 ಟಿಎಂಸಿಗೂ ಅಧಿಕ ನೀರನ್ನು ಬಿಡುಗಡೆ ಮಾಡಿದ್ದಾರೆ ಎಂದು ಆರೋಪ ಮಾಡಿದೆ.

ಸಿದ್ದರಾಮಯ್ಯ ಅವರ ಸರ್ಕಾರ ಕನ್ನಡಿಗರಿಗೆ ಖಾಲಿ ಚೊಂಬು ಕೊಟ್ಟು ಕೇರಳ, ತಮಿಳುನಾಡು ಹಾಗೂ ತೆಲಂಗಾಣಕ್ಕೆ ಅಕ್ಷಯಪಾತ್ರೆ ನೀಡುತ್ತಿದೆ ಎಂದು ದೂರಲಾಗಿದೆ. ಇನ್ನು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ನಮ್ಮ ಪರಿಸ್ಥಿತಿಯನ್ನು ನೋಡಿಕೊಂಡೇ ತೆಲಂಗಾಣಕ್ಕೆ ನೀರು ಬಿಡಲಾಗಿದೆ ಎಂದು ಹಾಗೂ ನೀರಾವರಿ ಸಚಿವ ಡಿಕೆಶಿ ಅವರು ಹೇಳಿದ್ದಾರೆ.



☛ ಉದಯವಾಹಿನಿ ಚಿತ್ರ

---


• ಉದಯವಾಹಿನಿ,ಬೆಂಗಳೂರು

# 404ನೇ ಪಟ್ಟಾಭಿಷೇಕೋತ್ಸವ, 430ನೇ ಜನ್ಮ ದಿನೋತ್ಸವ

ಜಯನಗರ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ದಿನಾಂಕ 1-3-2025 ರಿಂದ 6-3-2025ರ ವರೆಗೆ ಕಲಿಯುಗ ಕಾಮಧೇನು ಶ್ರೀ ರಾಘವೇಂದ್ರ ಸ್ವಾಮಿಗಳವರ 404ನೇ ಪಟ್ಟಾಭಿಷೇಕೋತ್ಸವ ಮತ್ತು 430ನೇ ಜನ್ಮದಿನೋತ್ಸವ ಸಮಾರಂಭಗಳು ಜರುಗಲಿದೆ.

ಮಾರ್ಚ್ 1, ಶನಿವಾರ : ಗುರುಗಳ ಪಟ್ಟಾಭಿಷೇಕದ ಪ್ರಯುಕ್ತ ಬೆಳಗ್ಗೆ 8-00ಕ್ಕೆ ಶ್ರೀ ಬಾಳಗಾರು ಮಠದ ಮೂಲ ಮಹಾ ಸಂಸ್ಥಾನದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ 1008 ಶ್ರೀ ಅಕ್ಷೋಭ್ಯ ರಾಮ ಪ್ರಿಯತೀರ್ಥ ಶ್ರೀಪಾದಂಗಳವರ ಅಮೃತ ಹಸ್ತದಿಂದ ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನಕ್ಕೆ ಅಷ್ಟೋತ್ತರ ಸಹಿತ ಸಹಸ್ರ ಕಳಶ ಕ್ಷೀರಾಭಿಷೇಕ. ಬೆಳಗ್ಗೆ 9-00ಕ್ಕೆ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕೋತ್ಸವದ ಅಂಗವಾಗಿ ಸ್ವರ್ಣ ಸಿಂಹಾಸನದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಪಾದುಕೆಯನ್ನು ಇರಿಸಿ, ಪುಷ್ಪವೃಷ್ಠಿಯನ್ನು ಶ್ರೀಗಳ ಅಮೃತ ಹಸ್ತದಿಂದ ನೆರವೇರಲಿದ್ದು, ಕಾರ್ಯಕ್ರಮ ಉದ್ಘಾಟನೆ ಆಗಲಿದೆ. ಹಾಗೂ ಸಂಜೆ 7-00ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಹೃದ್ಯಾ ಅಕಾಡೆಮಿಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ **ನಿರ್ದೇಶನ :** ವಿದುಷಿ ಶ್ರೀಮತಿ ರೂಪಶ್ರೀ ಕೆ.ಎಸ್.

ಮಾರ್ಚ್ 6, ಗುರುವಾರ : ರಾಯರ ವರ್ಧಂತ್ಯೋತ್ಸವದ ಪ್ರಯುಕ್ತ ಬೆಳಗ್ಗೆ 8-00ಕ್ಕೆ ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನಕ್ಕೆ ಲಕ್ಷ ಪುಷ್ಪಾರ್ಚನೆ. ಸಂಜೆ 7-00ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಚಾಂದಿನಿ ಗರ್ತಿಕೆರೆ ಮತ್ತು ಸಂಗಡಿಗರಿಂದ ದಾಸವಾಣಿ. ವಿಶೇಷವಾಗಿ ಪ್ರತಿನಿತ್ಯ ಹೋಮಗಳು, ಉತ್ಸವಗಳು ಅನ್ನಸಂತರ್ಪಣೆ ಇತ್ಯಾದಿ ವಿಶೇಷ ಸೇವೆಗಳನ್ನು ಹಮ್ಮಿಕೊಳ್ಳಲಾಗಿದೆ ಸೇವೆಯನ್ನು ಮಾಡಿಸುವಂತಹ ಭಕ್ತರು ಶ್ರೀಮಠದ ಈ ನಂಬರ್ ವಾಟ್ಸಾಪ್ 9449133929 ಆನ್ಲೈನ್ ಮುಖಾಂತರ ಗುರುಗಳಿಗೆ ಸೇವೆ ಸಲ್ಲಿಸಿ ಗುರುರಾಯರ ಅನುಗ್ರಹಕ್ಕೆ ಪಾತ್ರಾಗಬಹುದು ಸೇವೆ ಸಲ್ಲಿಸಿದ ಸೇವ ಕರ್ತೃಗಳಿಗೆ ಪ್ರಸಾದ ಫಲ ಮಂತ್ರಾಕ್ಷತೆ ಕೊಡಲಾಗುವುದು ಹೆಚ್ಚಿನ ಮಾಹಿತಿಗಾಗಿ-08022443962 9945429129-8660349906




☛ ಉದಯವಾಹಿನಿ ಚಿತ್ರ

**ಭಜನೆ ಮತ್ತು ಉಪನ್ಯಾಸ**

**ಮಾರ್ಚ್ 1 ರಿಂದ 6ರ ವರೆಗೆ ಪ್ರತಿದಿನ ಸಂಜೆ 5 ರಿಂದ 6 ವಿವಿಧ ಭಜನಾ ಮಂಡಳಿ ಹರಿ ಭಜನೆ ನಂತರ ವಿದ್ವಾನ್ ವೆಂಕಟ ನರಸಿಂಹಾಚಾರ್ಯ ರಾಜಪುರೋಹಿತ ಇವರಿಂದ ಶ್ರೀ ಗುರು ರಾಘವೇಂದ್ರ ವೈಭವ (ಶ್ರೀ ರಾಯರ ಚರಿತ್ರೆ) ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಲಾಗಿದ್ದು ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಯರ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ,**

---

# ಹಸಿಹಾಲನ್ನು ಮುಖಕ್ಕೆ ಹಚ್ಚೋದ್ರಿಂದ ಎಷ್ಟೆಲ್ಲಾ ಲಾಭಗಳಿವೆ ನೋಡಿ

• ಉದಯವಾಹಿನಿ,ಬೆಂಗಳೂರು

ತ್ವಚೆಯ ಕಾಳಜಿ ಯಾರಿಗಿರುವುದಿಲ್ಲ ಎಲ್ಲಾರೂ ತಾವು ಸುಂದರವಾಗಿ ಕಾಣಬೇಕು ಎಂದು ಬಯಸುತ್ತಾರೆ. ಇದಕ್ಕಾಗಿ ಸಾಕಷ್ಟು ಹಣವನ್ನೂ ಖರ್ಚು ಮಾಡುತ್ತಾರೆ. ಆದರೆ ಮನೆಯಲ್ಲೇ ಇರುವ ಸೌಂದರ್ಯ ವರ್ಧಕ ಪದಾರ್ಥಗಳ ಬಗ್ಗೆ ನಾವು ಮರೆತುಬಿಡುತ್ತೇವೆ, ಕೆಲವೊಮ್ಮೆ ಅದರ ಅರಿವೂ ನಮಗೆ ಇರುವುದಿಲ್ಲ. ಇಲ್ಲಿ ನಾವು ಹಸಿ ಹಾಲಿನಿಂದ ಚರ್ಮಕ್ಕೆ ಎಷ್ಟೆಲ್ಲಾ ಪ್ರಯೋಜನಗಳಿವೆ ಎಂಬುದನ್ನು ತಿಳಿಸಿದ್ದೇವೆ.

ಹಾಲಿನ ಪೌಷ್ಟಿಕಾಂಶದ ಪ್ರಯೋಜನಗಳ ಬಗ್ಗೆ ನಮಗೆ ಅರಿವಿದ್ದರೂ ಅದು ಸೌಂದರ್ಯಕ್ಕೂ ಒಳ್ಳೆಯದು ಎಂದು ನಮಗೆ ಅಷ್ಟಾಗಿ ತಿಳಿದಿರುವುದಿಲ್ಲ. ಹಸಿ ಹಾಲು ಅಂದರೆ ಕಾಯಿಸದ ಅಥವಾ ಬಿಸಿ ಮಾಡದ ಹಾಲು. ಎಲ್ಲಾರ ಮನೆಯಲ್ಲೂ ಹಾಲು ಇದ್ದೇ ಇರುತ್ತದೆ. ಹಳ್ಳಿಗಳಲ್ಲಿ ದನದ ಹಾಲನ್ನು ನೇರವಾಗಿ ತೆಗೆದುಕೊಳ್ಳಬಹುದು. ಆದರೆ ನಗರಗಳಲ್ಲಿ ಪ್ಯಾಕೆಟ್ ಹಾಲನ್ನು ಅವಲಂಬಿಸಬೇಕಾಗುತ್ತದೆ. ಮನೆಯಲ್ಲಿ ಸುಲಭವಾಗಿ ದೊರೆಯುವ ಹಸಿ ಹಾಲು ಅನೇಕ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಹಸಿ ಹಾಲನ್ನು ನಿಮ್ಮ ಮುಖಕ್ಕೆ ಟೋನರ್ ಆಗಿಯೂ ಬಳಸಬಹುದು. ಇದು ಪೌಷ್ಟಿಕಾಂಶ ಭರಿತ ಖನಿಜಗಳು ಮತ್ತು ಸಾರಭೂತ ತೈಲಗಳಿಂದ ಸಮೃದ್ಧವಾಗಿದೆ, ಇದು ಚರ್ಮದ ಆರೈಕೆಗೆ ಅತ್ಯುತ್ತಮ ಆಯ್ಕೆಯಾಗಿದೆ.

**ನೈಸರ್ಗಿಕ ಹೊಳಪು ನೀಡುತ್ತದೆ:** ಹಸಿ ಹಾಲು ಹಚ್ಚುವುದರಿಂದ ಚರ್ಮವು ನೈಸರ್ಗಿಕ ಹೊಳಪು ಪಡೆಯಬಹುದು. ವಿಟಮಿನ್, ಖನಿಜಾಂಶ, ಪ್ರೋಟಿನ್ ಮತ್ತು ಕಾರ್ಬೋಹೈಡ್ರೇಟ್ಸ್‌ಗಳಿಂದ ಸಮೃದ್ಧವಾಗಿರುವ ಹಾಲು ಚರ್ಮದ ಒಟ್ಟಾರೆ ಆರೋಗ್ಯವನ್ನು ಸುಧಾರಿಸುತ್ತದೆ. ಅಲ್ಲದೆ ಚರ್ಮದ ತೇವಾಂಶವನ್ನು ಕಾಪಾಡುವುದರಿಂದ ಉತ್ತಮ ಹೊಳಪು ಪಡೆಯಲು ಸಾಧ್ಯವಾಗುತ್ತದೆ.

**ಹೆಚ್ಚಿನ ಎಣ್ಣೆಯಂಶವನ್ನು ತೆಗೆಯುತ್ತದೆ:** ಇದು ಎಣ್ಣೆ ಚರ್ಮ ಹೊಂದಿರುವವರಿಗೆ ಅತ್ಯುತ್ತಮವಾಗಿ ಕೆಲಸ ಮಾಡುತ್ತದೆ. ಮುಖದ ಚರ್ಮದಲ್ಲಿ ಹೆಚ್ಚಿನ ಎಣ್ಣೆಯಂಶವನ್ನು ತೆಗೆಯಲು ಹಸಿ ಹಾಲನ್ನು ಮುಖಕ್ಕೆ ಹಚ್ಚಿದರೆ ಉತ್ತಮ ಫಲಿತಾಂಶ ಪಡೆಯಬಹುದು. ಚರ್ಮದ ರಂಧ್ರಗಳಲ್ಲಿ ಅಡಗಿರುವ ಎಣ್ಣೆಯನ್ನು ತೆಗೆದು ಹಾಕುತ್ತದೆ. ವಿಟಮಿನ್ ಎ ಅಂಶವನ್ನು ಹೊಂದಿರುವ ಹಸಿ ಹಾಲು ನಿಮ್ಮ ಚರ್ಮದ ತೇವಾಂಶ ಕಾಪಾಡುತ್ತದೆ.

**ಮೊಡವೆಗಳನ್ನು ತಡೆಯುತ್ತದೆ:** ವಿಟಮಿನ್ ಎ ಹೊಂದಿರುವ ಹಸಿ ಹಾಲು ಚರ್ಮದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಕ್ಯಾಕ್ಟಿಕ್ ಆಸಿಡ್ ಮತ್ತು ಅಗತ್ಯ ಖನಿಜಾಂಶಗಳನ್ನು ಹೊಂದಿರುವುದರಿಂದ ಚರ್ಮದ ಸಮಸ್ಯೆಗಳನ್ನು ತಡೆಯುತ್ತದೆ. ಹಸಿ ಹಾಲಿನಲ್ಲಿರುವ ಉತ್ತಮ ಅಂಶಗಳು ಮೊಡವೆಗಳಿಗೆ ಉತ್ತಮ ಪರಿಹಾರವಾಗಿದೆ.

**ಚರ್ಮಕ್ಕೆ ತೇವಾಂಶ ಒದಗಿಸುತ್ತದೆ:** ನಿಮ್ಮ ತ್ವಚೆಗೆ ಹಸಿ ಹಾಲನ್ನು ಬಳಸುವುದರಿಂದ ಸಿಗುವ ಮತ್ತೊಂದು ಪ್ರಯೋಜನವೆಂದರೆ ಚರ್ಮವನ್ನು ಹೈಡ್ರೇಟ್ ಆಗಿಡುವುದು.

ಹಸಿ ಹಾಲಿನಲ್ಲಿರುವ ನೈಸರ್ಗಿಕ ಕೊಬ್ಬುಗಳು, ವಿಟಮಿನ್ ಎ, ನೀರು ಮತ್ತು ಪ್ರೋಟೀನ್ ಗಳು ಚರ್ಮಕ್ಕೆ ತೇವಾಂಶವನ್ನು ಒದಗಿಸುತ್ತದೆ. ಚರ್ಮ ಒಣಗಿ ಸಿಪ್ಪೆ ಸುಲಿಯುವುದನ್ನು ತಡೆಯುತ್ತದೆ. ಚರ್ಮದ ಮೇಲೆ ಕೆಂಪು, ತುರಿಕೆ ಮುಂತಾದ ಸಮಸ್ಯೆಗಳಿರುವವರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ.

**ವಯಸ್ಸಾದ ವಿರೋಧಿ ಗುಣ:** ಹಸಿ ಹಾಲು ನಿಮ್ಮ ಚರ್ಮದ ಯೌವನವನ್ನು ಕಾಪಾಡುತ್ತದೆ.

ಇದರಲ್ಲಿರುವ ವಿಟಮಿನ್‌ಗಳು ಮತ್ತು ಉತ್ಕರ್ಷಣ ನಿರೋಧಕಗಳು ನಿಮ್ಮ ಚರ್ಮಕ್ಕೆ ಹಾನಿಯಾಗುವುದನ್ನು ತಡೆಯುತ್ತದೆ. ಇದು ವಯಸ್ಸಾಗುವ ಪ್ರಕ್ರಿಯೆಯನ್ನು ನಿಧಾನಗೊಳಿಸುತ್ತದೆ. ಹಸಿ ಹಾಲು ಚರ್ಮಕ್ಕೆ ಬಳಸಿದಾಗ ಸೂಕ್ಷ್ಮ ರೇಖೆಗಳು ಮತ್ತು ಸುಕ್ಕುಗಳನ್ನು ಕಡಿಮೆಮಾಡುತ್ತದೆ. ಚರ್ಮವನ್ನು ಹೆಚ್ಚು ತಾರುಣ್ಯದಿಂದ ಕಾಣುವಂತೆ ಮಾಡುತ್ತದೆ.

**ಆದರೂ ಹಸಿ ಹಾಲು ಸ್ವಲ್ಪ ಅಪಾಯಕಾರಿ ಏಕೆ?** ಹಸಿ ಹಾಲನ್ನು ಕುದಿಸದೆ ಬಳಸುವುದರಿಂದ ಅದರಲ್ಲಿರುವ ಬ್ಯಾಕ್ಟೀರಿಯಾಗಳು ಜೀವಂತವಾಗಿರುವ ಸಾಧ್ಯತೆಗಳಿರುತ್ತವೆ. ಇದು ತುರಿಕೆ, ಅಲರ್ಜಿ, ಕಿರಿಕಿರಿಗೆ ಕಾರಣವಾಗಬಹುದು. ನೀವು ಸೂಕ್ಷ್ಮ ಚರ್ಮವನ್ನು ಹೊಂದಿದ್ದರೆ ಇದನ್ನು ಬಳಸದಿರುವುದು ಸೂಕ್ತ ಅಥವಾ ಪ್ಯಾಚ್ ಟೆಸ್ಟ್ ಮಾಡಿದ ಬಳಿಕ ಬಳಸುವುದು ಉತ್ತಮ.





**ಚರ್ಮದ ಟೋನ್ ಉತ್ತಮಗೊಳಿಸುತ್ತದೆ**



**ಹಸಿ ಹಾಲು ನಿಮ್ಮ ಚರ್ಮಕ್ಕೆ ಹೊಳಪು ಮತ್ತು ಉತ್ತಮ ಬಣ್ಣ ನೀಡಲು ಸಹಾಯ ಮಾಡುತ್ತದೆ. ಇದರಲ್ಲಿರುವ ಲ್ಯಾಕ್ಟಿಕ್ ಆಮ್ಲವು ನೈಸರ್ಗಿಕ ಎಕ್ಸ್‌ಫೋಲಿಯಂಟ್ ಆಗಿ ಕಾರ್ಯನಿರ್ವಹಿಸುತ್ತದೆ, ಇದು ಸತ್ತ ಚರ್ಮದ ಕೋಶಗಳ ಮೇಲಿನ ಪದರವನ್ನು ತೆಗೆದುಹಾಕುತ್ತದೆ. ಪ್ರತಿದಿನ ಹಸಿ ಹಾಲನ್ನು ಮುಖಕ್ಕೆ ಹಚ್ಚುವುದರಿಂದ ಚರ್ಮವು ಹೊಳಪು ಪಡೆಯುತ್ತದೆ. ಉತ್ತಮ ಬಣ್ಣ ಹೊಂದಲು ಸಹಾಯವಾಗುತ್ತದೆ.**



## ದಿನ ಭವಿಷ್ಯ

| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯೆನ್ನುವುದನ್ನು ಪುನಃ ಕಂಡುಹಿಡಿಯಲು ಸ್ವಲ್ಪ ಸಮಯ ಖರ್ಚು ಮಾಡಿ.

**ವೃಷಭ** ಮನೆಯಲ್ಲಿ ಒತ್ತಡ ನಿಮಗೆ ಸಿಟ್ಟು ತರಿಸಬಹುದು. ಅವುಗಳನ್ನು ದಮನಗೊಳಿಸುವುದು ಕೇವಲ ದೈಹಿಕ ಸಮಸ್ಯೆಯನ್ನು ಹೆಚ್ಚಿಸುತ್ತದೆ. ದೈಹಿಕ ಚಟುವಟಿಕೆಯೊಂದಿಗೆ ಇದನ್ನು ತೊಡೆದುಹಾಕಿ.

**ಮಿಥುನ** ಧ್ಯಾನ ಮತ್ತು ಯೋಗವನ್ನು ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗಾಗಿ ಆಚರಿಸಬೇಕು. ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಕರ್ಕಾಟಕ** ನಿಮ್ಮ ಅಚ್ಚುಮೆಚ್ಚಿನವರಿಂದ / ಪತಿ / ಪತ್ನಿಯಿಂದ ಪಡೆಯುವ ದೂರವಾಣಿ ಕರೆ ನಿಮ್ಮ ದಿನವನ್ನು ಬೆಳಗಲಿದೆ. ಪ್ರೇಮಜೀವನವು ಇಂದು ನಿಮ್ಮನ್ನು ಆಶೀರ್ವದಿಸಿರುವಂತೆ ತೋರುತ್ತದೆ.

**ಸಿಂಹ** ನಿಮ್ಮ ವಿಚ್ಛಿದ್ರಕಾರಕ ಭಾವಗಳು ಮತ್ತು ಉದ್ವೇಗಗಳನ್ನು ಹತೋಟಿಯಲ್ಲಿರಿಸಿಕೊಳ್ಳಿ. ನಿಮ್ಮ ಸಾಂಪ್ರದಾಯಿಕ ಚಿಂತನೆ / ಹಳೆಯ ವಿಚಾರಗಳು ನಿಮ್ಮ ಪ್ರಗತಿಯನ್ನು ಕುಂಠಿತಗೊಳಿಸಬಹುದು.

**ಕನ್ಯಾ** ನಿಮ್ಮ ಬಲವಾದ ಧೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ.

**ತುಲಾ** ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ.

**ವೃಶ್ಚಿಕ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ. ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಧನಸ್ಸು** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಹಣಕಾಸಿನಲ್ಲಿ ಸುಧಾರಣೆ ನೀವು ಅಗತ್ಯ ವಸ್ತುಗಳನ್ನು ಖರೀದಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಮಕರ** ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

**ಕುಂಭ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು.

**ಮೀನ** ದಿನದಲ್ಲಿ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷ ಮತ್ತು ಆನಂದ ತೆರೆದಿಡುತ್ತದೆ. ಇಂದು ನೀವು ನಿಮ್ಮ ಕನಸಿನ ಹುಡುಗಿಯನ್ನು ಭೇಟಿಯಾಗುತ್ತಿದ್ದ ಹಾಗೆ ನಿಮ್ಮ ಕಣ್ಣುಗಳು ಬೆಳಗುತ್ತವೆ.

## ಹಳೇಕೋಟೆ ಮಾರೆಮ್ಮ ದೇವಿಯ ರಥೋತ್ಸವ

• ಉದಯವಾಹಿನಿ ಸಿರುಗುಪ್ಪ

ತಾಲ್ಲೂಕಿನ ಹಳೇಕೋಟೆ ಗ್ರಾಮದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಮಾರೆಮ್ಮ ದೇವಿಗೆ ವಿಶೇಷ ಪೂಜೆ ಮತ್ತು ಬೆಳ್ಳಿಯ ಆಭರಣಗಳಿಂದ ಅಲಂಕಾರ ಮಾಡಲಾಗಿತ್ತು.

ಬೆಳಗ್ಗೆಯಿಂದ ಹಳೇಕೋಟೆ ಗ್ರಾಮದ ಭಕ್ತರು ಸೇರಿದಂತೆ ಹೆದ್ದಾರಿ ಮೂಲಕ ಸಂಚರಿಸುವ ಸಹಸ್ರಾರು ಭಕ್ತರು ದೇವಿಗೆ ಪೂಜೆ ಸಲ್ಲಿಸಿ ಆಶೀರ್ವಾದವನ್ನು ಪಡೆದರು. ಸಂಜೆ ಹಳೇಕೋಟೆ ಗ್ರಾಮಸ್ಥರು ಶ್ರೀ ಮರಿಶಿವಯೋಗಿಗಳ ಮಠದ ಶ್ರೀ .ಮ.ನಿ.ಪ್ರ.ನಿ.ಪ್ರ.ಸ್ವ. ಮಲ್ಲಿಕಾರ್ಜುನ ಮಹಾಸ್ವಾಮಿಗಳನ್ನು ಕಳಸ ಸಕಲ ವಾದ್ಯಗಳೊಂದಿಗೆ ದೇವಸ್ಥಾನಕ್ಕೆ ಕರೆತರಲಾಯಿತು.

ನಂತರ ಶ್ರೀಗಳ ನೇತೃತ್ವದಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಮಾರೆಮ್ಮ ದೇವಿಯ ರಥೋತ್ಸವ ಅದ್ದೂರಿಯಾಗಿ ನಡೆಯಿತು.

## ಕ್ಷೇತ್ರದ ಒಳಿತಿಗಾಗಿ ಕುಂಭಮೇಳದಲ್ಲಿ ಭಾಗಿ


• ಉದಯವಾಹಿನಿ ಹಗರಿಬೊಮ್ಮನಹಳ್ಳಿ

ಕ್ಷೇತ್ರದ ಶಾಸಕ ಕೆ ನೇಮಿರಾಜ್ ನಾಯ್ಕ್ 144 ವರ್ಷಕ್ಕೆ ನಡೆಯುವ ಮಹಾ ಕುಂಭಮೇಳದ ಪ್ರಯಾಗ್ರಾಜ್‌ನಲ್ಲಿ ಕುಟುಂಬ ಸಮೇತ ಭಾಗವಹಿಸಿ ಕ್ಷೇತ್ರದ ಒಳಿತಿಗಾಗಿ ಪ್ರಾರ್ಥಿಸಿದರು. ಉತ್ತರ ಪ್ರದೇಶದ ಪ್ರಯಾಗ್ ರಾಜ್ ನಲ್ಲಿ 45 ದಿನ ನಡೆದ ವಿಶ್ವದ ಅತಿ ದೊಡ್ಡ ಅಧ್ಯಾತ್ಮಿಕ ಕಾರ್ಯಕ್ರಮದಲ್ಲಿ ರಾಜ್ಯದಿಂದ ಅನೇಕ ಭಕ್ತರು ಮತ್ತು ರಾಜಕಾರಣಿಗಳು ಗಣ್ಯರು ಭಾಗವಹಿಸಿದ್ದರು. ಕೊನೆಯ ದಿನವಾದ ಮಹಾಶಿವರಾತ್ರಿಯ ಅಮೃತ ಸ್ನಾನವನ್ನು ಶಾಸಕ ಕೆ ನೇಮಿರಾಜ್ ನಾಯ್ಕ ಮಾಡಿದರು. ಅವರು ವಿಧಾನಸಭಾ ಕ್ಷೇತ್ರದ ಸಮಸ್ತ ರೈತ ಬಾಂಧವರಿಗೆ ಯುವಕರಿಗೆ ಮತ್ತು ಸಮಸ್ತ ಜನತೆಯ ಪರವಾಗಿ ತ್ರಿವೇಣಿ ಸಂಗಮದಲ್ಲಿ ಗಂಗಾ ಪೂಜೆ ಮಾಡಲಾಯಿತು. ಪ್ರತಿ ವರ್ಷವೂ ಉತ್ತಮ ಮಳೆ ಬೆಳೆ ಆಗಲಿ ಹಾಗೂ ಎಲ್ಲರಿಗೂ ಉತ್ತಮ ಅರೋಗ್ಯ ಕರುಣಿಸಲಿ ಎಂದು ಪ್ರಾರ್ಥನೆ ಮಾಡಿಕೊಂಡರು

## 3.20 ಲಕ್ಷರೂ. ವಿದ್ಯುತ್ ಬಿಲ್ ಕಂಡು ರೈತ ಕಕ್ಕಾಬಿಕ್ಕಿ: ಇಲಾಖೆಯ ವಿರುದ್ಧ ಆಕ್ರೋಶ

• ಉದಯವಾಹಿನಿ ಚಿಕ್ಕಮಗಳೂರು

ಜಿಲ್ಲೆಯ ರೈತರೊಬ್ಬರಿಗೆ ಕಳೆದ 13 ವರ್ಷಗಳ ಬಳಿಕ ಬರೋಬ್ಬರಿ ಮೂರು ಲಕ್ಷ ಇಪ್ಪತ್ತು ಸಾವಿರ ರೂ. ವಿದ್ಯುತ್ ಬಿಲ್ ಬಂದಿದ್ದು, ಇಲಾಖೆಯ ವಿರುದ್ಧ ರೈತ ಆಕ್ರೋಶ ಹೊರ ಹಾಕಿದ್ದಾನೆ. ಇಂಧನ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ಅವರ ಜಿಲ್ಲೆಯಲ್ಲಿ ಇಂತಹದೊಂದು ಘಟನೆ ನಡೆದಿದ್ದು, ತಾಲೂಕಿನ ಆಲ್ದೂರು ಸಮೀಪದ ವಿಕ್ಕರಣೆ ಗ್ರಾಮದ ರೈತ ಉಮೇಶ್ ಎಂಬುವರಿಗೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ ಬಾರೀ ಮೊತ್ತದ ಬಿಲ್ ನೀಡಲಾಗಿದೆ.


ಉದಯವಾಹಿನಿ ಚಿತ್ರ

ರೈತ ಉಮೇಶ್ ಜಮೀನಿನಲ್ಲಿ ಅಡಿಕೆ, ಕಾಫಿ ಬೆಳೆಗಳನ್ನು ಬೆಳೆಯುತ್ತಿದ್ದು ನೀರು ಹಾಯಿಸಲು 10 ಎಚ್.ಪಿ. ಪಂಪ್ಸೆಟ್ ಅಳವಡಿಸಿ ತೋಟಕ್ಕೆ ನೀರು ಹಾಯಿಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ದಿ. ಬಂಗಾರಪ್ಪ ಅವರ ಕಾಲದಿಂದಲೂ 10 ಹೆಚ್.ಪಿ. ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಆದರೆ, ಈಗ ಏಕೆ ವಿದ್ಯುತ್ ಬಿಲ್ ಕಟ್ಟಿ ಎಂದು ನೋಟಿಸ್ ಕಳಿಸಿ ದ್ದೀರಾ ಎಂದು ಅಈ ಕಾರಿಗಳನ್ನು ಪ್ರಶ್ನಿಸಿದರೇ ಅಧಿಕಾರಿಗಳು ಕಾಫಿ ಬೆಳೆಗಾರರಿಗೆ ಉಚಿತ ವಿದ್ಯುತ್ ಇಲ್ಲವೆಂದು ಉತ್ತರಿಸುತ್ತಾರೆಂದು ತಿಳಿಸಿದ್ದಾರೆ.

ಆ ಕಾರಿಗಳ ಈ ನಡೆ ಕಾಫಿ ಬೆಳೆಗಾರರ ಕಂಗೆಣ್ಣಿಗೆ ಗುರಿಯಾಗಿದ್ದು, 13 ವರ್ಷಗಳ ಬಳಿಕ ಮೂರು ಲಕ್ಷ ಇಪ್ಪತ್ತು ಸಾವಿರ ರೂ. ವಿದ್ಯುತ್ ಬಿಲನ್ನು 15 ದಿನಗಳಲ್ಲಿ ಪಾವತಿ ಮಾಡುವಂತೆ ನೋಟಿಸ್ ನೀಡಿದ್ದು, ಹಣ ಪಾವತಿಸದಿದ್ದರೇ ವಿದ್ಯುತ್ ಸಂಪರ್ಕ ಕಟ್ ಮಾಡುತ್ತೇವೆಂದು ತಿಳಿಸಿದ್ದು ಅಂ ಕಾರಿಗಳ ಈ ನಡೆಗೆ ರೈತ ಉಮೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಸೊರಟೂರಿನಲ್ಲಿ ಮಹಾಶಿವರಾತ್ರಿ ನಿಮಿತ್ಯ ಶಾಂತಿ ಯಾತ್ರೆ

• ಉದಯವಾಹಿನಿ ಗದಗ

ಸೊರಟೂರ ಗ್ರಾಮದಲ್ಲಿ ಸರ್ವಧರ್ಮ ಸಮನ್ವಯ ವೇದಿಕೆಯ ವತಿಯಿಂದ ಮಹಾಶಿವರಾತ್ರಿಯ ನಿಮಿತ್ಯವಾಗಿ ಶಿವಲಿಂಗ ಮೆರವಣಿಗೆ ಶಾಂತಿ ಯಾತ್ರೆ ನೆರವೇರಿತು. ವೇದಿಕೆಯ ಸಂಯೋಜಕರಾದ ಬಿ ಕೆ ರೇಣುಕಾ ಅಕ್ಕನವರು ಶಾಂತಿ ಯಾತ್ರೆಯ ಧ್ವಜಾರೋಹಣವನ್ನು ನೆರವೇರಿಸಿದರು.

ನಂತರ ಕುಂಭಮೇಳ ಹಾಗೂ ದಿಂಡಿ ಉತ್ಸವದ ಸಂತ ಮಂಡಳಿಯ ಭಕ್ತರು ಹರಿ ಭಜನೆಯ ಮೂಲಕ ಶಿವಲಿಂಗ ಮೆರವಣಿಗೆಯು ನೂರಾರು ಭಕ್ತರೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ನಂತರ ಶಿವ ಧ್ಯಾನ ಕೇಂದ್ರದಲ್ಲಿ ಬಿ ಕೆ ರೇಣುಕಾ ಅಕ್ಕನವರು ಶಿವರಾತ್ರಿಯ ಮಹತ್ವವನ್ನು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ರುದ್ರೇಶ್ ಇನಾಮತಿ. ಎಸ್ ಆರ್ ಹಂಪಿಹುಳಿ. ಶರಣಪ್ಪ ಕಲಾಲ್. ಶಿವಾನಂದ


ಉದಯವಾಹಿನಿ ಚಿತ್ರ

ಮಾಯಪ್ಪನವರ. ನಿಂಗಪ್ಪ ಮಾದಣ್ಣವರ್. ಗ್ರಾಮದ ಮಹಿಳೆಯರು ಮತ್ತು ಹುಲಕೋಟಿ. ಕುರ್ತ ಕೋಟಿ. ಸೊರಟೂರಿನ. ಸಂತ ಮಂಡಳಿಯ ಭಕ್ತರು ಭಾಗಿಯಾಗಿದ್ದರೂ ಹಾಗೂ ವಿವಿಧ ವಾಹನಗಳ ಮಾಲೀಕ ಚಾಲಕರು ತಮ್ಮ ವಾಹನಗಳೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

## ತೆಲಂಗಾಣಕ್ಕೆ ರಾತ್ರೋರಾತ್ರಿ ನೀರು ಹರಿಸಿರುವುದು ಖಂಡನೀಯ

• ಉದಯವಾಹಿನಿ ಯಾದಗಿರಿ

ಹಾಗೂ ರಾಯಚೂರು ಜಿಲ್ಲೆಗಳ ಜೀವನಾಡಿಯಾಗಿರುವ ಬಸವಸಾಗರ ಜಲಾಶಯದಿಂದ ತೆಲಂಗಾಣಕ್ಕೆ ಅಲ್ಲಿನ ಕಾಂಗ್ರೆಸ್ ಸರಕಾರ ಮತ್ತು ಇಲ್ಲಿನ ಕಾಂಗ್ರೆಸ್ ಸರಕಾರಗಳು ಹೊಂದಾಣಿಕೆ ಮಾಡಿಕೊಂಡು ನೀರಾವರಿ ಸಚಿವರು ಆ ರಾಜ್ಯಕ್ಕೆ ನೀರು ಬಿಡುವ ಮೂಲಕ ಜಿಲ್ಲೆಯ ಈ ಭಾಗದ ರೈತರಿಗೆ ಹಾಡು ಹಗಲೇ ಮೋಸ ಮಾಡುತ್ತಿವೆ ಎಂದು ರೈತರು ದೂರಿದ್ದಾರೆ. ಹಿಂಗಾರಿನ ವಾರ ಬಂದಿ ನೀರು ಬಿಡುವ ಸರಕಾರದ ಆದೇಶದ ಮೇರೆಗೆ ಅನೇಕ ರೈತರು ಭತ್ತ, ಜೋಳ, ಸಜ್ಜೆ, ಇನ್ನೂ ಮುಂತಾದ ಬೆಳೆಗಳನ್ನು ಬಿತ್ತಿದ್ದಾರೆ. ನೀರು ಇದ್ದರೆ ಮುಂದಿನ ದಿನಗಳಲ್ಲಿ ನಮ್ಮ ರೈತರಿಗೆ ಇನ್ನೂ ಏಪ್ರಿಲ್ ತಿಂಗಳ ಅಂತ್ಯದವರೆಗೂ ನೀರು ಹರಿಸಬೇಕಾಗುತ್ತದೆ. ನಮ್ಮ ರೈತರಿಗೆ ನೀರು ಹರಿಸುವುದು ಬಿಟ್ಟು ಅನ್ಯ ರಾಜ್ಯಗಳಿಗೆ ನೀರು ಹರಿಸುವುದು ಇಲ್ಲಿನ ರೈತರಿಗೆ ನೇರವಾಗಿ ವಿಷ ಉಣಿಸಿದಂತೆ ಎಂದು ರೈತ ಮುಖಂಡರು ಆಪಾದಿಸಿದ್ದಾರೆ. ರಾಜ್ಯ ಸರಕಾರ ಈ ಕೂಡಲೇ ಎಚ್ಚೆತ್ತುಕೊಂಡು ನೀರು ಹರಿಸುವುದನ್ನು ನಿಲ್ಲಿಸುವ ಮೂಲಕ ಮುಂದಿನ ದಿನಗಳಲ್ಲಿ ಏಪ್ರಿಲ್ ಅಂತ್ಯದವರೆಗೂ ನೀರು ಹರಿಸಬೇಕು ಎಂದು ರೈತ ಸಂಘದ ಯಾದಗಿರಿ ಜಿಲ್ಲಾಧ್ಯಕ್ಷರಾದ ಎಚ್. ಆರ್ ಬಡಿಗೇರ್ ಒತ್ತಾಯಿಸಿದ್ದಾರೆ.



**ವಿವಿಧ ಪ್ರಗತಿಪರ ಸಂಘಟನೆಗಳು ಆಕ್ರೋಶ**

**ವಿವಿಧ ಪ್ರಗತಿಪರ ಸಂಘಟನೆಗಳು ಆಕ್ರೋಶ:** ರಾತೋರಾತ್ರಿ ಜಲಾಶಯದಿಂದ ನೀರುವ ಹರಿಸಿರುವ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಕನ್ನಡ ಪರ ಹಾಗೂ ಪ್ರಗತಿ ಪರ ಸಂಘಟನೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ, ನಮ್ಮ ಜಿಲ್ಲೆಯ ರೈತರಿಗೆ ಸಮರ್ಪಕ ನೀರಿಲ್ಲದೇ ವಾರಾಬಂಧಿ ಮೂಲಕ ನೀರು ಹರಿಸಲಾಗುತ್ತಿದೆ.

ಆದರೆ, ನೀರಾವರಿ ಸಚಿವರು ಸ್ಥಳೀಯ ರೈತರ ಗಮನಕ್ಕೆ ತರದೇ ತೆಲಂಗಾಣಕ್ಕೆ ನೀರು ಬಿಟ್ಟಿರುವುದು ಖಂಡನೀಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಪಾರದರ್ಶಕ ಪರೀಕ್ಷೆ ಜರುಗಿಸಿ: ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್

• ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅಗತ್ಯವಿರುವ ಗಾಳಿ, ಬೆಳಕು ನೀರಿನ ವ್ಯವಸ್ಥೆ ಕಲ್ಪಿಸಬೇಕು

• ಉದಯವಾಹಿನಿ ಗದಗ

ಜಿಲ್ಲೆಯಲ್ಲಿ ಮಾರ್ಚ 1 ರಿಂದ 20 ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಜರುಗಲಿದ್ದು ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಾಗೂ ಪಾರದರ್ಶಕವಾಗಿ ಜರುಗಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ದ್ವಿತೀಯ ಪಿ.ಯು.ಸಿ.ವಾರ್ಷಿಕ ಪರೀಕ್ಷೆಗಳ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ದ್ವಿತೀಯ ಪಿಯುಸಿ ಪರೀಕ್ಷೆ**

ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳು ಜರುಗಲಿದ್ದು ಪರೀಕ್ಷಾ ಕೇಂದ್ರಗಳಲ್ಲಿ ಗೋಡೆಗಡಿಯಾರಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅಗತ್ಯವಿರುವ ಗಾಳಿ, ಬೆಳಕು ನೀರಿನ ವ್ಯವಸ್ಥೆ ಕಲ್ಪಿಸಬೇಕು. ಇದು ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಆದ್ಯತೆ ಮೇರೆಗೆ ನೀಡಬೇಕು ಎಂದು ಸೂಚಿಸಿದರು.

**ಪ್ರತಿಬಂಧಕಾಜ್ಞೆ ಜಾರಿ:** ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಮಾರ್ಚ 1 ರಿಂದ 20 ರವರೆಗೆ ಬೆ 8 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ಹಾಗೂ ಅನಧಿಕೃತ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರಗಳ ಪ್ರವೇಶವನ್ನು ನಿರ್ಬಂಧಿಸಿದೆ.

ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝುರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಬುಕ್‌ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದು ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ


ಉದಯವಾಹಿನಿ ಚಿತ್ರ

**ಪರೀಕ್ಷಾ ಸಮಯದಲ್ಲಿ ಯಾವುದೇ ಅಕ್ರಮ, ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸಬೇಕು. ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನು, ಸ್ಥಳೀಯ ನಿರೀಕ್ಷಣಾಧಿಕಾರಿಯನ್ನು, ಮಾರ್ಗಾಧಿಕಾರಿಗಳನ್ನು ಮತ್ತು ತ್ರಿಸದಸ್ಯ ಸಮಿತಿಯನ್ನು ನೇಮಿಸಲಾಗಿದೆ. ಅಧಿಕಾರಿಗಳು ತಮಗೆ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕು**
**-ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್**

**ಮಾರ್ಚ 1 ರಿಂದ 20 ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು 11904 ಪರೀಕ್ಷಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆಗಳು ಶಾಂತಿಯುತವಾಗಿ ಹಾಗೂ ಸುಗಮವಾಗಿ ಜರುಗಲು ಕ್ರಮ ವಹಿಸಲಾಗಿದೆ -ಎಸ್.ಬಿ.ಮಸನಾಯಕ**
**ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ**

ಮತ್ತು ಹೊರಹೋಗುವ ನಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅವಕಾಶವಿದ್ದು, ಉಳಿದ ಎಲ್ಲಾ ಪರೀಕ್ಷಾ ಸಿಬ್ಬಂದಿ/ ವಿದ್ಯಾರ್ಥಿಗಳು ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು/ ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರತಿಬಂಧಿಸಿದ ಯಾವುದೇ ವಸ್ತುಗಳನ್ನು ಸಂಬಂಧಪಟ್ಟವರು ಪರೀಕ್ಷಾ ಕೇಂದ್ರದಡಿ ತೆಗೆದುಕೊಂಡು ಹೋಗಲು ನಿರ್ಬಂಧಿಸಿದೆ.

ಜಿ.ಪಂ.ಮುಖ್ಯಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ಅವರು ದ್ವಿತೀಯ ಪಿಯುಸಿ ಪರೀಕ್ಷೆಗಳು ಸುವ್ಯವಸ್ಥಿತವಾಗಿ ಜರುಗುವಂತೆ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಸೂಚಿಸಿದರು.

ಸಭೆಯಲ್ಲಿ ಪರೀಕ್ಷಾ ಕೇಂದ್ರಗಳ ಸ್ವಚ್ಛತೆ, ಸಿಸಿಟಿವಿ ಅಳವಡಿಕೆ, ಸೂಕ್ತ ಬಂದೋಬಸ್ತ್ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಸೇರಿದಂತೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

## ಗುತ್ತಿ ಬಸವಣ್ಣ ಕಾಲುವೆಗೆ ನೀರು ಹರಿಸಲು ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ಇಂಡಿ

ಇಂಡಿ ತಾಲ್ಲೂಕಿನಲ್ಲಿ ಹರಿಯುವ ಗುತ್ತಿ ಬಸವಣ್ಣ ಕಾಲುವೆಯ ಕೊನೆಯ ಭಾಗದ ವರೆಗೂ ನೀರು ಹರಿಸಬೇಕೆಂದು ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದರು. ಅಲ್ಲಿ ಮಾತನಾಡಿದ ಮುಖಂಡ ಬಸವ ರಾಜ ಪಾಟೀಲ ಹಂಜಗಿ ಕಾಲುವೆಯ ನೀರು ತಾಂಬಾ ಗ್ರಾಮದ ವರೆಗೆ ಸರಿಯಾಗಿ ಬರುತ್ತದೆ. ನಂತರ ಹಂಜಗಿ ಗ್ರಾಮದ ವರೆಗೆ ಸ್ವಲ್ಪ ಪ್ರಮಾಣದಲ್ಲಿ ಬರುತ್ತದೆ.

ಗುತ್ತಿ ಬಸವಣ್ಣ ಕಾಲುವೆಯಲ್ಲಿ ಅಲ್ಲಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಣ್ಣು ತುಂಬಿದೆ. ಗಿಡಗಂಟಿಗಳಿವೆ. ಹೀಗಾಗಿ ನೀರು ಕಾಲುವೆಯಲ್ಲಿ ಹರಿದು ಹೋಗದೆ ಬೇರೆ ಕಡೆಗೆ ಹೋಗುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ನೀರು ಸರಿಯಾಗಿ ಕೊನೆಯ ಭಾಗದ ವರೆಗೂ ಹರಿಯುತ್ತಿಲ್ಲ ಎಂದರು.

ಕೆಂಚಪ್ಪ ನಿಂಬಾಳ ಮಾತನಾಡಿದರು ಪ್ರತಿಭಟನೆ


ಉದಯವಾಹಿನಿ ಚಿತ್ರ

ಯಲ್ಲಿ ಜಟ್ಟೆಪ್ಪ ಸಾಲೋಟಗಿ, ಲಾಯಪ್ಪ ಉಪ್ಪಾರ, ಸುರೇಶ ಜೇವೂರ, ಹಣಮಂತ ಮಸಳಿ, ಶರಣಪ್ಪ ಗುಂದಗಿ, ಗುರಪ್ಪ ಅಗಸರ, ರಮೇಶ ದಳವಾಯಿ, ಬಾಳು ಕೊಟಗೊಂಡ, ಶ್ರೀಮಂತ ಉಪ್ಪಾರ, ಸಿದ್ದಪ್ಪ ಕರಂಡೆ, ದಯಾನಂದ ಕಂಟಗೊಂಡ, ಜಟ್ಟೆಪ್ಪ ತಳವಾರ ಹಾಗೂ ಅಂಜುಟಗಿ, ಹಿರೇರೂಗಿ,ತಡವಲಗಾ , ಹಂಜಗಿ ಗ್ರಾಮದ ರೈತರು ಪಾಲ್ಗೊಂಡಿದ್ದರು. ತಹಶೀಲ್ದಾರ ಬಿ.ಎಸ್.ಕಡಕಬಾವಿ ಇವರಿಗೆ ಮನವಿ ಸಲ್ಲಿಸಿದರು.

## ಪರಿಶ್ರಮದಿಂದ ಯಶಸ್ಸು ಸಾಧ್ಯ: ವೀರಣ್ಣ

• ಉದಯವಾಹಿನಿ ಸೈದಾಪುರ

ಪರಿಶ್ರಮ ಪಟ್ಟವರು ಮಾತ್ರ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ, ಸೋಮಾರಿಗಳಲ್ಲ ಹೀಗಾಗಿ ಪ್ರತಿಯೊಬ್ಬರೂ ಚೆನ್ನಾಗಿ ಓದಿ ಉತ್ತಮ ಫಲಿತಾಂಶ ಪಡೆದುಕೊಳ್ಳಬೇಕು ಎಂದು ಸೈದಾಪುರ ಸರಕಾರಿ ಪ್ರೌಢ ಶಾಲಾ ಮುಖ್ಯಾಧ್ಯಾಪಕ ವೀರಣ್ಣ ಯರಗಟ್ಟಿ ಅವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಮೀಪದ ಕಡೇಚೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ವರ್ಗಾಯಿತ ಶಿಕ್ಷಕರ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಇಂಗ್ಲೀಷ್ ವಾಣಿಯೊಂದರಲ್ಲಿ ಹೇಳಿರುವಂತೆ ವಿದ್ಯಾರ್ಥಿ ಜೀವನ ಬಂಗಾರವಿದ್ದಂತೆ ಅದಕ್ಕೆ ಪೂರಕವಾಗಿ ಮಕ್ಕಳು ನಿರಂತರವಾಗಿ ಅಭ್ಯಾಸ ಮಾಡಿಜ್ಞಾನ


ಉದಯವಾಹಿನಿ ಚಿತ್ರ

ಸಂಪಾದನೆ ಮಾಡಿದ್ದಲ್ಲಿ ಜೀವನದಲ್ಲಿ ನಿಶ್ಚಿತ ಗುರಿಯನ್ನು ಮುಟ್ಟಿಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಇದೇ ವೇಳೆ ನಾಗರಾಜ ನಾಯ್ಕ್ ಮತ್ತು ಫಾತಿಮಾ ಬೇಗಂ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿಯ ವಿದ್ಯಾರ್ಥಿಗಳು ಎಲ್ಲಾ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿದರು.ಸಮಾರಂಭದ ಅಧ್ಯಕ್ಷತೆಯನ್ನು ಕಡೇ ಚೂರು ಉರ್ದು ಪ್ರೌಢ ಶಾಲೆಯ ಮುಖ್ಯ ಗುರು ಜಾಹೇದಾ ಬೇಗಂ ವಹಿಸಿದ್ದರು.

ಯಲಸತ್ತಿ ಪ್ರೌಢ ಶಾಲಾ ಮುಖ್ಯಗುರು ಶಿವಾನಂದ ನಾಯಕ್, ಕಣೇಕಲ್ ಪ್ರೌಢ ಶಾಲೆಯ ಬಸ ವರಾಜ, ಹಸನ್ ಸಾಬ್, ಬಸವರಾಜ ಶಾಬಾದಿ, ಧರ್ಮರಾಜ, ರೂಹಿಸಬಾ, ಶಾಂತ, ಮಾಲಾನ್ ಬೇಗಂ, ವೆಂಕಟೇಶ ನಾಯಕ್ ಮಲ್ಹಾರ, ಫರ್ಹಾನಾಜ್‌ಮುಂತಾದವರಿದ್ದರು.

**ಪ್ರತಿಯೊಂದು ವಿದ್ಯಾರ್ಥಿಯು ತಾನು ಯಾರು, ಏನು ಮಾಡಬೇಕು, ಮತ್ತೆ ಏನು ಮಾಡುತ್ತಿದ್ದೇನೆ ಎಂದು ಸ್ವತಃ ತಾನೇ ಪ್ರಶ್ನೆ ಮಾಡಿಕೊಂಡು ಅಭ್ಯಾಸ ಮಾಡಿದ್ದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಅಗ್ರ ಶ್ರೇಣಿಯಲ್ಲಿ ಪಾಸಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ**
**-ವೀರಣ್ಣ ಯರಗಟ್ಟಿ**

## ಗಿರಿ ಜಿಲ್ಲೆಗೆ 12 ಎಕ್ಸ್‌ಪ್ರೆಸ್ ರೈಲುಗಾಡಿಗಳು ನಿಲ್ಲಬೇಕು: ಉಮೇಶ ಕೆ. ಮುದ್ನಾಳ

• ಉದಯವಾಹಿನಿ ಯಾದಗಿರಿ

ಜಿಲ್ಲಾ ಕೇಂದ್ರ ಯಾದಗಿರಿಯಲ್ಲಿ ಎಲ್ಲ 12 ಎಕ್ಸಪ್ರೆಸ್ ರೈಲುಗಳನ್ನು ನಿಲುಗಡೆಗೊಳಿಸಬೇಕು ಮತ್ತು ಬಂದ್ ಆಗಿರುವ ಇಂಟರಸಿಟಿ ರೈಲು ಪುನಃ ಆರಂಭಿಸಬೇಕು ಎಂದು ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ ಕೆ. ಮುದ್ನಾಳ ನೇತೃತ್ವದಲ್ಲಿ ಬೃಹತ್ ಪ್ರಭಟನೆ ಮೂಲಕ ಯಾದಗಿರಿ ರೈಲ್ವೆಸ್ಟೇಷನ್ ವ್ಯವಸ್ಥಾಪಕ ಮುಖಾಂತರ ಗುಂತಕಲ್ /ಸೊಲ್ಲಾಪೂರ/ ಸಿಕ್ರಿಂದ್ರಾಬಾದ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದಲ್ಲಿ ಮೇಕ್ಯಾನಿಕ ಮತ್ತು ಮಾಲೀಕರ ಸಂಘದ ವತಿಯಿಂದ ಪ್ರಮುಖ ರಸ್ತೆಯಲ್ಲಿ ಬೃಹತ್ ಪ್ರತಿಭಟನಾ ಬೈಕ್ ರ‍್ಯಾಲಿ ಮುಖಾಂತರ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಉಮೇಶ ಕೆ.ಮುದ್ನಾಳ, ಜಿಲ್ಲೆಯಾಗಿ ಸುಮಾರು 15 ವರ್ಷ ಗತಿಸಿದರೂ ಇದುವರೆಗೆ ನಗರದಲ್ಲಿ ಅನೇಕ ಎಕ್‌ಪ್ರೆಸ್ ರೈಲುಗಳು ನಿಲುಗಡೆಯಾಗುತ್ತಿಲ್ಲ.

ಇದರಿಂದ ಜಿಲ್ಲೆಯಾಗಿದ್ದರೂ ಜನತೆಗೆ ಅನುಕೂಲತೆಗಳು ಸಿಗುತ್ತಿಲ್ಲ ಎಂದು ದೂರಿದರು. ಕೂಡಲೇ


ಉದಯವಾಹಿನಿ ಚಿತ್ರ

ಎಲ್ಲಾ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಕ್ರಮ ವಹಿಸಬೇಕು ಮತ್ತು ಕೋವಿಡ್-19 ಸಂದರ್ಭದಲ್ಲಿ ಬಂದ್ ಆಗಿರುವ ಇಂಟರಸಿಟಿ ರೈಲು ಮತ್ತೆ ಆರಂಭಿಸಬೇಕು ಜತೆ ಯಾದಗಿರಿ ರೈಲ್ವೆ ನಿಲ್ದಾಣದಲ್ಲಿ ವಿಶೇಷ ಮೂಲ ಸೌಕರ್ಯಗಳಾದ ಲಿಫ್ಟ್ ವ್ಯವಸ್ಥೆ ರೈಲು ನಿಲ್ದಾಣದ ಪ್ಲಾಟ್ ಫಾರಂಗಳಲ್ಲಿ ಸಂಪೂರ್ಣ ಮೇಲ್ಛಾವಣಿಯ ವ್ಯವಸ್ಥೆ ಆಸನದ ವ್ಯವಸ್ಥೆಗಳು ಅಭಿವೃದ್ಧಿಪಡಿಸಬೇಕು ಹೈಟೆಕ್ ರೈಲು ನಿಲ್ದಾಣವಾಗಿ ಮಾಡಬೇಕೆಂದು ಎಂದು ಆಗ್ರಹಿಸಿದರು.

ಗುಂತಕಲ್ / ಮಂತ್ರಾಲಯ ಹೊರತುಪಡಿಸಿದರೆ ಅತಿಹೆಚ್ಚು ಆದಾಯ ನೀಡುವ ರೈಲ್ವೆ ನಿಲ್ದಾಣ ಇದಾಗಿದ್ದು, ಅಲ್ಲದೇ ಈ ಭಾಗದಿಂದ ಮಹಾನಗರಗಳಿಗೆ ಗುಳೆ ಹೋಗುವ ಜನರು ಎಲ್ಲಾ ಪ್ರತಿ ಎಕ್ಸ್‌ಪ್ರೆಸ್ ರೈಲುಗಾಡಿಗಳಿಗೆ ಎರಡು ಸಾರ್ವಜನಿಕ ಬೋಗಿಗಳನ್ನು ಎರಡು

**ಯಾದಗಿರಿ ರೈಲು ನಿಲ್ದಾಣ ಹೈಟೆಕ್ ಮಾಡಿ, ಸಂಚಾರಿಗಳಿಗೆ, ಅನುಕೂಲವಾಗಲಿ**
**-ಉಮೇಶ.ಕೆ.ಮುದ್ನಾಳ**

ಅಳವಡಿಸಬೇಕು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದು ಅವರೆಲ್ಲರಿಗೂ ಅನುಕೂಲ ಮಾಡಿಕೊಡಲು ಎಲ್ಲಾ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದರು.

ಯಾದಗಿರಿ ತಾಲ್ಲೂಕ ಗ್ಯಾರೇಜ್ ಮಾಲೀಕರು ಮತ್ತು ಮೇಕ್ಯಾನಿಕ ಕ್ಷೇಮಾಭೀವೃದ್ಧಿ ಸಂಘದ ಅಧ್ಯಕ್ಷರು ಶರಣಪ್ಪ ಕೌಳೂರು ಕಾರ್ಯದರ್ಶಿಯಾದ ಮಹ್ಮದ ಗೌಸ್ ಕಾರ್ಯದರ್ಶಿ, ಗೌರವಧ್ಯಕ್ಷರಾದ ಹಣಮಂತ, ಉಪಾಧ್ಯಕ್ಷರಾದ ಬನ್ನಪ್ಪಗೌಡ, ಮಹ್ಮದ ಶಫಿ, ಮಹ್ಮದ ಕರೀಮ್, ಸೈಯದ್ ಸಿರಾಜುದ್ದಿನ್, ಮಹ್ಮದ ನಿಸಾಹಮ್ಮದ, ವೀರಣ್ಣ, ಜಲಾಲಸಾಬ, ಚಂದಪಾಷಾ, ಪ್ರಭು, ಎಂ.ಉಮರ್, ಮಹ್ಮದ ಜಲಾಲುದ್ದಿನ್ ಬಾಬರ್, ರಸೂಲ್‌ಸಾಬ, ಗಾಲಿಬ ಪಟೇಲ್, ರಮೇಶ, ಶಫಿ, ನಾಗು, ಶಿವಪ್ಪ, ಹೊಲಿ. ಶಶಿ ಮಲ್ಲೇಶಿ, ಬಾಬಾಕಾನ, ರಾಜು ಕನಕಪ್ಪ, ಶಿವಪ್ಪ, ಸೇರಿದಂತೆ ಸಹಸ್ರ ಸಂಖ್ಯೆ ಭಾಗವಹಿಸಿದರು.

## ಶಿವ ಧ್ಯಾನದಿಂದ ಕಷ್ಟ ಕಾರ್ಪಣ್ಯಗಳು ದೂರ

• ಉದಯವಾಹಿನಿ ವಡಗೇರಾ

ಶಿವನನ್ನು ಹಾರೈದಿಸುವ ಶಿವರಾತ್ರಿಯು ಅತ್ಯಂತ ಮಂಗಳಕರವಾದದ್ದು ಎಂದು ಪರಮಪೂಜ್ಯ ಶ್ರೀ ಕರುಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು. ಶಿವರಾತ್ರಿ ಅಮಾವಾಸ್ಯೆ ನಿಮಿತ್ಯ ತಾಲ್ಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಸಂಗಮೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ 93.ನೇ ಶಿವಾನುಭವ ಗೋಷ್ಠಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು ಶಿವರಾತ್ರಿಯು ಹಿಂದುಗಳಿಗೆ ಪವಿತ್ರ ಮಾಸವಾಗಿದ್ದು ದೇಶಾದ್ಯಂತ ಶಿವನಿಗೆ ವಿಶೇಷವಾಗಿ ಸಕಲ ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಈ ಮಾಘ ಮಾಸದ ಕೃಷ್ಣ ಪಕ್ಷ ಚತುರ್ದಶಿ ರಾತ್ರಿಯಲ್ಲಿ ಶಿವ ಗಿರಿಜೆಯರ ಕಲ್ಯಾಣ ನಡೆಯುವುದರಿಂದ ಅದನ್ನು ಹೀಗೆ ಶಿವರಾತ್ರಿ ಎಂದು ಪರಿಗಣಿಸಲಾಗುತ್ತದೆ ಪ್ರತಿಯೊಬ್ಬರು ಶಿವನಾಮವನ್ನು ನುಡಿಯುವುದರಿಂದ ಸಕಲ ಕಷ್ಟ ಕಾರ್ಪಣ್ಯಗಳು ನಿವಾರಣೆಯಾಗಿ ಆರೋಗ್ಯ ವೃದ್ಧಿ ಜೊತೆಗೆ ಸಕಲ ಸೌಭಾಗ್ಯಗಳು


ಉದಯವಾಹಿನಿ ಚಿತ್ರ

ದೊರೆಯುತ್ತವೆ ಕೈಲಾಸ ವಾಸಿ ಶಿವನಿಗೆ ಶಿವರಾತ್ರಿಯು ಅತ್ಯಂತ ಪವಿತ್ರವಾದದ್ದು ದಿನನಿತ್ಯ ಸ್ವಲ್ಪ ಸಮಯವಾದರು ಶಿವ ದಾನ ಮಾಡುವಂತೆ ಹೇಳಿದರು. ಈ ಸಂದರ್ಭದಲ್ಲಿ ವೇದಮೂರ್ತಿ ವೀರಭದ್ರಯ್ಯ ಸ್ವಾಮಿ ದೇವಸುಗೂರು, ಬನ್ನಯ್ಯ ಸ್ವಾಮಿ, ಶಿವಯ್ಯ ಸ್ವಾಮಿ ಸಾತಕೇಡ, ಬಸಯ್ಯ ಸ್ವಾಮಿ ಶಿವಪುರ ಗಡ್ಡೆಪ್ಪ ಪೂಜಾರಿ, ರಾಜಪ್ಪಗೌಡ ಶಿವಪುರ, ಶರಣಯ್ಯ ಸ್ವಾಮಿ, ಮರೆಪ್ಪ ತೋಟದ, ವಿಶ್ವನಾಥ್ ರೆಡ್ಡಿ ಗೌಡ ಮಾಚನೂರ್, ಬಸವರಾಜ್ ಕಾಟರಪಲ್ಲಿ, ಗುರುರಾಜ್ ಅಗ್ನಿಹಾಳ ,ಸೈದಣ್ಣ ಶಿವಪುರ, ಸಂತೋಷ ಪಾಟೀಲ್ ಮಶಾಳ, ಮಹಿಳೆಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಮಹಾನಗರ ಪಾಲಿಕೆಯಲ್ಲಿ ಗಲಾಟೆ - ಬೆಳಗ್ಗೆ ಇದ್ದ ಗರಂ ಮಧ್ಯಾಹ್ನ ಬಳಿಕ ಥಂಡಾ

• ವಿಷಯಾಧಾರಿತ ಚರ್ಚೆಗಿಂತ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರ ವಾಗ್ವಾದ, ಆರೋಪ-ಪ್ರತ್ಯಾರೋಪಗಳೇ ಮೇಳೈಸಿದ್ದವು

• ಉದಯವಾಹಿನಿ ಮಂಗಳೂರು

ಕರಾವಳಿಯ ಸದ್ಯದ ವಾತಾವರಣದಂತೆ ನಡೆದ ಮಂಗಳೂರು ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯು ಬೆಳಗ್ಗಿನಿಂದ ಮಧ್ಯಾಹ್ನವರೆಗೆ ವಾಗ್ವಾದಗಳಿಂದ ಗರಂ ಆಗಿದ್ದರೆ ಊಟದ ವಿರಾಮದ ಬಳಿಕ ಕೂಲಾ ಗಿಯೇ ನಡೆದು ಮುಗಿಯಿತು. ಪಾಲಿಕೆಯ ಪ್ರಸಕ್ತ ಐದು ವರ್ಷಗಳ ಆಡಳಿತಾವಧಿಯ ಕೊನೆಯ ಸಾಮಾನ್ಯ ಸಭೆ ಮೇಯರ್ ಮನೋಜ್ ಕುಮಾರ್ ಅಧ್ಯಕ್ಷತೆಯಲ್ಲಿನಡೆದಿದ್ದು, ವಿಷಯಾಧಾರಿತ ಚರ್ಚೆಗಿಂತ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರ ವಾಗ್ವಾದ, ಆರೋಪ-ಪ್ರತ್ಯಾರೋಪಗಳೇ ಮೇಳೈಸಿದ್ದವು.

ಮೇಯರ್ ಪ್ರಶ್ನೋತ್ತರಕ್ಕೆ ಅವಕಾಶ ನೀಡುತ್ತಿದ್ದಂತೆ ಪ್ರತಿಪಕ್ಷ ನಾಯಕ ಅನಿಲ್ ಕುಮಾರ್, ಪಾಲಿಕೆಯಲ್ಲಿ ಕಳೆದ 5 ವರ್ಷಗಳ ಕಾಲ ಬಿಜೆಪಿ ಆಡಳಿತ ನಡೆಸಿದ್ದು, ಒಳಚರಂಡಿಗಾಗಿ 300 ಕೋಟಿ

**■ ಮಂಗಳೂರು ಪಾಲಿಕೆಯ ಸಾಮಾನ್ಯ ಸಭೆ.**
**■ 5 ವರ್ಷಗಳ ಮನಪಾ ಆಡಳಿತಾವಧಿ ಕೊನೆ.**
**■ ಎರಡೂವರೆ ತಾಸು ವಾಗ್ವಾದದಲ್ಲೇ ವ್ಯರ್ಥ.**

ರೂ. ಖರ್ಚು ಮಾಡಲಾಗಿದೆ. ಆದರೆ ಕಾಮಗಾರಿ ಸಂಪೂರ್ಣ ವಿಫಲವಾಗಿದೆ. ಜಲಸಿರಿಯಡಿ 24X7 ನೀರಿನ ವಾಗ್ದಾನ ನೀಡಿ 797 ಕೋಟಿ ರೂ.ಗಳ ಅನುದಾನ ಬಳಕೆ ಮಾಡಿದ್ದರೂ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ, ಇದು ಆಡಳಿತದ ವೈಫಲ್ಯ ಎಂದರು. ಈ ವೇಳೆ ಆಡಳಿತ ಪಕ್ಷದ ಸದಸ್ಯೆ ಶಕೀಲಾ ಕಾವ ಮಧ್ಯ ಪ್ರವೇಶಿಸಿ, ಸದನದಲ್ಲಿರಾಜಕೀಯ ಪ್ರೇರಿತ ಹೇಳಿಕೆ ಬೇಡ, ಸಾಮಾನ್ಯ ಸಭೆಯಲ್ಲಿ ಅಭಿವೃದ್ಧಿ ವಿಚಾರದಲ್ಲಿಚರ್ಚೆಯಾಗಲಿ ಎಂದರು.


ಉದಯವಾಹಿನಿ ಚಿತ್ರ

**ಪಾಲಿಕೆಯ ಸಾಮಾನ್ಯ ಸಭೆ**

ಈ ವೇಳೆ ಪ್ರತಿಪಕ್ಷ ಸದಸ್ಯರಾದ ಪ್ರವೀಣ್ ಚಂದ್ರ ಆಳ್ವ ಹಾಗೂ ವಿನಯ್ ರಾಜ್, ನಮಗೂ ಮಾತನಾಡಲು ಅವಕಾಶ ಕೊಡಿ. 5 ವರ್ಷದಲ್ಲಿಒಂದೇ ಒಂದೇ ಸೂರು ನೀಡಲು ನಿಮಗೆ ಆಗಿಲ್ಲ. ಸ್ಮಾರ್ಟ್ ಸಿಟಿ ಕಾಮಗಾರಿಯೂ ಅಪೂರ್ಣವಾಗಿದೆ ಎಂದರು. ಇದು ಆಡಳಿತ ಪಕ್ಷದ ಸದಸ್ಯರನ್ನು ಕೆರಳಿಸಿದ್ದು, ಪ್ರತಿಪಕ್ಷದ ವಿರುದ್ಧ ಆರೋಪಗಳ ಸುರಿಮಳೆಗೈದರು.

ಎರಡೂ ಪಕ್ಷಗಳ ವಾಗ್ವಾದ ತಾರಕಕ್ಕೇರಿದ್ದು, ಮೇಯರ್ ಮನೋಜ್ ಕುಮಾರ್ ಬೆಲ್ ಬಾರಿಸಿ, ಸದನದಿಂದ ನಿರ್ಗಮಿಸಿದರು. ಆಡಳಿತ ಪಕ್ಷದ ಸದಸ್ಯರೂ ಸದನದಿಂದ ಹೊರನಡೆದರು.

ಸುಮಾರು 15 ನಿಮಿಷಗಳ ಬಳಿಕ ಮತ್ತೆ ಉಪ ಮೇಯರ್ ಹಾಗೂ ಸದಸ್ಯರ ಜತೆ ಸದನ ಪ್ರವೇಶಿಸಿದ ಮೇಯರ್ ಮನೋಜ್ ಕುಮಾರ್, ಐದು ವರ್ಷದ ಆಡಳಿತದ ಅನಿಸಿಕೆ ಹಂಚಿಕೊಳ್ಳಲು ಸದಸ್ಯರಿಗೆ ಅವಕಾಶ ನೀಡಲಾಗಿತ್ತು. ಪ್ರತಿಪಕ್ಷ ನಾಯಕರು ಆರೋಪದಲ್ಲಿನಿರತರಾದ ಕಾರಣ ಸಭೆ ಮುಂದೂಡಬೇಕಾಯಿತು ಎನ್ನುತ್ತಿದ್ದಂತೆಯೇ, ಮತ್ತೆ ಗದ್ದಲ ಆರಂಭವಾಯಿತು.

ಮುಖ್ಯ ಸಚೇತಕ ಪ್ರೇಮಾನಂದ ಶೆಟ್ಟಿ ಮಾತನಾಡಿ, ಕೊನೆಯ ಸಭೆಯನ್ನು ಅಡ್ಡಿಪಡಿಸುವ ನಿಟ್ಟಿನಲ್ಲಿಪೂರ್ವಯೋಜಿತವಾಗಿ ಪ್ರತಿಪಕ್ಷ ಸದಸ್ಯರು ಬಂದಿದ್ದಾರೆ. ನಾಳೆಯಿಂದ ಆಡಳಿತಾಧಿಕಾರಿ ಆಡಳಿತ ಬರಲಿದೆ ಎಂದು ಕೆಣಕಿದರು.

**2.30 ಗಂಟೆಗಳ ಕಾಲ ವ್ಯರ್ಥ**

**11 ಗಂಟೆಗೆ ಆರಂಭವಾಗಿದ್ದ ಸಭೆ ಮಧ್ಯಾಹ್ನ 1.30ಗಂಟೆಗಳ ಕಾಲ ನಡೆದಿದ್ದು, ಸುಮಾರು 2.30 ಗಂಟೆಗಳ ಕಾಲ ಆಡಳಿತ-ಪ್ರತಿಪಕ್ಷ ಸದಸ್ಯರು ಆರೋಪದಲ್ಲೇ ಕಳೆದರು. ಕಾರ್ಪೊರೇಟರ್ ಪ್ರವೀಣ್ ಚಂದ್ರ ಆಳ್ವ ಮಾತಿನ ವರಸೆ ಮುಂದುವರಿಸಿದಾಗ ಪರಸ್ಪರ ಸದಸ್ಯರ ನಡುವೆ ಮಾತಿನ ಕೆಸರೆರಚಾಟ ಆರಂಭವಾಗಿ ಮತ್ತೆ ಸಭೆಯಲ್ಲಿಗೊಂದಲದ ವಾತಾವರಣ ಸೃಷ್ಟಿಯಾಯಿತು.**

### ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ದೇಶ ಅಪಾಯದಲ್ಲಿದೆ ಪರಿಸ್ಥಿತಿ ಕಂಡು ಆತಂಕ ವ್ಯಕ್ತಪಡಿಸಿದ ಬಾಂಗ್ಲಾ ಸೇನಾ ಮುಖ್ಯಸ್ಥ

# ಶಾಂತಿ ಕಾಪಾಡುವಂತೆ ಬಾಂಗ್ಲಾದೇಶದ ನಾಗರಿಕರಿಗೆ ಮನವಿ

- ರಾಜಕೀಯ ಅಸ್ಥಿರತೆಯಿಂದ ಬಾಂಗ್ಲಾದೇಶದಲ್ಲಿ ಕಾನೂನು ಸುವ್ಯವಸ್ಥೆ ಅಪಾಯದಲ್ಲಿ
- ದೇಶದ ಪರಿಸ್ಥಿತಿ ಕಂಡು ಬಾಂಗ್ಲಾದೇಶದ ಸೇನಾ ಮುಖ್ಯಸ್ಥ ಜನರಲ್ ವಾಕರ್-ಉಜ್-ಜಮಾನ್ ಆತಂಕ

**ಬಾಂಗ್ಲಾದೇಶ:** ರಾಜಕೀಯ ಅಸ್ಥಿರತೆಯಿಂದ ದೇಶದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಪರಿಸ್ಥಿತಿ ಗಂಭೀರವಾಗಿದ್ದು, ಜನರು ನಿರಂತರವಾಗಿ ಒಬ್ಬರನ್ನೊಬ್ಬರು ನಿಂದಿಸುವಲ್ಲಿ ನಿರತರಾಗಿದ್ದಾರೆ' ಎಂದು ಬಾಂಗ್ಲಾದೇಶದ ಸೇನಾ ಮುಖ್ಯಸ್ಥ ಜನರಲ್ ವಾಕರ್-ಉಜ್-ಜಮಾನ್ ಆತಂಕ ವ್ಯಕ್ತಪಡಿಸಿದ್ದಾರೆ.

ಸಶಸ್ತ್ರ ಪಡೆಗಳ ಸಮಾರಂಭವೊಂದರಲ್ಲಿ ಮಾತನಾಡಿದ ಜನರಲ್ ಜಮಾನ್, ನಾವು ಕಂಡಿರುವ ಅರಾಜಕತೆ ನಾವೇ ಸೃಷ್ಟಿಸಿಕೊಂಡದ್ದು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪೊಲೀಸ್ ಪಡೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ಪೊಲೀಸ್ ಇಲಾಖೆಯ ಹಲವು ಅಧಿಕಾರಿಗಳು ನ್ಯಾಯಾಂಗ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ಕೆಲವರು ಜೈಲು ಶಿಕ್ಷೆಗೂ ಒಳಪಟ್ಟಿದ್ದಾರೆ. ಇದರಿಂದ ಹೆದರಿರುವ ಇನ್ನಷ್ಟು ಅಧಿಕಾರಿಗಳು ಪರಿಪೂರ್ಣವಾಗಿ ಕೆಲಸ ಮಾಡುತ್ತಿಲ್ಲ. ಈ ಎಲ್ಲಾ ಬೆಳವಣಿಗೆಗಳಿಂದ ಸೇನೆಯ ಮೇಲೆ ಹೆಚ್ಚಿನ ಜವಾಬ್ದಾರಿ ಬಿದ್ದಿದೆ ಎಂದು ಹೇಳಿದ್ದಾರೆ. ದೇಶದಲ್ಲಿ ಏಕತೆ ಮತ್ತು ಶಿಸ್ತಿನ ತುರ್ತು ಅವಶ್ಯಕತೆ ಯಿದೆ. ನಿರಂತರವಾಗಿ ನಡೆಯುತ್ತಿರುವ ಒಳಜಗಳವು ಬಾಂಗ್ಲಾದೇಶದ ಸಾರ್ವಭೌಮತ್ವವನ್ನು ಅಪಾಯಕ್ಕೆ ಸಿಲುಕಿಸುತ್ತಿದೆ. ಭಿನ್ನಾಭಿಪ್ರಾಯಗಳನ್ನು ಮರೆತು ಪರಸ್ಪರ ಜಗಳ ವಾಡುವುದನ್ನು ನಿಲ್ಲಿಸದಿದ್ದರೆ, ಪರಸ್ಪರ ಹಲ್ಲೆ, ಕೊಲೆಗಳನ್ನು ಮುಂದುವರಿಸಿದರೆ, ದೇಶದ ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ಸಮಸ್ಯೆಯಾಗುತ್ತದೆ ಎಂದು ಎಚ್ಚರಿಸಿದರು. ನನಗೆ ಯಾವುದೇ ಆಕಾಂಕ್ಷೆ ಗಳಿಲ್ಲ. ಕಳೆದ ಏಳೆಂಟು ತಿಂಗಳುಗಳಿಂದ ನಾನು ಸಾಕಷ್ಟು ಅನುಭವಿಸಿದ್ದೇನೆ. ಎಲ್ಲಾರೂ ಪರಸ್ಪರ ಆರೋಪ ಮಾಡುವುದರಲ್ಲಿ ನಿರತರಾಗಿರುವುದರಿಂದ ದುಷ್ಕರ್ಮಿಗಳಿಗೆ ಅನುಕೂಲಕರ ಪರಿಸ್ಥಿತಿ ಸೃಷ್ಟಿಯಾಗಿದೆ. ಇಂತಹ ಪರಿಸ್ಥಿತಿ ಯಲ್ಲಿ ಎಂತ ಹದ್ದೇ ಗಂಭೀರ ಅಪರಾಧ ಎಸಗಿದರೂ, ಕಾನೂನಿನಿಂದ ತಪ್ಪಿಸಿ ಕೊಳ್ಳಬಹುದು ಎಂದು ನಂಬುತ್ತಾರೆ ಎನ್ನುತ್ತಾ ಶಾಂತಿ ಕಾಪಾಡುವಂತೆ ಬಾಂಗ್ಲಾದೇಶದ ನಾಗರಿಕರಿಗೆ ಮನವಿ ಮಾಡಿದರು. ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರವನ್ನು ಬೆಂಬಲಿಸುವಂತೆ ಮತ್ತು ಸಾಧ್ಯವಾದಷ್ಟು ಬೇಗ ಚುನಾವಣೆ ನಡೆಸುವ ಭರವಸೆ ನೀಡಿದ ಸೇನಾ ಮುಖ್ಯಸ್ಥರು, 'ಆರಂಭದಲ್ಲಿ, ಚುನಾವಣೆ ನಡೆಸಲು 18 ತಿಂಗಳುಗಳು ಬೇಕಾಗುತ್ತದೆ ಎಂದು ನಾನು ಹೇಳಿದ್ದೆ. ನಾವು ಆ ಹಾದಿಯಲ್ಲಿದ್ದೇವೆ. ಪ್ರೊಫೆಸರ್ ಯೂನುಸ್ ನಮ್ಮನ್ನು ಒಗ್ಗಟ್ಟಿನಿಂದ ಇರಿಸಿಕೊಳ್ಳಲು ಶ್ರಮಿಸುತ್ತಿದ್ದಾರೆ. ಅವರಿಗೆ ಸಹಾಯ ಮಾಡೋಣ ಎಂದರು.



ಬಾಂಗ್ಲಾದೇಶವು 2025ರ ಕೊನೆಯಲ್ಲಿ ಅಥವಾ 2026ರ ಆರಂಭದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲಿದೆ. ಈ ಮಧ್ಯೆ, ಪ್ರಮುಖ ವಿದ್ಯಾರ್ಥಿ ಪ್ರತಿಭಟನಾ ನಾಯಕ ನಾಹಿದ್ ಇಸ್ಲಾಂ, ಫೆ.28ರಂದು ಹೊಸ ರಾಜಕೀಯ ಪಕ್ಷವನ್ನು ಆರಂಭಿಸುವ ನಿರೀಕ್ಷೆಯಲ್ಲಿ ಮಧ್ಯಂತರ ಸರ್ಕಾರದ ದೂರಸಂಪರ್ಕ ಸಚಿವಾಲಯಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

**ಪೊಲೀಸ್ ಪಡೆಯ ಬಗ್ಗೆ ಕಳವಳ**

**ರಾಜಕೀಯ ಅಸ್ಥಿರತೆಯಿಂದ ದೇಶದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಪರಿಸ್ಥಿತಿ ಗಂಭೀರವಾಗಿದ್ದು, ಜನರು ನಿರಂತರವಾಗಿ ಒಬ್ಬರನ್ನೊಬ್ಬರು ನಿಂದಿಸುವಲ್ಲಿ ನಿರತರಾಗಿದ್ದಾರೆ ಎಂದು ಬಾಂಗ್ಲಾದೇಶದ ಸೇನಾ ಮುಖ್ಯಸ್ಥ ಜನರಲ್ ವಾಕರ್-ಉಜ್-ಜಮಾನ್ ಆತಂಕ ವ್ಯಕ್ತಪಡಿಸಿದ್ದಾರೆ. ನಾವು ಕಂಡಿರುವ ಅರಾಜಕತೆ ನಾವೇ ಸೃಷ್ಟಿಸಿಕೊಂಡದ್ದು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪೊಲೀಸ್ ಪಡೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ಪೊಲೀಸ್ ಇಲಾಖೆಯ ಹಲವು ಅಧಿಕಾರಿಗಳು ನ್ಯಾಯಾಂಗ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಕೆಲವರು ಜೈಲು ಶಿಕ್ಷೆಗೂ ಒಳಪಟ್ಟಿದ್ದಾರೆ. ಇದರಿಂದ ಇನ್ನಷ್ಟು ಅಧಿಕಾರಿಗಳು ಪರಿಪೂರ್ಣ ವಾಗಿ ಕೆಲಸ ಮಾಡುತ್ತಿಲ್ಲ. ಪರಿಣಾಮ ಸೇನೆಯ ಮೇಲೆ ಜವಾಬ್ದಾರಿ ಹೆಚ್ಚಿದೆ ಎಂದರು.**

**ಮೂರು ವಾರದಲ್ಲಿ 8,600 ಜನರ ಬಂಧನ**

ಕಳೆದ ಕೆಲವು ತಿಂಗಳುಗಳಲ್ಲಿ ಬಾಂಗ್ಲಾದೇಶದಲ್ಲಿ ಹಿಂಸಾಚಾರ, ಧ್ವಂಸ, ಗಲಭೆ ಮತ್ತು ಇತರ ರೀತಿಯ ಅಪರಾಧಗಳು ಹೆಚ್ಚಾಗಿವೆ. ಫೆಬ್ರವರಿಯಲ್ಲಿ ಪರಿಸ್ಥಿತಿ ತುಂಬಾ ಹದಗೆಟ್ಟಿದ್ದರಿಂದ ಭದ್ರತಾ ಪಡೆಗಳು ಆಪರೇಷನ್ ಡೆವಿಲ್ ಹಂಟ್ ಎಂಬ ಕಾರ್ಯಾಚರಣೆಯನ್ನು ಆರಂಭಿಸಬೇಕಾಯಿತು.

ಮೂರು ವಾರಗಳಿಗಿಂತ ಕಡಿಮೆ ಅವಧಿಯಲ್ಲಿ 8,600 ಜನರನ್ನು ಬಂಧಿಸಲಾಯಿತು. ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಈ ವ್ಯಕ್ತಿಗಳ ಮೇಲೆ ದೇಶವನ್ನು ಅಸ್ಥಿರಗೊಳಿಸಲು ಪ್ರಯತ್ನಿಸಿದ ಆರೋಪ ಹೊರಿಸಿದೆ.

ಕಳೆದ ವರ್ಷ ಆಗಸ್ಟ್‌ನಲ್ಲಿ ದೇಶಾದ್ಯಂತ ವ್ಯಾಪಕ ಪ್ರತಿಭಟನೆಗಳ ನಡುವೆ ಶೇಖ್ ಹಸೀನಾ ಭಾರತಕ್ಕೆ ಪಲಾಯನ ಮಾಡಿದ ನಂತರ ಜನರಲ್ ವಾಕರ್-ಉಜ್-ಜಮಾನ್ ಬಾಂಗ್ಲಾದೇಶದ ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಶೇಖ್ ಹಸೀನಾ ಅವರನ್ನು ಪದಚ್ಯುತಗೊಳಿಸಿದ ನಂತರ, ಬಾಂಗ್ಲಾ ಸೇನೆಗೆ ನಾಗರಿಕರನ್ನು ಬಂಧಿಸುವುದು ಸೇರಿದಂತೆ ಪೊಲೀಸರಂತೆ ನ್ಯಾಯಾಂಗ ಅಧಿಕಾರಗಳನ್ನು ನೀಡಲಾಯಿತು.

## ಪವನ್ ಕಲ್ಯಾಣ್ ವಿರೋಧಿಗಳಿಗೆ ಜೈಲು ಭಾಗ್ಯ



**ಹೈದರಾಬಾದ್:** ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಸೇರಿದಂತೆ ಇತರೆ ಕೆಲ ನಾಯಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ ಆರೋಪದ ಮೇಲೆ ತೆಲುಗಿನ ಖ್ಯಾತ ಹಾಸ್ಯನಟ ಪೋಸಾನಿ ಕೃಷ್ಣ ಮುರಳಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪೋಸಾನಿ ಕೃಷ್ಣ ಮುರಳಿ ಅವರು ತೆಲುಗು ಚಿತ್ರರಂಗದ ಜನಪ್ರಿಯ ನಟರಾಗಿರುವ ಜೊತೆಗೆ ವೈಸಿಆರ್ ಪಕ್ಷದ ಮುಖಂಡರೂ ಆಗಿದ್ದಾರೆ. ಕೃಷ್ಣ ಮುರಳಿಯನ್ನು ಪವನ್ ಕಲ್ಯಾಣ್ ಸೇರಿದಂತೆ ಇತರೆ ಕೆಲ ನಾಯಕರ ಬಗ್ಗೆ ಅವಾಚ್ಯ ಶಬ್ದಗಳ ಬಳಸಿ ನಿಂದಿಸಿದ ಹಾಗೂ ಜಾತಿ ನಿಂದನೆ ಮಾಡಿದ ಆರೋಪದಲ್ಲಿ ಬಂಧನ ಮಾಡಲಾಗಿದೆ. ಪೋಸಾನಿ ಕೃಷ್ಣ ಮುರಳಿ ಈ ಹಿಂದೆ ಹಲವು ಬಾರಿ ನಟ ಪವನ್ ಕಲ್ಯಾಣ್ ಬಗ್ಗೆ ಅತ್ಯಂತ ಕೆಟ್ಟದಾಗಿ ಮಾತನಾಡಿದ್ದರು.

ಪವನ್ ಕಲ್ಯಾಣ್ ಪತ್ನಿಯ ಬಗ್ಗೆಯೂ ಅವರು ಅಪಹಾಸ್ಯ ಮಾಡಿದ್ದರು. ಪವನ್ ಕಲ್ಯಾಣ್ ಪತ್ನಿಗೆ ಕೆಲಸದವರ ಜೊತೆ ಅಕ್ರಮ ಸಂಬಂಧ ಇದೆ, ಆಕೆ ವೇಶ್ಯ ಎಂದೆಲ್ಲ ಮಾಧ್ಯಮಗಳ ಮುಂದೆ ಬಾಯಿಗೆ ಬಂದಂತೆ ಮುರಳಿ ಮಾತನಾಡಿದ್ದರು. ಆಗೆಲ್ಲ ಜನಸೇನಾ ಕಾರ್ಯಕರ್ತರು ಮುರಳಿ ವಿರುದ್ಧ ದಾಳಿಗಳನ್ನು ಸಹ ಮಾಡಿದ್ದರು. ಇತ್ತೀಚೆಗೆ ಅವರು ಪವನ್ ಕಲ್ಯಾಣ್ ವಿರುದ್ಧ ವಾಗ್ದಾಳಿ ಮಾಡಿದ್ದರು ಎನ್ನಲಾಗುತ್ತಿದೆ. ಹೈದರಾಬಾದ್‌ನ ಯೆಲ್ಲರೆಡ್ಡಿ ಗುಡಾನಲ್ಲಿನ ನ್ಯೂ ಸೈನ್ಸ್ ಕಾಲೊನಿಯಲ್ಲಿ ವಾಸವಿರುವ ಮುರಳಿ ಮನೆಗೆ ನಿನ್ನೆ ರಾತ್ರಿ ದಾಳಿ ನಡೆಸಿದ ಅನ್ನಮಯ ಜಿಲ್ಲೆ ಎಸ್‌ಪಿ ಬಿ ಕೃಷ್ಣ ರಾವ್ ನೇತೃತ್ವದ ಪೊಲೀಸ್ ತಂಡ ಮುರಳಿಯವರನ್ನು ಬಂಧಿಸಿದೆ. ಈ ವೇಳೆ ನಟ ಮುರಳಿ, ಪೊಲೀಸರೊಟ್ಟಿಗೆ ವಾಗ್ವಾದ ಸಹ ಮಾಡಿದ್ದಾರೆ. ನಾನು ಬರುವುದಿಲ್ಲ, ನನಗೆ ಅಪರೇಷನ್ ಆಗಿದೆ. ಚಿಕಿತ್ಸೆ ಪಡೆದುಕೊಂಡು ಬರುತ್ತೇನೆ ಎಂದರು ಕೇಳದೆ ಅವರನ್ನು ಬಂಧಿಸಲಾಗಿದೆ.

ಈ ವ್ಯಕ್ತಿ ಸಹ ಚುನಾವಣೆಗೆ ಮುಂಚೆ ಪವನ್ ಕಲ್ಯಾಣ್, ಚಂದ್ರಬಾಬು ನಾಯ್ಡು ಹಾಗೂ ಇತರೆ ಕೆಲವು ಟಿಡಿಪಿ ನಾಯಕರ ವಿರುದ್ಧ ಅತ್ಯಂತ ಕೀಳು ಭಾಷೆಗಳನ್ನು ಬಳಸಿ ಬೆದರಿಕೆ ಒಡ್ಡಿದ್ದ.

**ಮುರಳಿಯವರ ಮೇಲೆ ಬಿಎನ್‌ಎಸ್ ಸೆಕ್ಷನ್ 196, 111, ಬಿಎನ್‌ಎಸ್ಎಸ್ 47 (1), (2) ಪ್ರಕರಣಗಳನ್ನು ದಾಖಲಿಸಲಾಗಿದೆ. ಆರೋಪಿಯ ಮೇಲಿನ ಆರೋಪಗಳು ಜಾಮೀನುರಹಿತವಾಗಿದ್ದು, ಆರೋಪಿಯನ್ನು ರಾಜಂಪೇಟೆಯ ಹೆಚ್ಚುವರಿ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಲಾಗುವುದು. ಕೆಲ ದಿನಗಳ ಹಿಂದಷ್ಟೆ ಗನ್ನವರಂ ಮಾಜಿ ಶಾಸಕ, ವೈಎಸ್‌ಆರ್‌ಸಿ ಪಕ್ಷದ ಮುಖಂಡ ವಲ್ಲಭನೇನಿ ವಂಶಿಯನ್ನು ಬಂಧಿಸಲಾಗಿತ್ತು.**


ಚುನಾವಣೆ ಪ್ರಚಾರದ ಸಮಯದಲ್ಲಿ ಮಾತನಾಡಿದ್ದ ಪವನ್ ಕಲ್ಯಾಣ್, ಇಂದು ಯಾರು ನನ್ನ ಬಗ್ಗೆ, ನನ್ನ ಕುಟುಂಬದ ಬಗ್ಗೆ ಗೆಳೆಯರ ಬಗ್ಗೆ ಮಾತನಾಡುತ್ತಿದ್ದೀರೋ ನನಗೆ ಗೊತ್ತಿದೆ. ಅವರಿಗೆ ತಕ್ಕ ಶಾಸ್ತಿ ಕಾದಿದೆ ಎಂದು ಎಚ್ಚರಿಕೆ ನೀಡಿದ್ದರು. ಅಂತೆಯೇ ಇದೀಗ ಒಬ್ಬೊಬ್ಬರಾಗಿ ಪೊಲೀಸರ ಅತಿಥಿಗಳಾಗುತ್ತಿದ್ದಾರೆ. ಮಾಜಿ ಶಾಸಕ ಕೊಡಲಿ ನಾನಿ, ನಟಿ ರೋಜಾ ಇನ್ನೂ ಕೆಲವರ ಬಂಧನ ಸಹ ಆಗುವ ಸಾಧ್ಯತೆ ಇದೆ.

## ಅರಣ್ಯ ಕಬಳಿಕೆ ಆರೋಪ ಅಲ್ಲಗಳೆದ ಸ್ಯಾಮ್ ಪಿತ್ರೋಡಾ

**ನವದೆಹಲಿ:** ಬೆಂಗಳೂರಿನಲ್ಲಿ 12.35 ಎಕರೆ ಸರಕಾರಿ ಭೂಮಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಬಿಜೆಪಿ ನಾಯಕ ಎನ್.ಆರ್.ರಮೇಶ್ ಅವರು ಮಾಡಿರುವ ಆರೋಪವನ್ನು ಸಾಗರೋತ್ತರ ಕಾಂಗ್ರೆಸ್ ಮುಖ್ಯಸ್ಥ ಸ್ಯಾಮ್ ಪಿತ್ರೋಡಾ ತಳ್ಳಿ ಹಾಕಿದ್ದಾರೆ. ನಾನು ಭಾರತದಲ್ಲಿ ಯಾವುದೇ ಭೂಮಿ, ಮನೆ ಅಥವಾ ಷೇರುಗಳನ್ನು ಹೊಂದಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ. ಸ್ಯಾಮ್ ಪಿತ್ರೋಡಾ ಅವರು ಅರಣ್ಯ ಇಲಾಖೆ ಅಧಿಕಾರಿಗಳು ಸೇರಿದಂತೆ ಐವರು ಹಿರಿಯ ಸರ್ಕಾರಿ ಅಧಿಕಾರಿಗಳ ಸಹಾಯದಿಂದ ಬೆಂಗಳೂರಿನ ಯಲಹಂಕದಲ್ಲಿ 150 ಕೋಟಿ ರೂ.ಗಳ ಮೌಲ್ಯದ 12.35 ಎಕರೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಬಿಜೆಪಿ ಮು ಖಂಡ ಎನ್.ಆರ್.ರಮೇಶ್ ಆರೋಪಿಸಿದ್ದರು. ಪಿತ್ರೋಡಾ ಅಕ್ರಮ ಕುರಿತಂತೆ ರಮೇಶ್ ಅವರು ಜಾರಿ ನಿರ್ದೇಶನಾಲಯ, ಕರ್ನಾಟಕ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಅವರು. ನಾನು ಭಾರತದಲ್ಲಿ ಯಾವುದೇ ಭೂಮಿ, ಮನೆ ಅಥವಾ ದಾಸ್ತಾನುಗಳನ್ನು ಹೊಂದಿಲ್ಲ ಎಂದು ಪಿತ್ರೋಡಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ಲಂಚವನ್ನು ಪಾವತಿಸಿಲ್ಲ**


**ನಾನು ಭಾರತ ಸರ್ಕಾರದೊಂದಿಗೆ ಕೆಲಸ ಮಾಡಿದ ಅವಧಿಯಲ್ಲಿ 1980ರ ದಶಕದ ಮಧ್ಯದಲ್ಲಿ ಪ್ರಧಾನಿ ರಾಜೀವ್ ಗಾಂಧಿ ಅವರೊಂದಿಗೆ ಅಥವಾ ಇದಲ್ಲದೆ, ನನ್ನ 83 ವರ್ಷಗಳ ಜೀವಿತಾವಧಿಯಲ್ಲಿ ನಾನು ಭಾರತದಲ್ಲಿ ಅಥವಾ ಬೇರೆ ಯಾವುದೇ ದೇಶದಲ್ಲಿ ಯಾವುದೇ ಲಂಚವನ್ನು ಪಾವತಿಸಿಲ್ಲ ಅಥವಾ ಸ್ವೀಕರಿಸಿಲ್ಲ ಎಂದು ನಿಸ್ಸಂದಿಗ್ಧವಾಗಿ ದಾಖಲಿಸಲು ನಾನು ಬಯಸುತ್ತೇನೆ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.**



## ರೂಪಾಯಿ ಮೌಲ್ಯ ಕುಸಿತ ಅನಿವಾಸಿ ಭಾರತೀಯರಿಗೆ ವರದಾನ

**ಮುಂಬೈ:** ರೂಪಾಯಿ ಮೌಲ್ಯ ಕುಸಿತ ಅನಿವಾಸಿ ಭಾರತೀಯರಿಗೆ ವರದಾನವಾಗಬಹುದು, ಆದರೆ ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವ ಭಾರತೀಯರಿಗೆ ಆತಂಕಕ್ಕೆ ಎಡೆ ಮಾಡಿದೆ. ಶಿಕ್ಷಣದ ನಂತರದ ಕೆಲಸದ ವೀಸಾ ಮಾನದಂಡಗಳನ್ನು ಬಿಗಿಗೊಳಿಸುವುದು ವಿದೇಶದಲ್ಲಿರುವ ವಿದ್ಯಾರ್ಥಿಗಳ ಆತಂಕ ಹೆಚ್ಚಳ ಮಾಡಿದ್ದೇನೆ. ಇದು ವಿದೇಶದಲ್ಲಿ ಹೆಚ್ಚಿನ ವೇತನ ಮತ್ತು ಸಾಲ ಬೇಗನೆ ಮರುಪಾವತಿಸುವ ಸಾಧ್ಯತೆಗಳಿಗೆ ಹಿನ್ನಡೆಯಾಗುವ ನಿರೀಕ್ಷೆ ಇದೆ.

ಆಗಸ್ಟ್‌ನಲ್ಲಿ 83.5 ರಷ್ಟಿದ್ದ ಡಾಲರ್ ವಿರುದ್ಧ ಆರು ತಿಂಗಳಲ್ಲಿ ರೂಪಾಯಿ ಮೌಲ್ಯ ಸುಮಾರು ಶೇಕಡಾ 5 ರಷ್ಟು ಕುಸಿದು 87.2 ಕ್ಕೆ ತಲುಪಿದೆ. ಅಂದರೆ, ರೂ. 1 ಕೋಟಿ ಬೋಧನಾ ವೆಚ್ಚದ ಬಜೆಟ್‌ನಲ್ಲಿ ರೂ. 5 ಲಕ್ಷ ಹೆಚ್ಚಳವಾಗಿದೆ. ಅದೇ ಸಮಯದಲ್ಲಿ, ಅಂತರರಾಷ್ಟ್ರೀಯ ಪದವೀಧರರು ಎರಡು ವರ್ಷಗಳನ್ನು ಮೀರಿ ಉಳಿಯಲು 36,000-40,000 ಪೌಂಡ್‌ಗಳ ನಡುವಿನ ಸಂಬಳದೊಂದಿಗೆ ಪದವಿ ಹಂತದ ಉದ್ಯೋಗಗಳನ್ನು ಪಡೆಯಬೇಕೆಂದು ಇಂಗ್ಲೆಂಡ್ ಪ್ರಸ್ತಾಪಿಸಿದೆ. ಕೆನಡಾ ಕೂಡ ಭಾರತೀಯ ವಿದ್ಯಾರ್ಥಿಗಳಿಗೆ ವಲಸೆ ನಿಯಮಗಳನ್ನು ಬಿಗಿಗೊಳಿಸುತ್ತಿದೆ, ಅಧಿಕಾರಿಗಳಿಗೆ ಪರವಾನಗಿಗಳನ್ನು ರದ್ದುಗೊಳಿಸಲು ಮತ್ತು ವಿದ್ಯಾರ್ಥಿ ನೇರ ಸ್ಟ್ರೀಮ್ ವೀಸಾ ಕಾರ್ಯಕ್ರಮವನ್ನು ಕೊನೆಗೊಳಿಸಲು ಅವಕಾಶ ನೀಡು ತ್ತದೆ. ಈ ಹಿಂದೆ, ವಿದ್ಯಾರ್ಥಿಗಳು ಸಾಲದ ಹೆಚ್ಚಿನ ಭಾಗವನ್ನು ಡಾಲರ್‌ಗಳಲ್ಲಿ ಗಳಿಸಲು ಮತ್ತು ಮರು ಪಾವತಿಸಲು ಶಿಕ್ಷಣದ ನಂತರದ ಕೆಲಸದ ವೀಸಾ ವನ್ನು ಬಳಸುತ್ತಿದ್ದರು. ಪದವಿಪೂರ್ವ ಕಾರ್ಯ ಕ್ರಮಗಳಲ್ಲಿರುವ ಭಾರತೀಯ ವಿದ್ಯಾರ್ಥಿಗಳಿಗೆ, ಯುಎಸ್‌ನಲ್ಲಿ ಅವರ ಒಟ್ಟು ಶಿಕ್ಷಣ ವೆಚ್ಚ ರೂ. 1.5 ಕೋಟಿಗಿಂತ ಹೆಚ್ಚಿರುವುದರಿಂದ ಇದರ ಪರಿಣಾಮ ತೀವ್ರವಾಗಿರುತ್ತದೆ ಎಂದು ಶಿಕ್ಷಣ ಸಾಲ ಕಂಪನಿ ಎಚ್‌ಡಿಎಫ್‌ಸಿ ಕ್ರೆಡಿಲಾದ ಸಹ - ಸಂಸ್ಥಾಪಕ ಅಜಯ್ ಬೊಹೊರಾ ಹೇಳಿದ್ದಾರೆ.



ಇದರರ್ಥ ದೀರ್ಘ ಮರುಪಾವತಿ ಅವಧಿ ಅಥವಾ ಅವರ ಶಿಕ್ಷಣ ಸಾಲಗಳ ಮೇಲಿನ ಹೆಚ್ಚಿನ ಇಎಂಐಗಳು ಹೆಚ್ಚಿದೆ. ದುರ್ಬಲ ರೂಪಾಯಿಯು ಹಿಂದಿರುಗುವ ವಿದ್ಯಾರ್ಥಿಗಳಿಗೆ ವೆಚ್ಚವನ್ನು ಹೆಚ್ಚಿಸುತ್ತದೆ, ಕುಟುಂಬಗಳ ಮೇಲಿನ ಹೆಚ್ಚಿನ ಆರ್ಥಿಕ ಹೊರೆಯಿಂದಾಗಿ ವಿದ್ಯಾರ್ಥಿಗಳು ಹೆಚ್ಚು ಮಿತವ್ಯಯದಿಂದ ಇರಬೇಕಾಗುತ್ತದೆ ಎಂದಿದ್ದಾರೆ.

ಮುಂಬೈ ನಿವಾಸಿ ಸುಧಾ ಪೈ ಮಾತನಾಡಿ ಅಮೆರಿಕಾದಲ್ಲಿರುವ ನನ್ನ ಮಗಳ ಆಹಾರ ಮತ್ತು ಊಟಕ್ಕಾಗಿ ಪ್ರತಿ ತಿಂಗಳು 900 ಡಾಲರ್ ಖರ್ಚಾಗುತ್ತಿದೆ. ರೂಪಾಯಿ ಮೌಲ್ಯ ಕುಸಿದಿರುವ ಹಿನ್ನೆಲೆಯಲ್ಲಿ 900 ರ ಡಾಲರ್ ಕಳುಹಿಸಿದರೂ ಅದು 800 ಡಾಲರ್ ತಲುಪುತ್ತಿದೆ ಎಂದಿದ್ದಾರೆ. ತೆರಿಗೆ ಪಾವತಿಸುವ ಹಣದ ಮೇಲೆ, ನಾನು ಎರಡನೇ ಬಾರಿಗೆ ಟಿಸಿಎಸ್ ಮೂಲಕ ತೆರಿಗೆ ಪಾವತಿಸುತ್ತಿದ್ದೇನೆ. ಮರುಪಾವತಿಯನ್ನು ಪಡೆಯಬಹುದಾದರೂ, ಅದು ನನ್ನ ತೆರಿಗೆ ಪಾವತಿಸುವ ಹಣವನ್ನು ಒಂದು ವರ್ಷಕ್ಕೆ ನಿರ್ಬಂಧಿಸಿದೆ ಎಂದು ಹೇಳಿದ್ದಾರೆ.




> **ಪೋಷಕರು ಸಾಲವನ್ನು ಮೊದಲೇ ಮಂಜೂರು ಮಾಡುವ ಮೂಲಕ ಮತ್ತು ಸವಕಳಿಯಿಂದ ರಕ್ಷಣೆ ಪಡೆಯಲು ವಿಶ್ವವಿದ್ಯಾಲಯದ ಖಾತೆಗೆ ಹಣವನ್ನು ವರ್ಗಾಯಿಸುವ ಮೂಲಕ ವಿದೇಶಿ ವಿನಿಮಯ ದರಗಳನ್ನು 'ಲಾಕ್ ಇನ್' ಮಾಡಬಹುದಾಗಿದೆ**
> **- ಕರಣ್ ಗುಪ್ತಾ, ವೃತ್ತಿ ಸಲಹೆಗಾರ**

ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಫಾರಿನ್ ಸ್ಟಡೀಸ್‌ನ ಶಿಕ್ಷಣ ಸಲಹೆಗಾರ, ಸಂಸ್ಥಾಪಕ ಕೆ.ಪಿ. ಸಿಂಗ್ ಮಾತನಾಡಿ ಏರಿಳಿತಗಳು ಸಾಮಾನ್ಯ ವಿದ್ಯಮಾನವಾಗಿದ್ದರೂ, ವರ್ಷ ಡಾಲರ್‌ನಲ್ಲಿ ಭಾರಿ ಏರಿಕೆ ಕಂಡುಬಂದಿದೆ. ಚುನಾವಣೆಗಳ ನಂತ ರದ ರಾಜಕೀಯ ಸನ್ನಿ ವೇಶದಿಂದ ಉಂಟಾದ ಅನಿಶ್ಚಿತತೆಯೊಂದಿಗೆ, ವಿದೇಶಿ ಶಿಕ್ಷಣದ ಮೇಲೆ ಪರಿಣಾಮವು ಅಗಾಧವಾಗಿದೆ ಎಂದು ತಿಳಿಸಿದ್ದಾರೆ.

## ಭಾರತದ ಅಭಿವೃದ್ಧಿ ಅನುಭವ ಇತರ ರಾಷ್ಟ್ರಗಳಿಗೆ ಮಾದರಿ

**ಜೋಹಾನ್ಸ್:** ಭಾರತದ ಅಭಿವೃದ್ಧಿಯ ಅನುಭವಗಳು ಇತರ ದೇಶಗಳಿಗೆ ಮಾದರಿಯಾಗಬಹುದು ಎಂದು ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ.ಅನಂತ ನಾಗೇಶ್ವರನ್ ಅವರು ದಕ್ಷಿಣ ಆಫ್ರಿಕಾ, ಭಾರತೀಯ ವಲಸಿಗ ಉದ್ಯಮಿಗಳ ವಿಚಾರ ಸಂಕಿರಣದಲ್ಲಿ ಹೇಳಿದರು. ಭಾರ ತೀಯ ಹೈಕಮಿಷನ್ ಜೋಹಾನ್ಸ್‌ಬರ್ಗ್ ಕಾನ್ಸುಲೇಟ್ ಜನರಲ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಹೂಡಿಕೆ ಮಾಡಿದ 150 ಕ್ಕೂ ಹೆಚ್ಚು ಭಾರತೀಯ ಕಂಪನಿಗಳನ್ನು ಪ್ರತಿನಿಧಿಸುವ ಸಿಐಐ ಇಂಡಿಯಾ ಬಿಸಿನೆಸ್ ಫೋರಂ ಜಂಟಿಯಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ನಾಗೇಶ್ವರನ್ ಮುಖ್ಯ ಭಾಷಣಕಾರರಾಗಿದ್ದರು. ಭಾರತವು ಅತಿದೊಡ್ಡ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದ್ದು, ಪ್ರಜಾಪ್ರಭುತ್ವದ ರಾಜಕೀಯದ ಸಂದರ್ಭದಲ್ಲಿ ಮತ್ತು ಫೆಡರಲ್ ಆಡಳಿತ ರಚನೆಯ ಸಂದರ್ಭದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ರೂಪಾಂತರಗೊಳ್ಳಲು ಪ್ರಯತ್ನಿಸುತ್ತಿದೆ. ಆದ್ದರಿಂದ, ಭಾರತದ ಅನುಭವಗಳು ಸೇರಿದಂತೆ ಅನೇಕ ದೇಶಗಳಿಗೆ ಬಹಳ ಉಪಯುಕ್ತ ವಿಷಯವಾಗಿದೆ ಎಂದು ನಾಗೇಶ್ವರನ್ ಹೇಳಿದರು.



## ಜಾಗತಿಕ ವ್ಯಾಪಾರದ ಅಡೆತಡೆಯಿಂದ ಭಾರತಕ್ಕೆ ಅವಕಾಶ

**ಅಲಾ:** ಜಾಗತಿಕ ಅಡೆತಡೆಗಳ ನಡುವೆಯೂ ಕ್ಲೀನ್ ಟೆಕ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಈ ಅವಕಾಶವನ್ನು ದೇಶವು ಬಳಸಿಕೊಳ್ಳಬೇಕು ಎಂದು ಭಾರತದ ಜಿ 20 ಷರ್ಪಾ ಮತ್ತು ನೀತಿ ಆಯೋಗದ ಮಾಜಿ ಸಿಇಒ ಅಮಿತಾಭ್ ಕಾಂತ್ ಹೇಳಿದ್ದಾರೆ. ರಾಜಸ್ಥಾನದಲ್ಲಿ ನಡೆದ ವಿಜ್ಞಾನ ಮತ್ತು ಪರಿಸರ ಕೇಂದ್ರದ ವಾರ್ಷಿಕ ಅನಿಲ್ ಅಗರ್‌ವಾಲ್ ಸಂವಾದದ ಹೊರತಾಗಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ, ಹವಾಮಾನ ಬದಲಾವಣೆಗೆ ಐತಿಹಾಸಿಕವಾಗಿ ಕಾರಣವಾದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಹಣಕಾಸಿನ ಬೆಂಬಲದ ಕೊರತೆಯು ಅಭಿವೃದ್ಧಿಶೀಲ ರಾಷ್ಟ್ರಗಳ ಹೊಸ ಹವಾಮಾನ ಗುರಿಗಳ ಮೇಲೆ ಪರಿಣಾಮ ಬೀರಬಹುದು ಎಂದು ಕಾಂತ್ ಒಪ್ಪಿಕೊಂಡಿದ್ದಾರೆ. ಜಾಗತಿಕ ವ್ಯಾಪಾರದಲ್ಲಿನ ಅಡೆತಡೆಗಳು ಭಾರತಕ್ಕೆ ಮಹತ್ವದ ಅವಕಾಶವನ್ನು ಸೃಷ್ಟಿಸಿವೆ ಎಂದು ಕಾಂತ್ ಹೇಳಿದರು. ಈ ಅವಕಾಶವನ್ನು ಭಾರತ ಸದುಪಯೋಗಪಡಿಸಿಕೊಳ್ಳಬೇಕು ಹಾಗೆ ಮಾಡುವುದರಿಂದ, ನಾವು ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸಬಹುದು ಎಂದು ಅವರು ಹೇಳಿದರು. ಯುಪಿಐ ಅನ್ನು ಉದಾಹರಣೆಯಾಗಿ ಉಲ್ಲೇಖಿಸಿದ ಅವರು, ಫಿನ್‌ಟೆಕ್ ನಂತಹ ಕ್ಷೇತ್ರಗಳಲ್ಲಿ ಭಾರತವು ಗಮನಾರ್ಹ ತಾಂತ್ರಿಕ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಿದರು. ಸೌರಶಕ್ತಿ, ಹಸಿರು ಹೈಡ್ರೋಜನ್, ಬ್ಯಾಟರಿಗಳು ಮತ್ತು ಎಲೆಕ್ಟ್ರಿಕ್ ವಾಹನಗಳು ಸೇರಿದಂತೆ ಕ್ಲೀನ್‌ಟೆಕ್ ಉತ್ಪಾದನೆಯಲ್ಲಿ ನಾವು ಈ ಯಶಸ್ಸನ್ನು ಪುನರಾವರ್ತಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.




## ಭೂಕಂಪ: ಯಾವುದೇ ಹಾನಿ ಇಲ್ಲ

**ಗುವಾಹಟಿ:** ಅಸ್ಸಾಂನ ಮಧ್ಯ ಭಾಗದಲ್ಲಿ ಗುರುವಾರ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ತೀವ್ರತೆ ಪ್ರಮಾಣ 5 ರಷ್ಟು ದಾಖಲಾಗಿದೆ. ಆದರೆ, ಇದುವರೆಗೂ ಗಾಯಗೊಂಡ, ಅಸ್ತಿಪಾಸ್ತಿ ಹಾನಿಯಾದ ಕುರಿತು ಯಾವುದೇ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಭೂಕಂಪ ಅಧ್ಯಯನ ಕೇಂದ್ರದ ವರದಿ ಪ್ರಕಾರ, ಮೋರಿಗಾಂವ್ ಜಿಲ್ಲೆಯ ಬ್ರಹ್ಮಪುತ್ರ ನದಿಯ ದಕ್ಷಿಣ ಭಾಗದ 16 ಕಿ.ಮೀ ತಳಭಾಗದಲ್ಲಿ ಬೆಳಿಗ್ಗೆ 2.25ರ ವೇಳೆಗೆ ಭೂಕಂಪ ಸಂಭವಿಸಿದೆ.

ಗುವಾಹಟಿಯಿಂದ ಪೂರ್ವಭಾಗದಲ್ಲಿರುವ 52 ಕಿ.ಮೀ ದೂರದಲ್ಲಿ ಕಂಪನದ ಕೇಂದ್ರ ಬಿಂದು ಪತ್ತೆಯಾಗಿದೆ' ಎಂದು ತಿಳಿಸಿದೆ. ರಾಜ್ಯದ ಕಾಮರೂಪ್, ನಾಗಾಂವ್, ಪೂರ್ವ, ಪಶ್ಚಿಮ ಕರ್ಬಿ, ಗೋಲಾಘಾಟ್, ಜೋರ್ಹಾಟ್, ಶಿವಸಾಗರ್, ಕಛಾರ್, ಕರೀಂಗಂಜ್, ಧುಬ್ರಿ, ದಕ್ಷಿಣ ಸಲ್ಮಾರಾ- ಮಂಕಾಚಾರ್, ಗೋಲಾಪಾರ ಜಿಲ್ಲೆಗಳಲ್ಲಿ ಕಂಪನದ ಅನುಭವ ಉಂಟಾಗಿದೆ. ಇದಲ್ಲದೇ, ಅರುಣಾಚಲಪ್ರದೇಶ ದಕ್ಷಿಣ- ಪಶ್ಚಿಮ ಭಾಗ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ತ್ರಿಪುರಾ, ಪಶ್ಚಿಮ ಬಂಗಾಳದ ವಿವಿಧೆಡೆಗಳಲ್ಲಿ ಕಂಪನದ ಅನುಭವ ಉಂಟಾಗಿದೆ.

## ಕೆನಡಾ ಪೌರತ್ವ ಹಿಂಪಡೆಯಲು 3 ಲಕ್ಷ ನಾಗರಿಕರಿಂದ ಸಹಿ ಸಂಗ್ರಹಣೆ

### ಕೆನಡಾ ವಿರುದ್ಧ ಟ್ರಂಪ್ ದ್ವೇಷಕಾರುತ್ತಿರುವ ಹಿನ್ನೆಲೆಯಲ್ಲಿ ಮಸ್ಕ್ ವಿರುದ್ಧ ಮುಗಿಬಿದ್ದಿರುವ ಕೆನಡಿಯನ್ನರು

**ವ್ಯಾಂಕೋವರ್:** ಅಮೆರಿಕದ ಅಧ್ಯಕ್ಷರಾಗಿ ಟ್ರಂಪ್ ಅಧಿಕಾರ ಸ್ವೀಕರಿಸುತ್ತಿದ್ದಂತೆ, ಇತ್ತ ಕೆನಡಾ- ಅಮೆರಿಕಾ ನಡುವಿನ ಬಿರುಕು ಮತ್ತಷ್ಟು ದೊಡ್ಡದಾಗುತ್ತಿದೆ. ಇದರ ಬೆನ್ನಲ್ಲೇ, ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಅವರು ಹೊಂದಿರುವ ಕೆನಡಾ ಪೌರತ್ವವನ್ನು ಕೆನಡಾ ಸರ್ಕಾರ ರದ್ದುಗೊಳಿಸಬೇಕೆಂದು ಆಗ್ರಹ ಕೇಳಿಬಂದಿದೆ. ಈ ಕುರಿತಂತೆ ಸಿದ್ಧಪಡಿಸಲಾಗಿರುವ ಮನವಿ ಪತ್ರಕ್ಕೆ ಕೆನಡಾದ ಸುಮಾರು 3 ಲಕ್ಷಕ್ಕೂ ಹೆಚ್ಚು ನಾಗರಿಕರು ಸಹಿ ಮಾಡಿದ್ದಾರೆ.

**ಯಾರು ಈ ಮನವಿ ಸಿದ್ಧಪಡಿಸಿದ್ದು?:** ಈ ಮನವಿಯನ್ನು ಕೆನಡಾದ ಬ್ರಿಟಿಷ್ ಕೊಲಂಬಿಯಾ ಮೂಲದ ಹಿರಿಯ ಲೇಖಕರಾದ ಕ್ವಲಿಯಾ ರೀಡ್ ಅವರು ಸರ್ಕಾರದ ಮುಂದಿಟ್ಟಿದ್ದರು. ಅವರನ್ನು ಕೆನಡಾದ ಸಂಸದ ಚಾರ್ಲಿ ಆ್ಯಂಗುಸ್ ಅವರು ಬೆಂಬಲಿಸಿದ್ದರು. ಈ ಇಬ್ಬರೂ ಸೇರಿ ಈ ವಿಜ್ಞಾಪನಾ ಪತ್ರವನ್ನು ಸಿದ್ಧ ಪಡಿಸಿದ್ದಾರೆ. ಅದಕ್ಕೆ ಸಾರ್ವಜನಿಕರ ಬೆಂಬಲ ಕೋರಿ ಸಾಮಾಜಿಕ ಜಾಲತಾಣಗಳಲ್ಲಿ ವಿಜ್ಞಾಪನಾ ಪತ್ರಕ್ಕೆ ಸಹಿ ಹಾಕುವಂತೆ ಕರೆ ನೀಡಿದ್ದಾರೆ. ಆ ಮನವಿಗೆ ಓಗೊಟ್ಟಿರುವ ಸುಮಾರು 3,15,000 ಮಂದಿ ಈ ಪತ್ರಕ್ಕೆ ಸಹಿ ಹಾಕಿದ್ದಾರೆ. ಹಾಗಾಗಿ, ಈ ಮನವಿ ದಿನೇದಿನೇ ಸಾರ್ವಜನಿಕರ ವಲಯದಲ್ಲಿ ಹೆಚ್ಚೆಚ್ಚು ಚರ್ಚೆಗೆ ಗ್ರಾಸವಾಗುತ್ತಿದೆ.

- ಕೆನಡಾದಲ್ಲಿ ಪೌರತ್ವ ಹೊಂದಿರುವ ಎಲಾನ್ ಮಸ್ಕ್.
- ಇತ್ತೀಚೆಗೆ ಟ್ರಂಪ್ ಸರ್ಕಾರದಲ್ಲಿ ಪ್ರಮುಖ ಹುದ್ದೆಯಲ್ಲಿರುವ ಮಸ್ಕ್.
- ಮಸ್ಕ್ ಹೊಂದಿರುವ ಕೆನಡಾ ಪೌರತ್ವವನ್ನು ಹಿಂಪಡೆಯುವಂತೆ ಕೆನಡಾ ಸರ್ಕಾರವನ್ನು ಆಗ್ರಹಿಸುತ್ತಿರುವ ಜನ.
- ಈ ಕುರಿತಂತೆ ಸಿದ್ಧಪಡಿಸಲಾಗಿರುವ ವಿಜ್ಞಾಪನಾ ಪತ್ರಕ್ಕೆ ಸುಮಾರು 3 ಲಕ್ಷ ಕೆನಡಿಯನ್ನರಿಂದ ಸಹಿ.

ಜೊತೆಗೆ, ಪತ್ರಕ್ಕೆ ಸಹಿ ಹಾಕುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.



**ಮಸ್ಕ್ ವಿರುದ್ಧ ಏಕೆ ಈ ಅಭಿಯಾನ?:** ಎಲ್ಲಾರಿಗೂ ಗೊತ್ತಿರುವಂತೆ ಈಗ ಎಲಾನ್ ಮಸ್ಕ್ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರ್ಕಾರದಲ್ಲಿ ಪ್ರಧಾನ ಹುದ್ದೆಯಲ್ಲಿದ್ದಾರೆ. ಅಧ್ಯಕ್ಷ ಟ್ರಂಪ್ ಅವರಿಗೆ ಸಲಹೆಗಾರರಾಗಿರುವ ಅವರು, ಅಮೆರಿಕ ಸರ್ಕಾರದ ಆಡಳಿತ ಸುಧಾರಣಾ ಇಲಾಖೆಯ ಮೇಲುಸ್ತುವಾರಿಯಾಗಿಯೂ ನೇಮಕವಾಗಿದ್ದಾರೆ. ಟ್ರಂಪ್ ಸರ್ಕಾರ, ಕೆನಡಾ ದೇಶವನ್ನು ಅಮೆರಿಕ ಸಂಸ್ಥಾನದೊಳಗೆ ಸೇರಿಸಿಕೊಳ್ಳಲು ಹಾತೊರೆಯುತ್ತಿದೆ. ಇದಕ್ಕೆ ಕೆನಡಾ ಪ್ರತಿರೋಧವೂ ಇದೆ. ಇದು ಟ್ರಂಪ್ ಸರ್ಕಾರ, ಕೆನಡಾ ಸರ್ಕಾರದ ನಡುವೆ ತಿಕ್ಕಾಟಕ್ಕೆ ನಾಂದಿ ಯಾಗಿದೆ. ಇತ್ತೀಚೆಗೆ, ಟ್ರಂಪ್ ಅವರು, ಕೆನಡಾದಿಂದ ಅಮೆರಿಕಕ್ಕೆ ಹೋಗುವ ಸರಕುಗಳ ಮೇಲೆ ಶೇ. 25 ಸುಂಕ ಹೇರಿದ್ದಾರೆ. ಅದಕ್ಕೆ ಪ್ರತಿಯಾಗಿ ಅಮೆರಿಕದ ಉತ್ಪನ್ನಗಳ ಮೇಲೂ ಕೆನಡಾ ಸರ್ಕಾರ ಶೇ. 25ರಷ್ಟು ಸುಂಕ ಹೇರಿದೆ. ಇದು, ಅಮೆರಿಕ ಉಪಖಂಡದಲ್ಲಿ ಈ ಎರಡೂ ದೇಶಗಳ ನಡುವಿನ ಶೀತಲ ಸಮರ ಹೊಸ ತಿರುವು ಪಡೆದುಕೊಂಡಂತಾಗಿದೆ. ಈ ಹಿನ್ನೆಲೆಯಲ್ಲಿ, ಕೆನಾಡದಲ್ಲಿ ಟ್ರಂಪ್ ಸರ್ಕಾರ, ಅದರಲ್ಲಿ ಭಾಗಿಯಾಗಿರುವ ಕೆನಡಾ ಮೂಲದ ಎಲಾನ್ ಮಸ್ಕ್ ಮೇಲೆ ಕಿಡಿಕಾರಲು ಕಾರಣವಾಗಿದೆ.

**ವಿಜ್ಞಾಪನಾ ಪತ್ರ ಸಿದ್ಧ**

**ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಅವರು ದ್ವಿಪೌರತ್ವ ಹೊಂದಿದ್ದಾರೆ. ಅಂದರೆ, ಅವರು ಅಮೆರಿಕದಲ್ಲಿ ಹಾಗೂ ಕೆನಡಾದಲ್ಲಿ ಪೌರತ್ವ ಹೊಂದಿದ್ದಾರೆ. ಕೆನಡಾದ ರೆಜಿನಾದಲ್ಲಿ ಮಸ್ಕ್ ಅವರ ತಾಯಿ ಮಯಿ ಮಸ್ಕ್ ಅವರು ಹುಟ್ಟಿದ್ದರು. ಎಲಾನ್ ಮಸ್ಕ್ ಕೂಡ ಅಲ್ಲೇ ಜನಿಸಿದ್ದರಿಂದ ಅವರಿಗೆ ಅಲ್ಲಿ ಪೌರತ್ವ ಸಿಕ್ಕಿದೆ. ಇತ್ತೀಚೆಗೆ ಮಸ್ಕ್ ಅವರು ಟ್ರಂಪ್ ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿರುವುದರಿಂದ, ಕೆನಡಿಯನ್ನರು ಮಸ್ಕ್ ಅವರ ಪೌರತ್ವವನ್ನು ಹಿಂಪಡೆಯಬೇಕೆಂದು ಆಗ್ರಹಿಸಿದ್ದಾರೆ. ಈ ಪೌರತ್ವ ಅಭಿಯಾನದಡಿ ಒಂದು ವಿಜ್ಞಾಪನಾ ಪತ್ರವನ್ನು ಸಿದ್ಧಪಡಿಸಲಾಗಿದ್ದು ಅದಕ್ಕೆ ಸುಮಾರು 3 ಲಕ್ಷಕ್ಕೂ ಹೆಚ್ಚು ಮಂದಿ ಸಹಿ ಹಾಕಿದ್ದಾರೆ.**

**ಮಸ್ಕ್ ಅವರಿಗೆ ಕೆನಡಾ ಪೌರತ್ವ ಸಿಕ್ಕಿದ್ದು ಹೇಗೆ?**

ಎಲಾನ್ ಮಸ್ಕ್ ಅವರ ತಾಯಿ, ಮಯಿ ಮಸ್ಕ್ ಅವರು ಕೆನಡಾದವರು. ಅವರು ಕೆನಡಾ ಸ್ಯಾಸ್ಕಾಚೆವನ್ ಪ್ರಾಂತ್ಯದಲ್ಲಿರುವ ರೆಜಿನಾ ಎಂಬ ಊರಿನವರು. ಹುಟ್ಟಿದ್ದು ಬೆಳೆದಿದ್ದು ಶಾಲಾ ಶಿಕ್ಷಣ ಪಡೆದದ್ದು ಅದೇ ಊರಿನಲ್ಲಿ. ಹಾಗಾಗಿ, ಎಲಾನ್ ಮಸ್ಕ್ ಅವರಿಗೆ ಕೆನಡಾ ಹಾಗೂ ಅಮೆರಿಕ - ಈ ಎರಡೂ ದೇಶಗಳಲ್ಲಿ ಪೌರತ್ವ ಸಿಕ್ಕಿದೆ.

## ಮಿನಿ ನ್ಯೂಸ್

### ವಸತಿ ಕಟ್ಟಡಕ್ಕೆ ಬೆಂಕಿ ಬಿದ್ದು ಎಂಟು ಮಂದಿ ಸಾವು

**ಮನಿಲಾ:** (ಎಪಿ) ಫಿಲಿಪೈನ್ಸ್ ರಾಜಧಾನಿ ಮನಿಲಾದಲ್ಲಿ ಕಳೆದ ರಾತ್ರಿ ಮೂರು ಅಂತಸ್ತಿನ ವಸತಿ ಕಟ್ಟಡ ಬೆಂಕಿಗೆ ಆಹುತಿಯಾಗಿ ಎಂಟುಜನರು ಸಾವನ್ನಪ್ಪಿದ್ದಾರೆ. ಗುರುವಾರ ಮುಂಜಾನೆ ಒಂದು ಗಂಟೆ ಸಮಯದಲ್ಲಿ ಕ್ವಿಜಾನ್ ಉಪನಗರದಲ್ಲಿರುವ ಸ್ಯಾನ್ ಇಸಿಸ್ರೊ ಗಲಾಸ್ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಹೆಚ್ಚಾಗಿ ಮರದಿಂದ ಮಾಡಲ್ಪಟ್ಟ ಕಟ್ಟಡದಲ್ಲಿ ಮಧ್ಯರಾತ್ರಿಯ ನಂತರ ಬೆಂಕಿ ಕಾಣಿಸಿಕೊಂಡಿತು ಕೆಲವರು ಆತಂಕದಿಂದ ಹೊರಗೆ ಓಡಿಬಂದರೆ 9 ಮಂದಿ ಬೆಂಕಿಯ ಕೆನ್ನಾಲಿಗಗೆ ಸಿಕ್ಕಿಹಾಕಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸತ್ತವರಲ್ಲಿ ಇಬ್ಬರು ನೆಲ ಮಹಡಿಯಲ್ಲಿ ಪತ್ತೆಯಾಗಿದ್ದಾರೆ ಮತ್ತು ಆರು ಮಂದಿ ಎರಡನೇ ಮಹಡಿಯಲ್ಲಿ ಪತ್ತೆಯಾಗಿದ್ದಾರೆ ಎಂದು ಹಿರಿಯ ಅಗ್ನಿಶಾಮಕ ಅಧಿಕಾರಿ ರೊಲಾಂಡೊ ವಲೆನಾ ಪ್ರೆಸ್‌ಗೆ ತಿಳಿಸಿದರು. ಸುಡುವ ಬೇಸಿಗೆಯ ಆರಂಭದ ಮೊದಲು ಬೆಂಕಿಯ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರವು ವಾರ್ಷಿಕ ಅಭಿಯಾನವನ್ನು ಪ್ರಾರಂಭಿಸುತ್ತದೆ., ಜನದಟ್ಟಣೆ ಮತ್ತು ದೋಷಯುಕ್ತ ಕಟ್ಟಡ ವಿನ್ಯಾಸಗಳು ಅಪಾಯಕಾರಿ ಎಂದು ಆರೋಪಿಸಲಾಗಿದೆ. ಕಟ್ಟಡ ಬಹುತೇಕ ಬೆಂಕಿಯಿಂದ ಸುಟ್ಟುಹೋಗಿದ್ದು ಮನೆಯಲ್ಲಿದ್ದ ವಸ್ತುಗಳು ನಾಶವಾಗಿದ್ದ ಇಲ್ಲಿದ್ದ ಜನರು ಬೀದಿಗೆ ಬಿದ್ದಿದ್ದಾರೆ.

### ವಿಜಯ್ ತಮಿಳುನಾಡು ರಾಜಕಾರಣದ ಹೊಸ ಭರವಸೆ ; ಪ್ರಶಾಂತ್ ಕಿಶೋರ್

**ಚೆನ್ನೈ:** ತಮಿಳುನಾಡು ರಾಜಕೀಯದಲ್ಲಿ ಖ್ಯಾತ ಚಿತ್ರನಟ ವಿಜಯ್ ಅವರು ಹೊಸ ಭರವಸೆ ಮೂಡಿಸಿದ್ದಾರೆ ಎಂದು ರಾಜಕೀಯ ಚತುರ ಪ್ರಶಾಂತ್ ಕಿಶೋರ್ ಅಭಿಪ್ರಾಯಪಟ್ಟಿದ್ದಾರೆ. 2026ರ ತಮಿಳುನಾಡು ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಜನ ಸುರಾಜ್ ಪಕ್ಷದ ಮುಖ್ಯಸ್ಥ ಪ್ರಶಾಂತ್ ಕಿಶೋರ್ ಅವರು ವಿಜಯ್ ಸ್ಥಾಪನೆ ಮಾಡಿರುವ ತಮಿಳಗ ವೆಟ್ರಿ ಕಳಗಂ ಪಕ್ಷಕ್ಕೆ ತಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ವಿಜಯ್ ಅವರು, ರಾಜ್ಯ ರಾಜಕೀಯದಲ್ಲಿ ಬದಲಾವಣೆಯನ್ನು ನೋಡಲು ಬಯಸುವ ಲಕ್ಷಾಂತರ ಜನರಿಗೆ ಹೊಸ ಭರವಸೆಯಾಗಿದ್ದಾರೆ ಎಂದು ಹೇಳಿದರು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಎರಡು ದ್ರಾವಿಡ ಪಕ್ಷಗಳನ್ನು ಸ್ಥಳಾಂತರಿಸುವ ಗುರಿಯನ್ನು ಹೊಂದಿರುವ ವಿಜಯ್ ಅವರಿಗೆ ಕಾರ್ಯತಂತ್ರದ ಸಹಾಯದ ಅಗತ್ಯವಿಲ್ಲ. ನಾನು ಯಾವುದೇ ಪಕ್ಷ ಅಥವಾ ನಾಯಕರೊಂದಿಗೆ ಕೆಲಸ ಮಾಡುವುದಿಲ್ಲ ಎಂದು ನಾಲ್ಕು ವರ್ಷಗಳ ಹಿಂದೆಯೇ ಘೋಷಿಸಿದ್ದೆ, ಆದರೆ ವಿಜಯ್ ನನಗೆ ರಾಜಕೀಯ ನಾಯಕನಲ್ಲ. ಅವರು ತಮಿಳುನಾಡಿಗೆ ಹೊಸ ಭರವಸೆಯಾಗಿದ್ದಾರೆ. ಟಿವಿಕೆ ತಮಿಳುನಾಡಿನಲ್ಲಿ ಹೊಸ ರಾಜಕೀಯ ವ್ಯವಸ್ಥೆಯನ್ನು ನೋಡಲು ಬಯಸುವ ಲಕ್ಷಾಂತರ ಜನರ ಆಂದೋಲನವಾಗಿದೆ, ಟಿವಿಕೆ, ವಿಜಯ್ ಬದಲಾ ವಣೆಯನ್ನು ಪ್ರತಿ ಬಿಂಬಿಸುತ್ತವೆ ಎಂದಿದ್ದಾರೆ.ಆಡಳಿತಾರೂಢ ಡಿಎಂಕೆ ಆಡಳಿತವನ್ನು ಟೀಕಿಸಿದ ಪ್ರಶಾಂತ್ ಕಿಶೋರ್, ಸರ್ಕಾರದ ಅಭಿವೃದ್ಧಿಯ ಮಾದರಿ ಭ್ರಷ್ಟಾಚಾರ, ವಂಶ ಪಾರಂಪರ್ಯ, ಕೋಮುವಾದ ಎಂದು ಜರಿದಿದ್ದಾರೆ.

### ಗಂಗೆಯ ಪಾಲಾದ ಐವರು

**ಪಾಟ್ನಾ:** ಮಹಾ ಶಿವರಾತ್ರಿ ಹಬ್ಬದ ದಿನವೇ ಐದು ಮಂದಿ ಯುವಕರು ಗಂಗೆ ಪಾಲಾಗಿದ್ದಾರೆ. ಮಹಾ ಶಿವರಾತ್ರಿಯ ಸಂದರ್ಭದಲ್ಲಿ ಇಲ್ಲಿನ ಗಾಂಧಿ ಮೈದಾನ್ ಪೊಲೀಸ್ ಠಾಣೆ ವ್ಯಾಪ್ತಿಯ ಕಲೆಕ್ಟರೇಟ್ ಘಾಟ್‌ನಲ್ಲಿ ನಿನ್ನೆ ಸಂಜೆ ಗಂಗಾ ನದಿಯಲ್ಲಿ ಐವರು ಯುವಕರು ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ ಈವರೆಗೆ ಮೂರು ಶವಗಳನ್ನು ವಶಪಡಿಸಿಕೊಂಡಿದ್ದು, ಉಳಿದ ಇಬ್ಬರಿಗಾಗಿ ಶೋಧ ನಡೆಸಲಾಗುತ್ತಿದೆ.ಕೃಷ್ಣ ನಿವಾಸ್ ಲಾಡ್?ಜನ ವಿಶಾಲ್ ಕುಮಾರ್, ಸಚಿನ್ ಕುಮಾರ್, ಅಭಿಷೇಕ್ ಕುಮಾರ್, ರಾಜೀವ್ ಕುಮಾರ್, ಗೋಲು ಕುಮಾರ್, ಆಶಿಶ್ ಕುಮಾರ್ ಎಂಬ ಆರು ಯುವಕರು ನದಿಯ ದಡದಲ್ಲಿ ವಾಲಿಬಾಲ್ ಆಡುತ್ತಿದ್ದರು.

ಹತ್ತಿರದಲ್ಲೇ ಸ್ನಾನ ಮಾಡುತ್ತಿದ್ದ ರೆಹಾನ್ ಮತ್ತು ಗೋವಿಂದ ಸೇರಿದಂತೆ ಇತರ ಮೂವರು ಅವರ ಆಟಕ್ಕೆ ಸೇರಿಕೊಂಡರು. ಆಟದ ಸಮಯದಲ್ಲಿ, ವಿಶಾಲ್ ಗಂಗಾ ನದಿಯಲ್ಲಿ ಸ್ನಾನ ಮಾಡಲು ಹೋಗಿ ಮುಳುಗಲು ಪ್ರಾರಂಭಿಸಿದನು. ಇತರ ಆರು ಜನರು ಅವನನ್ನು ಉಳಿಸಲು ಧಾವಿಸಿದರು, ಆದರೆ ಎಲ್ಲರೂ ಪ್ರವಾಹದಿಂದ ಕೊಚ್ಚಿ ಹೋದರು. ಘಟನೆಗೆ ಸಾಕ್ಷಿಯಾದ ದೋಣಿಯವರೊಬ್ಬರು ಬಿದಿರಿನ ಕಂಬವನ್ನು ಎಸೆದು ಆಶಿಶ್ ಮತ್ತು ಸಚಿನ್ ಅವರನ್ನು ರಕ್ಷಿಸುವಲ್ಲಿ ಯಶಸ್ವಿಯಾದರು.


### ಕುಸ್ತಿಪಟುಗೆ ಗುಂಡಿಟ್ಟು ಹತ್ಯೆ

**ಚಂಡೀಗಢ:** ಹರಿಯಾಣದ ಸೋನಿಪತ್ ಜಿಲ್ಲೆಯ ಗ್ರಾಮವೊಂದರಲ್ಲಿ ಕುಸ್ತಿಪಟುವನ್ನು ಅಪರಿಚಿತ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ. ರಾಕೇಶ್ (40) ಕೊಲೆಯಾದ ಕುಸ್ತಿಪಟು. ಕುಂದಲ್ ಗ್ರಾಮದಲ್ಲಿ ಕುಸ್ತಿ ಸ್ಪರ್ಧೆಯನ್ನು ವೀಕ್ಷಿಸಲು ಬಂದಿದ್ದಾಗ ಈ ಘಟನೆ ನಡೆದಿದೆ ಎಂದು ಖಾರ್ಖೋಡ ಪೊಲೀಸ್ ಠಾಣೆಯ ಅಧಿಕಾರಿ ಬೀರ್ ಸಿಂಗ್ ತಿಳಿಸಿದ್ದಾರೆ. ಗುಂಡೇಟಿನಿಂದ ತೀವ್ರ ಗಾಯಗೊಂಡಿದ್ದ ರಾಕೇಶ್ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು ಆದರೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಕಳೆದ ಹಲವು ವರ್ಷಗಳಿಂದ ಸೊಹಾಟಿ ಗ್ರಾಮದಲ್ಲಿ ರಾಕೇಶ್ ಅಖಾರ ನಡೆಸುತ್ತಿದ್ದರು,ಇದರ ವೈಷಮ್ಯದಿಂದ ಈ ಕೊಲೆ ನಡೆದಿರಬಹುದು ಎಂದು ಶಂಕಿಸಲಾಗಿದೆ.ಘಟನೆ ಕುತಂತೆ ಪ್ರಕರಣ ದಾಖಲಾಗಿದ್ದು ಮುಂದಿನ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಪೊಲೀಸ್ ಪೇದೆ ಚರಂಡಿಯಲ್ಲಿ ಶವವಾಗಿ ಪತ್ತೆ: ಇಬ್ಬರು ಹಂತಕರ ಬಂಧನ

**ಅಲಿಘರ್:** ನಿಗೂಢವಾಗಿ ನಾಪತ್ತೆಯಾಗಿದ್ದ ಪೊಲೀಸ್ ಪೇದೆಯೊಬ್ಬರನ್ನು ಕೊಂದ ಇಬ್ಬರು ಹಂತಕರನ್ನು ಪೊಲೀಸರು ಬಂಧಿಸಿದ್ದಾರೆ. ನಗರದ ಹೊರವಲಯದಲ್ಲಿರುವ ಚರಂಡಿಯಿಂದ ತಡರಾತ್ರಿ ಕಾನ್ಸ್‌ಟೇಬಲ್ ಅಮಿತ್ ಕುಮಾರ್ ಶವವನ್ನು ಪತ್ತೆಯಾಗಿತ್ತು. ಬುಲಂದ್‌ಶರ್ಹ ಜಿಲ್ಲೆಯಲ್ಲಿ ಆತನ ಕುಟುಂಬ ಸ್ಥಳಕ್ಕೆ ಆಗಮಿಸಿ ಗುರುತಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳ ಸಹಾಯದಿಂದ ಇಬ್ಬರನ್ನು ಗುರುತಿಸಲಾಗಿದ್ದು, ಕಾನ್ಸ್‌ಟೇಬಲ್‌ನನ್ನು ಕೊಂದ ಆರೋಪದ ಮೇಲೆ ಬಂಧಿಸಲಾಗಿದೆ, ಅಮಿತ್ ಕುಮಾರ್ ಅವರನ್ನು ಅಲಿಘರ್‌ನಲ್ಲಿ ಸಶಸ್ತ್ರ ಪೊಲೀಸ್ ಪಡೆಯ 38 ನೇ ಬೆಟಾಲಿಯನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕಳೆದ ಫೆ.18 ರಂದು ತಮ್ಮ ಊರಿಗೆ ತೆರಳಿ ಕರ್ತವ್ಯಕ್ಕೆ ಹಿಂತಿರುಗುವಾಗ ಅವರು ನಾಪತ್ತೆಯಾಗಿದ್ದರು. ಸಿಸಿಟಿವಿ ದೃಶ್ಯಾವಳಿಯಲ್ಲಿ ಕುಮಾರ್ ಇಬ್ಬರು ಆರೋಪಿಗಳೊಂದಿಗೆ ಬಸ್‌ನಿಂದ ಇಳಿದು ಮದ್ಯದ ಅಂಗಡಿಗೆ ಹೋಗುವುದನ್ನು ತೋರಿಸಿದೆ, ಅಲ್ಲಿ ಮೂವರು ಮದ್ಯ ಸೇವಿಸಿದ್ದಾರೆ ಎಂದು ಅಧಿಕಾರಿ ಹೇಳಿದರು. ನಂತರ ಆರೋಪಿಯು ಕಾನ್ಸ್‌ಟೆಬಲ್‌ನನ್ನು ಸಮೀಪದ ಚರಂಡಿಗೆ ತಳ್ಳಿದ್ದು, ನಂತರ ಅವರ ವಸ್ತುಗಳನ್ನು ಕದ್ದು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

# ಮಳೆಯಿಂದ ಬಾಂಗ್ಲಾದೇಶ-ಪಾಕಿಸ್ತಾನ ಪಂದ್ಯ ರದ್ದು



ಚಾಂಪಿಯನ್ಸ್ ಟ್ರೋಫಿಯಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ನಡುವಿನ ಕೊನೆಯ ಪಂದ್ಯ ಮಳೆಯಿಂದಾಗಿ ರದ್ದಾಗಿದೆ. ರಾವಲ್ಪಿಂಡಿಯಲ್ಲಿ ನಡೆಯಬೇಕಿದ್ದ ಈ ಪಂದ್ಯ ಮಳೆಯಿಂದಾಗಿ ಟಾಸ್ ಕೂಡ ನಡೆಯದೆ ಅಂತ್ಯಗೊಂಡಿದೆ. ಇದರರ್ಥ ಪಾಕಿಸ್ತಾನ ಕ್ರಿಕೆಟ್ ತಂಡವು ಈ ಪಂದ್ಯಾವಳಿಯಲ್ಲಿ ಗೆಲ್ಲುವ ಕೊನೆಯ ಅವಕಾಶವನ್ನು ಕಳೆದುಕೊಂಡಿದ್ದು, ಯಾವುದೇ ಪಂದ್ಯವನ್ನು ಗೆಲ್ಲದೆ ಟೂರ್ನಿಯಿಂದ ಹೊರಬಿದ್ದಿದೆ. 29 ವರ್ಷಗಳ ನಂತರ, ಐಸಿಸಿ ಪಂದ್ಯಾವಳಿಯನ್ನು ಆಯೋಜಿಸುವ ಅವಕಾಶ ಪಡೆದಿದ್ದ ಪಾಕಿಸ್ತಾನ ಕೇವಲ 8 ದಿನಗಳಲ್ಲಿ ತನ್ನ ಪ್ರಯಾಣವನ್ನು ನಾಚಿಕೆಗೇಡಿನ ರೀತಿಯಲ್ಲಿ ಕೊನೆಗೊಳಿಸಿದೆ. ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ಎರಡೂ ತಂಡಗಳು ಗ್ರೂಪ್ ಎ ಯ ಭಾಗವಾಗಿದ್ದವು. ಆದರೆ ಈ ಎರಡೂ ತಂಡಗಳು ಮೊದಲೆರಡು ಪಂದ್ಯಗಳಲ್ಲಿ ಸೋತಿದ್ದರಿಂದ ಈಗಾಗಲೇ ಸೆಮಿಫೈನಲ್ ಸ್ಪರ್ಧೆಯಿಂದ ಹೊರಬಿದಿದ್ದವು. ಹೀಗಾಗಿ ಈ ಪಂದ್ಯ ನಡೆದಿದ್ದರೂ ಟೂರ್ನಿಯ ಮೇಲೆ ಯಾವುದೇ ಪರಿಣಾಮ ಬೀರುತ್ತಿರಲಿಲ್ಲ.

**ಪಂದ್ಯಕ್ಕೆ ಮಳೆ ಅಡ್ಡಿ:** ವಾಸ್ತವವಾಗಿ ಕಳೆದ ಕೆಲವು ದಿನಗಳಿಂದ ಪಾಕಿಸ್ತಾನದಲ್ಲಿ ಮಳೆ ಸುರಿಯುತ್ತಿದೆ. ಹೀಗಾಗಿ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ನಡುವಿನ ಪಂದ್ಯಕ್ಕೂ ಮುನ್ನ ನಡೆದಿದ್ದ ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾ ನಡುವಿನ ಪಂದ್ಯವನ್ನು ಮಳೆಯಿಂದ ರದ್ದುಗೊಳಿಸಲಾಗಿತ್ತು. ಆ ಪಂದ್ಯವೂ ಕೂಡ ಟಾಸ್ ಕೂಡ ನಡೆಯದೆ ರದ್ದಾಗಿತ್ತು. ಇದೀಗ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ನಡುವಿನ ಪಂದ್ಯವೂ ಮಳೆಯಿಂದಾಗಿ ಟಾಸ್ ಕೂಡ ನಡೆಯದೆ ಅಂತ್ಯಗೊಂಡಿದೆ.

**ಉಭಯ ತಂಡಗಳು:** ಪಾಕಿಸ್ತಾನ ತಂಡ: ಇಮಾಮ್-ಉಲ್-ಹಕ್, ಬಾಬರ್ ಆಝಂ, ಸೌದ್ ಶಕೀಲ್, ಮೊಹಮ್ಮದ್ ರಿಜ್ವಾನ್ (ನಾಯಕ ಮತ್ತು ವಿಕೆಟ್ ಕೀಪರ್), ಸಲ್ಮಾನ್ ಅಲಿ ಆಘಾ, ತಯ್ಯಬ್ ತಾಹಿರ್, ಖುಶ್ದಿಲ್ ಶಾ, ಶಾಹೀನ್ ಅಫ್ರಿದಿ, ನಸೀಮ್ ಶಾ, ಹ್ಯಾರಿಸ್ ರೌಫ್, ಅಬ್ರಾರ್ ಅಹ್ಮದ್.

ಬಾಂಗ್ಲಾದೇಶ ತಂಡ: ತಂಜಿದ್ ಹಸನ್, ನಜ್ಮುಲ್ ಹೊಸೈನ್ ಶಾಂಟೋ (ನಾಯಕ), ಮೆಹದಿ ಹಸನ್ ಮಿರಾಜ್, ತೌಹಿದ್ ಹೃದಯ್, ಮುಷ್ಫಿಕರ್ ರಹೀಮ್, ಮಹ್ಮದುಲ್ಲಾ, ಜಾಕಿರ್ ಅಲಿ, ರಿಷದ್ ಹೊಸೈನ್, ತಸ್ಕಿನ್ ಅಹ್ಮದ್, ಮುಸ್ತಾಫಿಜುರ್ ರೆಹಮಾನ್, ನಹಿದ್ ರಾಣಾ.

### ಪಾಕಿಸ್ತಾನಕ್ಕೆ ಕೊನೆಯ ಸ್ಥಾನ

**ಪಂದ್ಯ ರದ್ದಾದ ಕಾರಣ ಎರಡೂ ತಂಡಗಳು ತಲಾ ಒಂದು ಅಂಕ ಪಡೆದುಕೊಂಡು ಟೂರ್ನಿಗೆ ವಿದಾಯ ಹೇಳಿವೆ. ಬಾಂಗ್ಲಾದೇಶ ತಂಡ ಟೂರ್ನಿಯಲ್ಲಿ ಆಡಿದ ಮೂರು ಪಂದ್ಯಗಳಲ್ಲಿ ಎರಡು ಸೋಲು ಮತ್ತು ಒಂದು ಡ್ರಾದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದರೆ, ಇತ್ತ ಪಾಕಿಸ್ತಾನ -1.09 ನೆಟ್ ರನ್ ರೇಟ್‌ನೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡಿದೆ.**

# ಆರ್‌ಸಿಬಿಗೆ ಮಾಡು ಇಲ್ಲವೇ ಮಡಿ ಪಂದ್ಯ

ಆರ್‌ಸಿಬಿ ತವರಿನಿಂದ ಹೊರಗೆ ನಡೆದಿದ್ದ ಮೊದಲೆರಡು ಪಂದ್ಯಗಳನ್ನು ಸುಲಭವಾಗಿ ಗೆದ್ದುಕೊಂಡಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡ, ತವರಿನಲ್ಲಿ ತನ್ನ ಪ್ರಯಾಣ ಮುಂದುವರೆಸಿದ ಬಳಿಕ ಸತತ ಸೋಲುಗಳಿಂದ ಕಂಗೆಟ್ಟಿದೆ. ಬೆಂಗಳೂರಿನಲ್ಲಿ ಆಡಿದ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿ ಸೋಲಿನ ಆಘಾತ ಎದುರಿಸಿದೆ. ಈ ಎರಡು ಪಂದ್ಯಗಳ ಸೋಲಿಗೆ ಆರ್‌ಸಿಬಿ ಮಾಡಿಕೊಂಡ ಎಡವಟ್ಟುಗಳೇ ಪ್ರಮುಖ ಕಾರಣವಾಗಿದ್ದವು. ಹೀಗಾಗಿ ಕಳೆದೆರಡು ಪಂದ್ಯಗಳಲ್ಲಿ ಮಾಡಿದ ತಪ್ಪನ್ನು ಸರಿಪಡಿಸಿಕೊಂಡು ಅಖಾಡಕ್ಕಿಳಿಯಲು ಸಜ್ಜಾಗಿರುವ ಆರ್‌ಸಿಬಿಗೆ ಇಂದಿನ ಎದುರಾಳಿಯಾಗಿ ಗುಜರಾತ್ ಜೈಂಟ್ಸ್ ತಂಡ ಮುಂದೆ ನಿಂತಿದೆ. ಒಂದೆಡೆ ಆರ್‌ಸಿಬಿಗೆ ಮತ್ತೆ ಗೆಲುವಿನ ಲಯಕ್ಕೆ ಮರಳುವ ಇರಾದೆಯಿದ್ದರೆ, ಇನ್ನೊಂದೆಡೆ, ಉದ್ಘಾಟನಾ ಪಂದ್ಯದಲ್ಲಿ ಎದುರಿಸಿದ್ದ ಹೀನಾಯ ಸೋಲಿಗೆ ಸೇಡು ತೀರಿಸಿಕೊಳ್ಳುವ ಗುರಿಯೊಂದಿಗೆ ಗುಜರಾತ್ ಕಣಕ್ಕಿಳಿಯಲಿದೆ.

ಯುಪಿ ವಾರಿಯರ್ಸ್ ವಿರುದ್ಧದ ಕಳೆದ ಪಂದ್ಯದಲ್ಲಿ, ಸ್ಮೃತಿ ಮಂಧಾನ ನೇತೃತ್ವದ ತಂಡವು ಎಲಿಸ್ ಪೆರ್ರಿ ಅವರ 90 ರನ್‌ಗಳ ಭರ್ಜರಿ ಬ್ಯಾಟಿಂಗ್ ನೆರವಿನಿಂದ 181 ರನ್‌ಗಳ ಬೃಹತ್ ಗುರಿ ನೀಡಿತು. ಇತ್ತ ಯುಪಿ ವಾರಿಯರ್ಸ್ ಕೂಡ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿ ಸ್ಕೋರ್ ಅನ್ನು ಸಮಬಲಗೊಳಿಸಿತು. ಆ ಬಳಿಕ ನಡೆದ ಸೂಪರ್ ಓವರ್‌ನಲ್ಲಿ ಯುಪಿ ವಾರಿಯರ್ಸ್, ಆರ್‌ಸಿಬಿ ತಂಡವನ್ನು ಮಣಿಸಿ ರೋಚಕ ಜಯ ಸಾಧಿಸಿತು.

**ಗುಜರಾತ್‌ಗೂ ಬೇಕಿದೆ ಗೆಲುವು:** ಇತ್ತ ಆಶ್ಲೇ ಗಾರ್ಡ್ನರ್ ನೇತೃತ್ವದ ಗುಜರಾತ್ ಟೈಟಾನ್ಸ್ ತಂಡವು ಆರ್‌ಸಿಬಿ ವಿರುದ್ಧ ತಮ್ಮ ಟೂರ್ನಮೆಂಟ್‌ನ ಆರಂಭಿಕ ಪಂದ್ಯದಲ್ಲಿ ಬೃಹತ್ ಮೊತ್ತ ಕಲೆಹಾಕಿಯೂ ಸೋತಿತು. ಇದೀಗ ಆರ್‌ಸಿಬಿಯನ್ನು ಎರಡನೇ ಬಾರಿಗೆ ಎದುರಿಸುತ್ತಿರುವ ಗುಜರಾತ್ ಮೊದಲ ಪಂದ್ಯದ ಸೋಲಿಗೆ ಸೇಡು ತೀರಿಸಿಕೊಳ್ಳುವ ತವಕದಲ್ಲಿದೆ. ಟೂರ್ನಿಯಲ್ಲಿ ಇಲ್ಲಿಯವರೆಗೆ ನಾಲ್ಕು ಪಂದ್ಯಗಳನ್ನಾಡಿರುವ ಗುಜರಾತ್ ಕೇವಲ ಒಂದು ಪಂದ್ಯವನ್ನು ಮಾತ್ರ ಗೆದ್ದಿದೆ. ತನ್ನ ಎರಡನೇ ಗುಂಪು ಹಂತ ದ ಪಂದ್ಯದಲ್ಲಿ ಯುಪಿ ವಾರಿಯರ್ಸ್ ತಂಡವನ್ನು ಸೋಲಿಸಿದ್ದ ಗುಜರಾತ್, ಬಳಿಕ ಮುಂಬೈ ಇಂಡಿಯನ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸೋಲನುಭವಿಸಬೇಕಾಯಿತು. ಹೀಗಾಗಿ ಟೂರ್ನಿಯಲ್ಲಿ ಉಳಿಯಲು ಉಭಯ ತಂಡಗಳಿಗೂ ಇದು ಮಹತ್ವದ ಪಂದ್ಯವಾಗಿದೆ. ಸತತ ಎರಡು ಸೋಲುಗಳಿಂದ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಾರಿರುವ ಆರ್‌ಸಿಬಿ, ಈ ಪಂದ್ಯವನ್ನು ಗೆದ್ದು ಮತ್ತೆ ಮೊದಲ ಸ್ಥಾನಕ್ಕೇರುವ ಅವಕಾಶ ಪಡೆದಿದೆ. ಹಾಗೆಯೇ ಸೆಮಿಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳಲು ಆರ್‌ಸಿಬಿಗೆ ಈ ಪಂದ್ಯ ಬಹಳ ಮುಖ್ಯವಾಗಿದೆ.



**ಟೈಟಾನ್ಸ್ ತಂಡವು ಆರ್‌ಸಿಬಿ ವಿರುದ್ಧ ಬೃಹತ್ ಮೊತ್ತ**

### ಸತತ 2 ಸೋಲು

**ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತನ್ನ ಮೂರನೇ ಪಂದ್ಯವನ್ನಾಡುತ್ತಿರುವ ಹಾಲಿ ಚಾಂಪಿಯನ್ ಆರ್‌ಸಿಬಿ ಈ ಟೂರ್ನಿಯಲ್ಲಿ ಇದುವರೆಗೆ ಆಡಿದ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಜಯ ಸಾಧಿಸಿದೆ. ಟೂರ್ನಮೆಂಟ್‌ನ ಆರಂಭಿಕ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿದ್ದ ಆರ್‌ಸಿಬಿ, ಆ ನಂತರ ತನ್ನ ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿತ್ತು. ಆದರೆ ತನ್ನ ಕೊನೆಯ ಎರಡು ಪಂದ್ಯಗಳಲ್ಲಿ ಮುಂಬೈ ಮತ್ತು ಯುಪಿ ವಾರಿಯರ್ಸ್ ವಿರುದ್ಧ ತಂಡ ಸೋಲನುಭವಿಸಬೇಕಾಯಿತು.**

# 25 ಬೌಂಡರಿಗಳ ಸಹಿತ 128 ರನ್

ಫಿಟ್ನೆಸ್ ಕೊರತೆ, ಕಳಪೆ ಫಾರ್ಮ್‌ನಿಂದಾಗಿ ವೃತ್ತಿಜೀವನ ಅಂತ್ಯವಾಗುವ ಆತಂಕದಲ್ಲಿರುವ ಟೀಂ ಇಂಡಿಯಾದ ಯುವ ಕ್ರಿಕೆಟಿಗ ಪೃಥ್ವಿ ಶಾ ಇದೀಗ ದೇಶಿ ಟೂರ್ನಿಯತ್ತ ಮುಖಮಾಡಿದ್ದಾರೆ. ವಾಸ್ತವವಾಗಿ ಇದೇ ಫಾರ್ಮ್ ಹಾಗೂ ಫಿಟ್ನೆಸ್ ಕೊರತೆಯಿಂದಾಗಿ ಪೃಥ್ವಿಗೆ ರಣಜಿ ಟ್ರೋಫಿ ಮತ್ತು ವಿಜಯ್ ಹಜಾರೆ ಟ್ರೋಫಿಯಲ್ಲಿ ಆಡುವ ಅವಕಾಶ ಸಿಕ್ಕಿರಲಿಲ್ಲ. ಆದರೆ ಈಗ ಪೃಥ್ವಿ ಶಾ ಪ್ರಸ್ತುತ ಡಿವೈ ಪಾಟೀಲ್ ಟಿ20 ಲೀಗ್‌ನಲ್ಲಿ ಆಡುತ್ತಿದ್ದು, ಆಡಿರುವ ಎರಡು ಪಂದ್ಯಗಳಲ್ಲಿ ಸ್ಫೋಟಕ ಅರ್ಧ ಶತಕದ ಇನ್ನಿಂಗ್ಸ್ ಆಡಿ ದ್ದಾರೆ. ಪೃಥ್ವಿ ಆಡಿರುವ 2 ಪಂದ್ಯಗಳಲ್ಲಿ 200 ಕ್ಕಿಂತ ಹೆಚ್ಚಿನ ಸ್ಟ್ರೈಕ್ ರೇಟ್‌ನಲ್ಲಿ 2 ಸಿಕ್ಸರ್ ಮತ್ತು 25 ಬೌಂಡರಿಗಳ ಸಹಿತ 128 ರನ್ ಗಳಿಸಿದ್ದಾರೆ. 12 ಬೌಂಡರಿಗಳ ಸಹಿತ 63 ರನ್ ಡಿವೈ ಪಾಟೀಲ್ ಟಿ20 ಲೀಗ್‌ನಲ್ಲಿ ಟಾಟಾ ತಂಡದ ವಿರುದ್ಧದ ಮೊದಲ ಪಂದ್ಯದಲ್ಲಿ 208 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಪೃಥ್ವಿ ಶಾ, ನಾಯಕತ್ವದ ಇನ್ನಿಂಗ್ಸ್ ಆಡಿ ಕೇವಲ 36 ಎಸೆತಗಳಲ್ಲಿ 12 ಬೌಂಡರಿಗಳ ಸಹಿತ 63 ರನ್ ಬಾರಿಸಿದ್ದರು. ಪೃಥ್ವಿ ಹೊರತುಪಡಿಸಿ, ಅಥರ್ವ ಕೇಲ್ ಕೂಡ 14 ಬೌಂಡರಿ ಮತ್ತು 2 ಸಿಕ್ಸರ್‌ಗಳ ಸಹಿತ ಅಜೇಯ 94 ರನ್ ಕಲೆಹಾಕಿದ್ದರು. ಪೃಥ್ವಿ ಶಾ ಇತ್ತೀಚಿನ ದಿನಗಳಲ್ಲಿ ತಮ್ಮ ಫಿಟ್ನೆಸ್ ಮೇಲೆ ಸಾಕಷ್ಟು ಕೆಲಸ ಮಾಡಿದ್ದಾರೆ. ಅವರು ತುಂಬಾ ತೂಕ ಇಳಿಸಿಕೊಂಡಿದ್ದಾರೆ. ಪ್ರಸ್ತುತ, ಶಾ ಅವರಿಗೆ ಐಪಿಎಲ್ 2025 ರ ಯಾವುದೇ ತಂಡದಲ್ಲಿ ಸ್ಥಾನ ಸಿಕ್ಕಿಲ್ಲ ಆದರೆ ಪಂದ್ಯಾವಳಿಯ ಮಧ್ಯದಲ್ಲಿ ಅವರಿಗೆ ಬದಲಿಯಾಗಿ ಅವಕಾಶ ಸಿಗಬಹುದು. ಪೃಥ್ವಿ ಶಾ ಉತ್ತಮ ಇನ್ನಿಂಗ್ಸ್ ನಿರಂತರವಾಗಿ ಆಡುವ ಮೂಲಕ ತಂಡಗಳ ಬಾಗಿಲು ತಟ್ಟುತ್ತಲೇ ಇರಬೇಕು.




**ತಂಡದಿಂದ ಹೊರಬಿದ್ದ ಬಳಿಕ ಬುದ್ದಿ ಕಲಿತ ಪೃಥ್ವಿ ಶಾ**

### 25 ಎಸೆತಗಳಲ್ಲಿ ಅಜೇಯ 65 ರನ್

**ಆ ಬಳಿಕ ನಡೆದ ಟೆಕ್ ಸ್ಪೋರ್ಟ್ಸ್ ತಂಡದ ವಿರುದ್ಧದ ಎರಡನೇ ಪಂದ್ಯದಲ್ಲೂ ಪೃಥ್ವಿ ಶಾ ಅದ್ಭುತ ಇನ್ನಿಂಗ್ಸ್ ಆಡಿದರು. ಈ ಬಾರಿ ಅವರು 25 ಎಸೆತಗಳಲ್ಲಿ ಅಜೇಯ 65 ರನ್‌ಗಳಿಸಿದರು. ಶಾ ತಮ್ಮ ಇನ್ನಿಂಗ್ಸ್‌ನಲ್ಲಿ 13 ಬೌಂಡರಿ ಮತ್ತು 2 ಸಿಕ್ಸರ್‌ಗಳನ್ನು ಬಾರಿಸಿದರು. ಕೇವಲ 27 ನಿಮಿಷಗಳ ಬ್ಯಾಟಿಂಗ್ ನಲ್ಲಿ ಅವರು 65 ರನ್‌ಗಳಲ್ಲಿ 64 ರನ್‌ಗಳನ್ನು ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕ ಗಳಿಸಿದರು.**


# ಭಾರತ- ಪಾಕಿಸ್ತಾನ ನಡುವೆ ನಡೆಯಲ್ಲಿವೆ 3 ಪಂದ್ಯಗಳು



ಚಾಂಪಿಯನ್ಸ್ ಟ್ರೋಫಿಯಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ನಡುವಿನ ಮುಖಾಮುಖಿಯಲ್ಲಿ ನಿರೀಕ್ಷೆಯಂತೆ, ಟೀಂ ಇಂಡಿಯಾ ಗೆದ್ದಿದೆ. ಆದರೆ ಪಾಕಿಸ್ತಾನ ಮಾತ್ರ ಟೂರ್ನಿಯಲ್ಲಿ ಕಳಪೆ ಪ್ರದರ್ಶನ ನೀಡಿ ಲೀಗ್ ಹಂತದಲ್ಲೇ ತನ್ನ ಪ್ರಯಾಣ ಮುಗಿಸಿದೆ. ಹೀಗಾಗಿ ಇದೇ ಟೂರ್ನಿಯಲ್ಲಿ ಭಾರತ- ಪಾಕ್ ನಡುವಿನ ಮತ್ತೊಂದು ಮುಖಾಮುಖಿಯನ್ನು ಎದುರು ನೋಡುತ್ತಿದ್ದ ಅಭಿಮಾನಿಗಳಿಗೆ ಭಾರಿ ನಿರಾಸೆಯಾಗಿದೆ. ಆದರೆ ಅಭಿಮಾನಿಗಳು ಸಂತಸ ಪಡುವ ಮತ್ತೊಂದು ಸುದ್ದಿಯಿದ್ದು, ಮುಂದಿನ ಕೆಲವು ತಿಂಗಳುಗಳಲ್ಲಿ ಎರಡೂ ದೇಶಗಳ ಕ್ರಿಕೆಟ್ ತಂಡಗಳು ಮತ್ತೆ ಮುಖಾಮುಖಿಯಾಗಲಿವೆ. ಚಾಂಪಿಯನ್ಸ್ ಟ್ರೋಫಿಯ ನಂತರ, ಈ ವರ್ಷ ಏಷ್ಯಾಕಪ್ ಆಯೋಜಿಸಲಾಗುತ್ತಿದ್ದು, ಇದರಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಕನಿಷ್ಠ 3 ಪಂದ್ಯಗಳು ನಡೆಯುವ ನಿರೀಕ್ಷೆಯಿದೆ. ಕ್ರಿಕ್‌ಬಜ್ ವರದಿಯ ಪ್ರಕಾರ, ಸೆಪ್ಟೆಂಬರ್‌ನಲ್ಲಿ ಏಷ್ಯಾಕಪ್ ಪಂದ್ಯಾವಳಿಯನ್ನು ನಡೆಸಲು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. 8 ತಂಡಗಳ ಈ ಪಂದ್ಯಾವಳಿಯು ಸೆಪ್ಟೆಂಬರ್ ಎರಡನೇ ವಾರದಿಂದ ನಾಲ್ಕನೇ ವಾರದವರೆಗೆ ನಡೆಯಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಆ ಪ್ರಕಾರ ಈ ಹೈವೋಲ್ಟೇಜ್ ಕದನದಲ್ಲಿ ಟೀಂ ಇಂಡಿಯಾ ಮತ್ತು ಪಾಕಿಸ್ತಾನ ಮುಖಾಮುಖಿಯಾಗಲಿವೆ.

**ಭಾರತ-ಪಾಕ್ ನಡುವೆ 3 ಪಂದ್ಯಗಳು:** 2026 ರಲ್ಲಿ ನಡೆಯಲಿರುವ ಟಿ 20 ವಿಶ್ವಕಪ್ ಅನ್ನು ಗಮನದಲ್ಲಿಟ್ಟುಕೊಂಡು, ಈ ಬಾರಿ ಏಷ್ಯಾಕಪ್ ಅನ್ನು ಸಹ ಅದೇ ಸ್ವರೂಪದಲ್ಲಿ ಆಡಲಾಗುವುದು.

# ಸೀರಿಯಲ್ ಟಿಆರ್‌ಪಿಯಲ್ಲಿ ಈ ಧಾರಾವಾಹಿಯೇ ನಂಬರ್ 1



ಸೀರಿಯಲ್ ಟಿಆರ್‌ಪಿ ಲೆಕ್ಕಾಚಾರ ವಾರದಿಂದ ವಾರಕ್ಕೆ ಬದಲಾವಣೆ ಕಾಣುತ್ತಲೇ ಇರುತ್ತವೆ. ಈ ಪೈಕಿ ಕೆಲವು ಯಶಸ್ಸು ಕಂಡರೆ ಇನ್ನೂ ಕೆಲವು ಫ್ಲಾಪ್ ಎನಿಸಿಕೊಂಡ ಉದಾಹರಣೆ ಇದೆ. ಈಗ ಸೀರಿಯಲ್ ಟಿಆರ್‌ಪಿಯ ಲೆಕ್ಕಾಚಾರ ಹೊರ ಬಿದ್ದಿದೆ. ಈ ಬಾರಿ ಹೊಸ ಧಾರಾವಾಹಿಗೆ ಮೊದಲ ಸ್ಥಾನ ಸಿಕ್ಕಿದೆ. ಈ ಮೂಲಕ ಎಲ್ಲಾ ಧಾಖಲೆಗಳು ಧೂಳಿಪಟ ಆಗಿದೆ. ಧಾರಾವಾಹಿ ಪ್ರಸಾರ ಆರಂಭಿಸಿದ ಬಳಿಕೆ ಕೆಲವೇ ವಾರಗಳಲ್ಲಿ ಧಾರಾವಾಹಿಯಲ್ಲಿ ಧಮ್ ಇದೆಯೋ ಅಥವಾ ಇಲ್ಲವೋ ಎಂಬುದು ಗೊತ್ತಾಗಿಬಿಡುತ್ತದೆ. ಈ ಆಧಾರದ ಮೇಲೆ ಟಿಆರ್‌ಪಿ ನಿರ್ಧಾರ ಆಗುತ್ತದೆ. ಈಗ ಧಾರಾವಾಹಿ ರೇಸ್‌ನಲ್ಲಿ ಇತ್ತೀಚೆಗೆ ಪ್ರಸಾರ ಆರಂಭಿಸಿದ 'ನಾ ನಿನ್ನ ಬಿಡಲಾರೆ' ಧಾರಾವಾಹಿ ಮೊದಲ ಸ್ಥಾನ ಪಡೆದುಕೊಂಡಿದೆ. ಈ ಧಾರಾವಾಹಿ ಕೇವಲ 22 ಎಪಿಸೋಡ್‌ಗಳನ್ನು ಪೂರ್ಣಗೊಳಿಸಿದ್ದು, ಪ್ರೇಕ್ಷಕರಿಗೆ ಇಷ್ಟ ಆಗುತ್ತಿದೆ.ಈ ಧಾರಾವಾಹಿ ಯಶಸ್ಸು ಕಾಣಲು ಒಂದು ಕಾರಣವೂ ಇದೆ. ಈ ಧಾರಾವಾಹಿಯಲ್ಲಿ ವೀಣಾ ಸುಂದರ್ ವಿಲನ್ ಪಾತ್ರ ಮಾಡಿದ್ದಾರೆ. ಮಾಟ-ಮಂತ್ರದ ಕಥೆ ಇದೆ. ಕಥೆಯ ನಿರೂಪಣೆ, ಗ್ರಾಫಿಕ್ಸ್ ಕೂಡ ಉತ್ತಮ ಗುಣಮಟ್ಟ ಹೊಂದಿದೆ. ಈ ಕಾರಣಕ್ಕೆ ಧಾರಾವಾಹಿ ನಂಬರ್ 1 ಸ್ಥಾನ ಪಡೆದುಕೊಂಡಿದೆ ಎಂಬ ಮಾತು ಕೇಳಿ ಬಂದಿದೆ. ಎರಡನೇ ಸ್ಥಾನದಲ್ಲಿ 'ಶ್ರಾವಣಿ ಸುಬ್ರಮಣ್ಯ' ಧಾರಾವಾಹಿ ಇದೆ. 'ಲಕ್ಷ್ಮೀ ನಿವಾಸ' ಟಿಆರ್‌ಪಿ ರೇಸ್‌ನಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ನಾಲ್ಕನೇ ಸ್ಥಾನದಲ್ಲಿ 'ಅಮೃತಧಾರೆ' ಧಾರಾವಾಹಿ ಇದೆ.



# ಪತ್ನಿ ಸೂರ್ಯ ಬಗ್ಗೆ ಕೀಳು ಕಮೆಂಟ್ ನೋಡಿ ನಕ್ಕ ಪತ್ನಿ

**ಬುದ್ಧಿ ಹೇಳಿದ ಜನ**

ಕಾಲಿವುಡ್ ನಟಿ ಜ್ಯೋತಿಕಾ ಅವರು ಈಗ ಸಿನಿಮಾಗಳ ಆಯ್ಕೆಯಲ್ಲಿ ತುಂಬ ಚ್ಯೂಸಿ ಆಗಿದ್ದಾರೆ. ಅವರ ಪತಿ ಸೂರ್ಯ ಸಿಕ್ಕಾಪಟ್ಟೆ ಬ್ಯುಸಿ ಆಗಿದ್ದಾರೆ. ಸೂರ್ಯ ಬ್ಯಾಕ್ ಟು ಬ್ಯಾಕ್ ಸಿನಿಮಾ ಮಾಡುತ್ತಾ ಅಭಿಮಾನಿಗಳನ್ನು ರಂಜಿಸುತ್ತಿದ್ದಾರೆ. ಈ ನಡುವೆ ಜ್ಯೋತಿಕಾ ಮತ್ತು ಸೂರ್ಯ ನಡುವೆ ಏನೋ ಕಿರಿಕ್ ಶುರುವಾಗಿದೆಯಾ ಎಂಬ ಪ್ರಶ್ನೆ ಮೂಡಿದೆ. ಅದಕ್ಕೆ ಕಾರಣ ಆಗಿರುವುದು ಜ್ಯೋತಿಕಾ ಅವರ ವರ್ತನೆ. ಸೋಶಿಯಲ್ ಮೀಡಿಯಾದಲ್ಲಿ ಗಂಡನ ಬಗ್ಗೆ ಬಂದಿರುವ ಕೀಳುಮಟ್ಟಕ್ಕೆ ಕಮೆಂಟ್ ನೋಡಿ ಜ್ಯೋತಿಕಾ ನಕ್ಕಿದ್ದಾರೆ. ನೆಟ್ ಫ್ಲಿಕ್ಸ್ ನಲ್ಲಿ ಜ್ಯೋತಿಕಾ ಅವರ ಹೊಸ ಸಿನಿಮಾ ಬರುತ್ತಿದೆ. ಈ ಪ್ರಯುಕ್ತ ಅವರು ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿದ್ದಾರೆ. ಇದಕ್ಕೆ ಕಮೆಂಟ್ ಮಾಡಿದ ನೆಟ್ಟಿಗರು ಜ್ಯೋತಿಕಾ ಪತಿ ಸೂರ್ಯ ಕುಟುಂಬವನ್ನು ಟಾರ್ಗೆಟ್ ಮಾಡಿದ್ದಾರೆ. 'ನಿಮ್ಮ ಗಂಡನಿಗಿಂತ ದಳಪತಿ ವಿಜಯ್ ಉತ್ತಮ' ಎಂಬ ಕಮೆಂಟ್ ಬಂದಿದೆ. 'ಸೂರ್ಯ ಮತ್ತು ಕಾರ್ತಿಗಿಂತಲೂ ಬೇರೆ ನಟರೇ ಉತ್ತಮವಾಗಿದ್ದಾರೆ' ಎಂದು ಕೂಡ ಕೆಲವರು ಕಮೆಂಟ್ ಮಾಡಿದ್ದಾರೆ. ಈ ನೆಗೆಟಿವ್ ಕಮೆಂಟ್ ನೋಡಿ ಜ್ಯೋತಿಕಾ ಅವರು ಸುಮ್ಮನೆ ಇರಬಹುದಿತ್ತು. ಆದರೆ ಅವರು ಒಂದು ಎಡವಟ್ಟು ಮಾಡಿಕೊಂಡಿದ್ದಾರೆ. ಆ ಕಮೆಂಟ್ ಗೆ ಪ್ರತಿಕ್ರಿಯೆಯಾಗಿ ಕಿಸಿಕಿಸಿ ನಗುವ ಎಮೋಜಿಯನ್ನು ಹಾಕಿದ್ದಾರೆ. ಇದನ್ನು ನೋಡಿದ ಸೂರ್ಯ ಅಭಿಮಾನಿಗಳಿಗೆ ಬೇಸರ ಆಗಿದೆ. ಗಂಡನ ಬಗ್ಗೆ ಇರುವ ಟ್ರೋಲ್ ಗೆ ಪತ್ನಿಯೇ ಈ ರೀತಿ ಪ್ರತಿಕ್ರಿಯಿಸಿದ್ದು ಸರಿಯಲ್ಲ ಎಂದು ಫ್ಯಾನ್ಸ್ ಅಭಿಪ್ರಾಯ ತಿಳಿಸಿದ್ದಾರೆ. ಒಂದೇ ಒಂದು ವಿಡಿಯೋದಿಂದ ವಿಚ್ಛೇದನ ವದಂತಿಗೆ ಬ್ರೇಕ್ ಹಾಕಿದ ಜ್ಯೋತಿಕಾ-ಸೂರ್ಯ ಸೋಶಿಯಲ್ ಮೀಡಿಯಾದಲ್ಲಿ ಯಾವಾಗಲೂ ಫ್ಯಾನ್ಸ್ ವಾರ್ ನಡೆಯುತ್ತಲೇ ಇರುತ್ತವೆ. ಅದನ್ನು ತಪ್ಪಿಸಲು ಸೆಲೆಬ್ರಿಟಿಗಳು ಪ್ರಯತ್ನಿಸಬೇಕು. ಜ್ಯೋತಿಕಾ ಇಂಥ ಕಮೆಂಟ್‌ಗಳಿಗೆ ನಕ್ಕು ಎಂಜಾಯ್ ಮಾಡುತ್ತಿದ್ದಾರೆ ಎಂಬುದು ನಿಜವಾದರೆ ಫ್ಯಾನ್ಸ್ ವಾರ್ ಗೆ ಅವರೇ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ ಎಂಬುದು ಕೆಲವರ ವಾದ. ಹಾಗಾಗಿ ಜ್ಯೋತಿಕಾಗೆ ಕೆಲವರು ಬುದ್ಧಿ ಹೇಳಿದ್ದಾರೆ. 'ದಯವಿಟ್ಟು ಹೀಗೆಲ್ಲ ಮಾಡಬೇಡಿ' ಎಂದು ಅನೇಕರು ಕ್ಲಾಸ್ ತೆಗೆದುಕೊಂಡಿದ್ದಾರೆ. ಇದರ ಪರಿಣಾಮವಾಗಿ ಜ್ಯೋತಿಕಾ ಅವರು ತಮ್ಮ ಕಮೆಂಟ್ ಡಿಲೀಟ್ ಮಾಡಿದ್ದಾರೆ. ಈ ಬಗ್ಗೆ ಸೂರ್ಯ ಅವರು ಯಾವ ರೀತಿ ಪ್ರತಿಕ್ರಿಯೆ ನೀಡಬಹುದು ಅಂತ ಫ್ಯಾನ್ಸ್ ಕುತೂಹಲದಿಂದ ಕಾಯುತ್ತಿದ್ದಾರೆ.

# ಖಿನ್ನತೆಯಿಂದ ಜೀವನವೇ ಬೇಡ ಎಂದುಕೊಂಡಿದ್ದ ನಟಿ ಈಗ ಬದುಕುತ್ತಿರುವ ರೀತಿ ನೋಡಿ

ಸೆಲೆಬ್ರಿಟಿಗಳ ಜೀವನ ಒಂದು ಹಂತಕ್ಕೆ ಹೋದ ಬಳಿಕ ಎಲ್ಲಾವೂ ಐಷಾರಾಮಿ ಆಗಿ ಬಿಡುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಪ್ರಿಯಾಂಕಾ ಚೋಪ್ರಾ. ಬಾಲಿವುಡ್‌ನಲ್ಲಿ ಡಾನ್', ಫ್ಯಾಷನ್', ಮೇರಿ ಕೋಮ್' ರೀತಿಯ ಹಿಟ್ ಚಿತ್ರಗಳನ್ನು ನೀಡಿದ ಖ್ಯಾತಿ ಪ್ರಿಯಾಂಕಾಗೆ ಇದೆ. ಅವರು ಅಭಿಮಾನಿಗಳನ್ನು ರಂಜಿಸೋ ಕೆಲಸ ಮುಂದುವರಿಸಿದ್ದಾರೆ. ಅವರ ಬದುಕು ಕೂಡ ಬದಲಾಗಿದೆ. ಅವರು ಐಷಾರಾಮಿಯಲ್ಲೇ ಐಷಾರಾಮಿ ಜೀವನ ನಡೆಸುತ್ತಿದ್ದಾರೆ.


ಪ್ರಿಯಾಂಕಾ ಚೋಪ್ರಾ ಒಟ್ಟೂ ಆಸ್ತಿ ನೂರಾರು ಕೋಟಿ ರೂಪಾಯಿ ಇದೆ. ಕಷ್ಟಪಟ್ಟು ಅವರು ಗಳಿಕೆಯನ್ನು ಮಾಡಿದ್ದಾರೆ. ಪ್ರಿಯಾಂಕಾ ಚೋಪ್ರಾ ಅವರು ಪ್ರತಿ ಚಿತ್ರಕ್ಕೆ ದೊಡ್ಡ ಮೊತ್ತದ ಸಂಭಾವನೆ ಪಡೆಯುತ್ತಾರೆ. ಈ ಹಣವನ್ನು ಹೂಡಿಕೆ ಮಾಡುತ್ತಾರೆ. ಇದರ ಜೊತೆಗೆ ಒಂದಷ್ಟು ಹಣವನ್ನು ಅವರು ಆಭರಣಗಳ ಖರೀದಿಗೆ ಬಳಕೆ ಮಾಡುತ್ತಾರೆ. ದುಬಾರಿ ಜ್ಯುವೆಲರಿ ಹಾಗೂ ಬಟ್ಟೆಗಳನ್ನು ಪ್ರಿಯಾಂಕಾ ಖರೀದಿ ಮಾಡುತ್ತಾರೆ. 2016ರಲ್ಲಿ ಪ್ರಿಯಾಂಕಾ ಚೋಪ್ರಾ ಅವರು ಬರೋಬ್ಬರಿ 21.75 ಕೋಟಿ ರೂಪಾಯಿ ಬೆಲೆಯ ಕಿವಿಯೋಲೆ ತೊಟ್ಟಿದ್ದರು. ಆಸ್ಕರ್ ವೇದಿಕೆ ಮೇಲೆ ಅವರು ಆಭರಣಗಳನ್ನು ತೊಟ್ಟು ಗಮನ ಸೆಳೆದಿದ್ದರು.

50 ಕ್ಯಾರಟ್ ಡೈಮಂಡ್ ಗಳಿಂದ ಇವುಗಳನ್ನು ಮಾಡಲಾಗಿತ್ತು. ಅನ್ನೋದು ವಿಶೇಷ. ಕಾರ್ಯಕ್ರಮ ಒಂದರಲ್ಲಿ ಪ್ರಿಯಾಂಕಾ ಚೋಪ್ರಾ ಅವರು ಬರೋಬ್ಬರಿ 72 ಕೋಟಿ ರೂಪಾಯಿ ಬೆಲೆಯ ಗೌನ್ ಧರಿಸಿ ಗಮನ ಸೆಳೆದಿದ್ದರು. ಮೆಟ್ ಗಲಾ ಈವೆಂಟ್‌ನಲ್ಲಿ ಪ್ರಿಯಾಂಕಾ ಚೋಪ್ರಾ ಆಗಾಗ ಕಾಣಿಸಿಕೊಳ್ಳುತ್ತಾರೆ. ಈ ವೇಳೆ ಅವರು 45 ಲಕ್ಷ ರೂ. ಬೆಲೆಯ ಉಡುಗೆ ತೊಟ್ಟಿದ್ದರು. ಪ್ರಿಯಾಂಕಾ ಚೋಪ್ರಾ, ನಿಕ್ ಜೋನಸ್ 2018ರಲ್ಲಿ ನಿಶ್ಚಿತಾರ್ಥ ಮಾಡಿಕೊಂಡರು.



# ರಾಜಮೌಳಿ ಮೇಲೆ ಗಂಭೀರ ಆರೋಪ

ಭಾರತೀಯ ಸಿನಿಮಾ ರಂಗದ ಖ್ಯಾತ ನಿರ್ದೇಶಕ ಎಸ್.ಎಸ್ ರಾಜಮೌಳಿಮೇಲೆ ಗಂಭೀರ ಆರೋಪ ಮಾಡಿ, ಆತ್ಮಹತ್ಯೆಗೆ ಶರಣಾಗಿದ್ದಾರೆ ಖ್ಯಾತ ನಿರ್ಮಾಪಕ ಶ್ರೀನಿವಾಸ್ ರಾವ್. ಜ್ಯೂನಿಯರ್ ಎನ್.ಟಿ.ಆರ್ ನಟನೆಯ ಯಮದೊಂಗ ಸಿನಿಮಾವನ್ನು ಶ್ರೀನಿವಾಸ್ ರಾವ್ ನಿರ್ಮಾಣ ಮಾಡಿದ್ದರು.ಎಸ್.ಎಸ್ ರಾಜಮೌಳಿಯ ಆತ್ಮೀಯ ಸ್ನೇಹಿತನೂ ಆಗಿದ್ದ ಶ್ರೀನಿವಾಸ್ ರಾವ್ ಡೆತ್ ನೋಟ್ ಮತ್ತು ಸಾಯುವ ಮುನ್ನ ವಿಡಿಯೋವೊಂದನ್ನು ಮಾಡಿ, ತನ್ನ ಸಾವಿಗೆ ರಾಜಮೌಳಿ ಮತ್ತು ಅವರ ಪತ್ನಿ ರಮಾ ಕಾರಣ ಅಂತ ಹೇಳಿಕೊಂಡಿದ್ದಾರೆ. ಜೊತೆಗೆ ರಾಜಮೌಳಿ ಮತ್ತು ತನ್ನ ನಡುವಿನ ಲವ್ ಸ್ಟೋರಿಯನ್ನು ಶ್ರೀನಿವಾಸ್ ಹಂಚಿಕೊಂಡಿದ್ದಾರೆ. ರಾಜಮೌಳಿ ಮತ್ತು ನಾನು ಒಂದೇ ಹುಡುಗಿಯನ್ನು ಪ್ರೀತಿಸುತ್ತಿದ್ದೆವು. ಆ ಹುಡುಗಿಯನ್ನು ರಾಜಮೌಳಿ ತ್ಯಾಗ ಮಾಡುವಂತೆ ನನಗೆ ಹೇಳಿದ. ಹಾಗಾಗಿ ನಾನು ಆ ಹುಡುಗಿಯನ್ನು ರಾಜಮೌಳಿಗೆ ಬಿಟ್ಟು ಕೊಟ್ಟೆ. ಅಲ್ಲಿಂದ ನಾನು ಮದುವೆ ಆಗಿಲ್ಲ. ರಾಜಮೌಳಿಗೂ ನನಗೂ 34 ವರ್ಷದ ಸ್ನೇಹ. ಇತ್ತೀಚೆಗೆ ಸಣ್ಣ ಮನಸ್ತಾಪ ಆಯಿತು. ನಾನು ನಮ್ಮ ಲವ್ ಸ್ಟೋರಿಯನ್ನು ಸಿನಿಮಾ ಮಾಡೋದಾಗಿ ಹೇಳಿದೆ. ಅಲ್ಲಿಂದ ರಾಜಮೌಳಿ ನಿರಂತರವಾಗಿ ನನಗೆ ಟಾರ್ಚರ್ ಮಾಡಲು ಶುರು ಮಾಡಿದ ಅಂತ ಡೆತ್ ನೋಟ್‌ನಲ್ಲಿ ಶ್ರೀನಿವಾಸ್ ರಾವ್ ಬರೆದಿದ್ದಾರೆ. ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ರಾಜಮೌಳಿ ವಿರುದ್ಧ ಕ್ರಮ ತಗೆದುಕೊಳ್ಳುವಂತೆ ಡೆತ್ ನೋಟ್ ನಲ್ಲಿ ಉಲ್ಲೇಖ ಮಾಡಲಾಗಿದೆ.



ಸಿನಿ ವಾಹಿನಿ

# ಬಿಡುಗಡೆ ಆಗುತ್ತಿದೆ ರಶ್ಮಿಕಾ ಮಂದಣ್ಣ ನಟನೆಯ ಮತ್ತೊಂದು ಸಿನಿಮಾ, ನಿರೀಕ್ಷೆ ದುಪ್ಪಟ್ಟು

ಕೊಡಗಿನ ಚೆಲುವೆ ರಶ್ಮಿಕಾ ಮಂದಣ್ಣ ಮುಟ್ಟಿಗೆದ್ದಲ್ಲ ಚಿನ್ನವಾಗುತ್ತಿದೆ. ರಶ್ಮಿಕಾ ಮಂದಣ್ಣ ನಟಿಸಿ, ಬಿಡುಗಡೆ ಆಗಿರುವ ಕಳೆದ ಮೂರು ಸಿನಿಮಾಗಳು ಸಹ ಬ್ಲಾಕ್ ಬಸ್ಟರ್ ಆಗಿವೆ. ಮೊದಲಿಗೆ ಬಿಡುಗಡೆ ಆದ 'ಅನಿಮಲ್' ಸುಮಾರು 1000 ಕೋಟಿ ಗಳಿಕೆ ಮಾಡಿತು. ಅದರ ಬಳಿಕ ಬಿಡುಗಡೆ ಆದ 'ಪುಷ್ಪ 2' ಸಿನಿಮಾ ಸುಮಾರು 2000 ಕೋಟಿ ರೂಪಾಯಿ ಗಳಿಕೆ ಮಾಡಿತು. ಇತ್ತೀಚೆಗೆ ಬಿಡುಗಡೆ ಆದ 'ಛಾವಾ' ಸಿನಿಮಾ ಸಹ 1000 ಕೋಟಿ ಗಳಿಕೆಯತ್ತ ವೇಗದಿಂದ ಮುನ್ನುಗ್ಗುತ್ತಿದೆ. ಇದರ ನಡುವೆ ರಶ್ಮಿಕಾ ನಟನೆಯ ಮತ್ತೊಂದು ಸಿನಿಮಾ ತೆರೆಗೆ ಬರುತ್ತಿದೆ. ರಶ್ಮಿಕಾ ಮಂದಣ್ಣ ನಟನೆಯ ಹೊಸ ತಮಿಳು-ತೆಲುಗು ಸಿನಿಮಾದ ಬಿಡುಗಡೆ ದಿನಾಂಕ ಘೋಷಣೆ ಆಗಿದೆ. ರಶ್ಮಿಕಾ, ತಮಿಳಿನ ಸ್ಟಾರ್ ನಟ ಧನುಶ್ ಜೊತೆಗೆ ಮೊದಲ ಬಾರಿ ನಟಿಸಿರುವ 'ಕುಬೇರ' ಸಿನಿಮಾದ ಬಿಡುಗಡೆ ದಿನಾಂಕ ಘೋಷಣೆ ಆಗಿದೆ. 'ಕುಬೇರ' ಸಿನಿಮಾದಲ್ಲಿ ರಶ್ಮಿಕಾ ಮಂದಣ್ಣ, ಧನುಶ್ ಜೊತೆಗೆ ತೆಲುಗಿನ ಸ್ಟಾರ್ ನಟ ನಾಗಾರ್ಜುನ ಸಹ ನಟಿಸಿದ್ದು, ಈ ಸಿನಿಮಾ ಜೂನ್ 20ಕ್ಕೆ ತೆರೆಗೆ ಬರಲಿದೆ. ರಶ್ಮಿಕಾ, ಧನುಶ್ ನಟಿಸಿರುವ 'ಕುಬೇರ' ಸಿನಿಮಾವನ್ನು ತೆಲುಗು ಚಿತ್ರರಂಗದ ಸ್ಟಾರ್ ನಿರ್ದೇಶಕ ಶೇಖರ್ ಕಮ್ಮುಲ ನಿರ್ದೇಶನ ಮಾಡಿದ್ದಾರೆ. 'ಆನಂದ್', 'ಗೋಧಾವರಿ', 'ಹ್ಯಾಪಿಡೇಸ್', 'ಲೀಡರ್', 'ಫಿದಾ', 'ಲವ್ ಸ್ಟೋರಿ' ಸಿನಿಮಾಗಳನ್ನು ನಿರ್ದೇಶನ ಮಾಡಿರುವ ಇವರು ಇದೀಗ ಮೊದಲ ಬಾರಿಗೆ ದೊಡ್ಡ ಸ್ಟಾರ್ ನಟನ ಸಿನಿಮಾ ಒಂದನ್ನು ನಿರ್ದೇಶನ ಮಾಡುತ್ತಿದ್ದಾರೆ. ಮಾತ್ರವಲ್ಲದೆ ಇದೇ ಮೊದಲ ಬಾರಿಗೆ ಬಹುಭಾಷೆಯಲ್ಲಿ ಸಿನಿಮಾಗಳನ್ನು ನಿರ್ದೇಶಿಸುತ್ತಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966